RNI .KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 109 ಪುಟ: 06 ಬುಧವಾರ 26-03-2025

₹ 3 Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)

Honourary Editor: Venkatesh



ನ್ಯಾಚುರಲ್ ಸ್ಟಾರ್ ಜೊತೆ ಕೆಜಿಎಫ್ ಬೆಡಗಿ

ಯಲ್ಲಮ್ಮ ಸಿನಿಮಾದಿಂದ ಹೊರ ನಡೆದ ಸಾಯಿ ಪಲ್ಲವಿ

ಮಾ.30ಕ್ಕೆ ಸಿಕಂದರ್ ಚಿತ್ರ ಬಿಡುಗಡೆ ಪುಟ 6

# ಹೈ ಅಂಗಳ ತಲುಪಿದ ಹನಿಟ್ರ್ಯಾಪ್

## ರಾಜ್ಯ ನಾಯಕರಿಗೆ ಹೈಕಮಾಂಡ್ ಬುಲಾವ್; ನಾಳೆ ದೆಹಲಿಗೆ ಡಿಸಿಎಂ

**ಬೆಂಗಳೂರು/ ನವದೆಹಲಿ:** ರಾಜ್ಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಕೆಂಡಾಮಂಡಲವಾಗಿರುವ ಕಾಂಗ್ರೆಸ್ ಹೈಕಮಾಂಡ್ ರಾಜ್ಯ ನಾಯಕರಿಗೆ ಕೂಡಲೇ ಬಂದು ಕಾರಣ ನೀಡುವಂತೆ ಫರ್ಮಾನು ಹೊರಡಿಸಿದೆ.

ರಾಜ್ಯದಲ್ಲಿ ಏನು ನಡೆಯುತ್ತಿದೆ, ನಿಜವಾಗಿಯೂ ಹನಿಟ್ರ್ಯಾಪ್ ಸದ್ದು ಮಾಡುತ್ತಿದೆಯೋ ಇಲ್ಲ ಹೈಡ್ರಾಮಾವೇನಾದರೂ ನಡೆಯುತ್ತಿದೆಯೋ ಎಂಬ ಹಂತದಲ್ಲಿ ಹೈಕಮಾಂಡ್ ಸಂಶಯ ವ್ಯಕ್ತಪಡಿಸಿದ್ದು, ಕೂಡಲೇ ಬಂದು ಕಾರಣ ತಿಳಿಸಬೇಕು ಎಂದು ತಾಕೀತು ಮಾಡಿದೆ.

ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆಶಿವಕುಮಾರ್ ಹಾಗೂ ಇದಕ್ಕೆ ಸಂಬಂಧಪಟ್ಟ ಸಚಿವರನ್ನು ದೆಹಲಿಗೆ ಆಗಮಿಸುವಂತೆ ಬುಲಾವ್ ನೀಡಿದೆ.

ನಾಳೆ ಸಚಿವ ಸಂಪುಟ ಸಭೆ ಮುಗಿದ ತತ್‌ಕ್ಷಣವೇ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ದೆಹಲಿಗೆ ತೆರಳಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡ ದೆಹಲಿಗೆ ತೆರಳಬೇಕಾಗಿದ್ದು, ಯುಗಾದಿ ನಂತರ ಏ2ಅಥವಾ 3ರಂದು ಸಿಎಂ ದೆಹಲಿಗೆ ತೆರಳಲಿದ್ದಾರೆ.


ವರಿಷ್ಠರನ್ನು ಭೇಟಿ ಮಾಡಿ, ರಾಜ್ಯದಲ್ಲಿ ನಡೆಯುತ್ತಿರುವ ಬೆಳವಣಿಗೆಗಳ ಬಗ್ಗೆ ಪೂರ್ಣ ಮಾಹಿತಿ ನೀಡಲಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ನಡೆದ ಎಲ್ಲಾ ಬೆಳವಣಿಗೆಗಳ ಪೂರ್ಣ ಮಾಹಿತಿ ಒತ್ತು ಸಿಎಂ ದೆಹಲಿಗೆ ತೆರಳಲಿದ್ದಾರೆ ಎನ್ನಲಾಗುತ್ತಿದ್ದು, ಹನಿಟ್ರ್ಯಾಪ್ ಪ್ರಕರಣದ ವಿವರ ಮತ್ತು ಅದಕ್ಕೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ಕ್ರಮಗಳ ಬಗ್ಗೆಯೂ ಇದೇ ವೇಳೆ ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸಲಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ಸಂಬಂಧ ಹೇಳಿಕೆ ನೀಡಿ ವಿವಾದ ಸೃಷ್ಟಿಸಿದ್ದ ಸತೀಶ್ ಜಾರಕಿಹೊಳಿ ದೆಹಲಿಯಲ್ಲೇ ಬೀಡುಬಿಟ್ಟಿದ್ದು, ಹೈಕಮಾಂಡ್ ನಾಯಕರನ್ನು ಭೇಟಿ ಮಾಡಿ ರಾಜ್ಯದಲ್ಲಿನ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಿದ್ದಾರೆ.

ಈ ವೇಳೆ ಹೈಕಮಾಂಡ್ ನಾಯಕರು ಹನಿಟ್ರ್ಯಾಪ್ ವಿಷಯವನ್ನು ಪ್ರಮುಖವಾಗಿ ಪ್ರಸ್ತಾಪಿಸಿ, ರಾಜ್ಯದಲ್ಲಿ ಏನು ನಡೆಯುತ್ತಿದೆ, ಪಕ್ಷದ ಮಾನ ಹರಾಜು ಹಾಕುತ್ತಿದ್ದಾರೆಯೇ ಎಂದೆಲ್ಲಾ ಪ್ರಶ್ನಿಸಿದ್ದಾರೆ. ಪುಟ 2

## ಮಾಜಿ ಸಿಎಂ ಬಘೇಲ್ ನಿವಾಸದ ಮೇಲೆ ಸಿಬಿಐ ದಾಳಿ, ಪರಿಶೀಲನೆ



**ರಾಯ್ಪುರ್:** ಛತ್ತಿಸ್‌ಗಢದ ಮಾಜಿ ಸಿಎಂ ಹಾಗೂ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಭೂಪೇಶ್ ಬಘೇಲ್ ಅವರ ನಿವಾಸದ ಮೇಲೆ ಕೇಂದ್ರೀಯ ತನಿಖಾ ದಳದ ಅಧಿಕಾರಿಗಳು ಬುಧವಾರ ಬೆಳಗ್ಗೆ ದಾಳಿ ನಡೆಸಿದ್ದು, ಪರಿಶೀಲನೆ ನಡೆಸುತ್ತಿದ್ದಾರೆ.

ರಾಯಪುರ ಮತ್ತು ಭಿಲಾಯಿಯಲ್ಲಿರುವ ಬಘೇಲ್ ಅವರ ನಿವಾಸ ಹಾಗೂ ಹಿರಿಯ ಪೊಲೀಸ್ ಅಧಿಕಾರಿ ಮತ್ತು ಮಾಜಿ ಮುಖ್ಯಮಂತ್ರಿಯ ಆಪ್ತ ಸಹಾಯಕರ ಮನೆಗಳ ಮೇಲೂ ಸಿಬಿಐ ದಾಳಿ ನಡೆಸಿದೆ.

ಅಕ್ರಮ ಮದ್ಯ ಹಗರಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಬಘೇಲ್ ಅವರ ಮನೆಯ ಮೇಲೆ ದಾಳಿ ನಡೆಸಿತ್ತು. ಇದರ ಬೆನ್ನಲ್ಲೇ ಸಿಬಿಐ ಕ್ರಮ ಕೈಗೊಂಡಿದೆ.


ಸಿಬಿಐ ದಾಳಿ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಭೂಪೇಶ್ ಬಘೇಲ್ ಅವರು, ಏಪ್ರಿಲ್ 8 ಮತ್ತು 9 ರಂದು ಅಹಮದಾಬಾದ್ ಪುಟ 2



ಸಂಸತ್ ಭವನದ ಕಚೇರಿಯಲ್ಲಿ ಕೇಂದ್ರ ಸಚಿವ ರಾದ ಎಚ್.ಡಿ. ಕುಮಾರಸ್ವಾಮಿ ಅವರನ್ನು ರಾಜ್ಯದ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ಬುಧವಾರ ಭೇಟಿಯಗಿ ಮಾತುಕತೆ ನಡೆಸಿದರು.

## ನಾನು ಪಕ್ಷದ ಶಿಸ್ತು ಉಲ್ಲಂಘಿಸಿಲ್ಲ

ಬೆಂಗಳೂರು: ನಾನು ಕಾಂಗ್ರೆಸ್‌ನ ಯಾವುದೇ ಕಾರ್ಯಕ್ರಮದಲ್ಲಿ ಪಾಲ್ಗೊಂಡಿಲ್ಲ. ನಾನು ಪಕ್ಷದ ಶಿಸ್ತು ಉಲ್ಲಂಘಿಸಿಲ್ಲ ಎಂದು ಶಾಸಕ ಎಸ್.ಟಿ ಸೋಮಶೇಖರ್ ಸ್ಪಷ್ಟಪಡಿಸಿದ್ದಾರೆ.



ಬಿಜೆಪಿ ಕೇಂದ್ರಿಯ ಶಿಸ್ತು ಸಮಿತಿ ಶೋಕಾಸ್ ನೋಟಿಸ್ ನೀಡಿರುವ ಕುರಿತು ಪ್ರತಿಕ್ರಿಯಿಸಿರುವ ಅವರು, ನಾನು ಬೆಳಗಾವಿಯಲ್ಲಿ ಗಾಂಧಿ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದೆ. ಕ್ಷೇತ್ರಕ್ಕೆ ಸಂಬಂಧಿಸಿದಂತೆ ಎಲ್ಲಾ ಸಚಿವರ ಜೊತ ಮಾತನಾಡುತ್ತೇನೆ. ಡಿಕೆಶಿವಕುಮಾರ್ ಕ್ಷೇತ್ರಕ್ಕೆ ಬಂದರೆ ಭೇಟಿಯಾಗಿದ್ದೇನೆ. ಕಾಂಗ್ರೆಸ್ ನ ಯಾವ ಕಾರ್ಯಕ್ರಮದಲ್ಲೂ ಭಾಗಿಯಾಗಿಲ್ಲ. ಪುಟ 2

## ಇದೇ ಮೊದಲ ಬಾರಿಗೆ 'ಡ್ರಗ್ಸ್ ಸೆನ್ಸಸ್' ಘೋಷಣೆ

**ಚಂಡೀಗಢ(ಪಂಜಾಬ್):** ಪಂಜಾಬ್ ರಾಜ್ಯದ ಹಣಕಾಸು ಸಚಿವ ಹರ್ಪಲ್ ಸಿಂಗ್ ಚೀಮಾ ಅವರು 2.36 ಲಕ್ಷ ಕೋಟಿ ರೂ ಗಾತ್ರದ ಬಜೆಟ್ ಅನ್ನು ಇಂದು ವಿಧಾನಸಭೆಯಲ್ಲಿ ಮಂಡಿಸಿದರು.

ಬಜೆಟ್‌ನಲ್ಲಿ ಮಾದಕ ವ್ಯಸನ ನಿರ್ಮೂಲನೆ ಮಾಡುವ ಗುರಿ ಹೊಂದಿದ್ದು, ಇದೇ ಮೊದಲ ಬಾರಿಗೆ ಡ್ರಗ್ಸ್ ಸೆನ್ಸಸ್ (ಮಾದಕದ್ರವ್ಯ ಜನಗಣತಿ) ನಡೆಸಲಾಗುವುದು ಎಂದು ಘೋಷಿಸಿದರು.

ಬಜೆಟ್ ಭಾಷಣದಲ್ಲಿ ಮಾತನಾಡಿದ ಅವರು, ಎಎಪಿ ನೇತೃತ್ವದ ಪಂಜಾಬ್ ಸರ್ಕಾರ ಮಾದಕ ದ್ರವ್ಯ ವಿರೋಧಿ ಅಭಿಯಾನ ನಡೆಸಲಿದೆ. ಇದರ ಜೊತೆಗೆ ಆರೋಗ್ಯ ಕ್ಷೇತ್ರಕ್ಕೂ ವಿಶೇಷ ಒತ್ತು ನೀಡಲಾಗುವುದು ಎಂದರು.

ಮಾದಕ ವಸ್ತುಗಳ ಹರಡುವಿಕೆ, ವ್ಯಸನಮುಕ್ತ ಕೇಂದ್ರಗಳ ಬಳಕೆ ಇತ್ಯಾದಿಗಳನ್ನು ಅರ್ಥಮಾಡಿಕೊಳ್ಳುವ ಉದ್ದೇಶದಿಂದ ಇದೇ ಮೊದಲ ಬಾರಿಗೆ ಪಂಜಾಬ್ ಸರ್ಕಾರ ರಾಜ್ಯದಲ್ಲಿ ಮಾದಕದ್ರವ್ಯ ಜನಗಣತಿ ನಡೆಸಲಿದೆ ಎಂದು ತಿಳಿಸಿದರು. 2025-26ರ ಹಣಕಾಸು ವರ್ಷಕ್ಕೆ ಸಚಿವ ಚೀಮಾ 2,36,080 ಕೋಟಿ ಮೊತ್ತದ ಬಜೆಟ್ ಮಂಡಿಸಿದರು.



ಇದು ಬದಲಾವಣೆಯ ಪಂಜಾಬ್‌ಗೆ ಮಾರ್ಗಸೂಚಿ ಎಂದು ಅವರು ಹೇಳಿದರು.

ನಮ್ಮ ಸರ್ಕಾರ ಮೊದಲ ಬಾರಿಗೆ ಭಾರತ ಮತ್ತು ಪಾಕ್ ಗಡಿಯಲ್ಲಿ ಎರಡನೇ ಹಂತರ ರಕ್ಷಣೆಗೆ ಮುಂದಾಗುತ್ತಿದೆ. ಗಡಿಯಲ್ಲಿ ಭದ್ರತೆಗೆ ಮತ್ತಷ್ಟು ಒತ್ತು ನೀಡುವ ಸಲುವಾಗಿ ರಾಜ್ಯ ಸರ್ಕಾರ ಬಿಎಸ್‌ಎಫ್ ಜೊತೆಗೆ 5,000 ಗೃಹರಕ್ಷಕರನ್ನು ನಿಯೋಜಿಸಲಿದೆ. ಈ ಯೋಜನೆಯಲ್ಲಿ ಬಡವರು ಅಥವಾ ಶ್ರೀಮಂತರು, ನಗರ ಅಥವಾ ಗ್ರಾಮೀಣ ಎಂಬ ಯಾವುದೇ ತಾರತಮ್ಯವಿಲ್ಲದೇ ಎಲ್ಲರೂ ಪುಟ 2

## ಮಗು ಸಾವು

**ಕಡಬ(ದಕ್ಷಿಣ ಕನ್ನಡ):** ಎರಡೂವರೆ ವರ್ಷದ ಗಂಡು ಮಗು ಮಲಗಿದ್ದಲ್ಲೇ ಮೃತಪಟ್ಟ ಘಟನೆ ಜಿಲ್ಲೆಯ ಕಡಬ ತಾಲ್ಲೂಕಿನ ಕೊಣಾಜೆ ಗ್ರಾಮದಲ್ಲಿ ವರದಿಯಾಗಿದೆ. ದಂಪತಿಯ ಪುತ್ರ ರುದ್ರ ಪ್ರತಾಪ್ ಸಿಂಗ್ (2.5 ವರ್ಷ) ಮೃತಪಟ್ಟಿದ್ದಾನೆ. ಉತ್ತರ ಪ್ರದೇಶದ ರಾಜಾ ಸಿಂಗ್ ಮತ್ತು ದಿವ್ಯಾಂಶಿ ದಂಪತಿ ಕೊಣಾಜೆಯ ಮಾಲ ಎಂಬಲ್ಲಿಗೆ ಬಂದು, ಲಿಂಡೋರಾಜ್ ಎಂಬವರ ತೋಟದಲ್ಲಿ ಕೆಲಸ ಮಾಡುತ್ತಿದ್ದರು. ಮಾರ್ಚ್ 25ರಂದು ಪುಟ 2

## ಸಿಲಿಂಡರ್ ಸ್ಫೋಟ ಮೂವರು ಗಂಭೀರ

**ಬೆಂಗಳೂರು:** ಅಪಾರ್ಟ್‌ಮೆಂಟ್‌ನ ಫ್ಲಾಟ್‌ವೊಂದರಲ್ಲಿ ಸಿಲಿಂಡರ್ ಸ್ಫೋಟಗೊಂಡು ಮೂವರು ಗಂಭೀರವಾಗಿ ಗಾಯಗೊಂಡಿರುವ ಘಟನೆ ಪುಲಿಕೇಶಿ ನಗರದಲ್ಲಿ ಬುಧವಾರ ಮುಂಜಾನೆ ನಡೆದಿದೆ. ನಗರದ ಡೆವೀಸ್ ರಸ್ತೆಯ ವಿಶ್ರಾಂ ಅಪಾರ್ಟ್‌ಮೆಂಟ್‌ನಲ್ಲಿ ಈ ಘಟನೆ ಸಂಭವಿಸಿದ್ದು, ಘಟನೆಯಲ್ಲಿ ಸಿದ್ದೇಶ್, ಸಿಲಿಕಾ ಹಾಗೂ ಮತ್ತೊಬ್ಬರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಸ್ಥಿತಿ ಪುಟ 2

## ಬಿಜೆಪಿಯಿಂದ ಮುಸ್ಲಿಮರ ಓಲೈಕೆ

**ಬೆಂಗಳೂರು:** 'ಸೌಗಾತ್-ಎ-ಮೋದಿ' ಹೆಸರಿನಲ್ಲಿ 32 ಲಕ್ಷ ಮುಸ್ಲಿಂ ಕುಟುಂಬಗಳಿಗೆ ಬಿಜೆಪಿಯ ನಾಯಕರೇ ಮುಸ್ಲಿಮರಿಗೆ ಈದ್ ಕಿಟ್ ಕೊಡುತ್ತಿದ್ದಾರೆ. ಇದು ತುಷ್ಟೀಕರಣವಲ್ಲವೆ ಇದು ಓಲೈಕೆ ರಾಜಕಾರಣವಲ್ಲವೆ? ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಪುಟ 2

## ಉದಯಗಿರಿ: ಎಸ್‌ಐ ಸೇರಿ ಮೂವರು ಅಮಾನತು

**ಮೈಸೂರು:** ಉದಯಗಿರಿ ಪೊಲೀಸ್ ಠಾಣೆ ಮೇಲೆ ನಡೆದ ಕಲ್ಲು ತೂರಾಟ ಪ್ರಕರಣ ಸಂಬಂಧ ಕರ್ತವ್ಯ ಲೋಪ ಆರೋಪದ ಮೇಲೆ ಮೂವರು ಪೊಲೀಸರನ್ನು ಅಮಾನತುಗೊಳಿಸಿ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಆದೇಶ ಹೊರಡಿಸಿದ್ದಾರೆ.



ಉದಯಗಿರಿ ಠಾಣೆ ಎಸ್‌ಐ ಆಗಿದ್ದ ರೂಪೇಶ್, ಗುಪ್ತಚರ ಹೆಡ್ ಕಾನ್ಸ್‌ಟೇಬಲ್ ಪ್ರಕಾಶ್ ಹಾಗೂ ಸಾಮಾಜಿಕ ಜಾಲತಾಣ ನಿಗಾ ಜವಾಬ್ದಾರಿ ಹೊಂದಿದ್ದ ಕಾನ್ಸ್‌ಟೇಬಲ್ ಸಂತೋಷ್ ಅವರನ್ನು ಅಮಾನತುಗೊಳಿಸಲಾಗಿದೆ.

ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟ್ ಹಂಚಿದ್ದ ಆರೋಪಿಯನ್ನು ಬೆಳಗ್ಗೆ ಠಾಣೆಗೆ ಕರೆ ತಂದರೂ, ಯಾವುದೇ ಕ್ರಮ ಕೈಗೊಂಡಿಲ್ಲ. ಗಲಭೆ ತಡೆಯಲು ಅವಕಾಶ ಇದ್ದರೂ ಎಸ್‌ಐ ನಿರ್ಲಕ್ಷ್ಯದಿಂದ ಕರ್ತವ್ಯ ನಿರ್ವಹಿಸಿದ್ದಾರೆ. ಹೀಗಾಗಿ, ಪುಟ 2

## ಚುನಾವಣೆ ವೇಳೆ ಭ್ರಷ್ಟಾಚಾರ; ಅತಿಶಿಗೆ ನೋಟಿಸ್ ಜಾರಿ

**ನವದೆಹಲಿ:** ದೆಹಲಿ ವಿಧಾನಸಭಾ ಚುನಾವಣೆ ವೇಳೆ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಮತ್ತು ಆಪ್ ನಾಯಕಿ ಅತಿಶಿ ಅವರು ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿ ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್ ಪ್ರತಿಪಕ್ಷ ನಾಯಕಿ ಹಾಗೂ ಮಾಜಿ ಮುಖ್ಯಮಂತ್ರಿ ಅತಿಶಿ ಅವರಿಗೆ ನೋಟಿಸ್ ಜಾರಿ ಮಾಡಿದೆ.



ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರು, ಚುನಾವಣಾ ಆಯೋಗ, ದೆಹಲಿ ಪೊಲೀಸರು ಮತ್ತು ಅತಿಶಿ ಚುನಾವಣೆಯಲ್ಲಿ ಗೆಲುವು ಕಂಡ ವಿಧಾನಸಭಾ ಕ್ಷೇತ್ರ ಕಲ್ಕಾಜಿ ಚುನಾವಣಾ ಅಧಿಕಾರಿಗೆ ನೋಟಿಸ್ ಜಾರಿ ಮಾಡಿದೆ. ಈ ಪ್ರಕರಣದ ಕುರಿತು ಮುಂದಿನ ವಿಚಾರಣೆಯನ್ನು ಜುಲೈ 30ರಂದು ನಡೆಸುವುದಾಗಿ ನ್ಯಾಯಾಲಯ ತಿಳಿಸಿದೆ.

ಏನಿದು ಪ್ರಕರಣ: ಎಎಪಿ ನಾಯಕಿ, ದೆಹಲಿ ಮಾಜಿ ಸಿಎಂ ಅತಿಶಿ ಚುನಾವಣೆ ಸಂದರ್ಭದಲ್ಲಿ ಭ್ರಷ್ಟಾಚಾರ ನಡೆಸಿದ್ದಾರೆ ಎಂಬ ಆರೋಪದ ಮೇಲೆ ಕಮಲ್‌ಜಿತ್ ಸಿಂಗ್ ದುಗ್ಗಲ್ ಮತ್ತು ಆಯುಷ್ ರಾಣಾ ಎಂಬುವರು ಅತಿಶಿ ಆಯ್ಕೆಯನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಕೀಲರಾದ ಟಿ ಸಿಂಗ್‌ದೇವ್ ಮೂಲಕ ಸಲ್ಲಿಸಲಾದ ಅರ್ಜಿಯಲ್ಲಿ ಈ ಚುನಾವಣೆಯಲ್ಲಿನ ಅತಿಶಿ ಗೆಲುವನ್ನು ಅಸಿಂಧು ಎಂದು ಘೋಷಿಸುವಂತೆ ಕೋರಲಾಗಿತ್ತು. ಈ ಪ್ರಕರಣದ ವಿಚಾರಣೆಯನ್ನು ಬುಧವಾರ ಕೋರ್ಟ್ ಪುಟ 2

## ಹನಿಟ್ರ್ಯಾಪ್ ಪಿಐಎಲ್ ವಜಾ

**ನವದೆಹಲಿ:** ರಾಜ್ಯದಲ್ಲಿ ನಡೆದಿದೆ ಎನ್ನಲಾದ ಹನಿಟ್ರ್ಯಾಪ್ ವಿಚಾರ ದೇಶದಲ್ಲಿ ಸಾಕಷ್ಟು ಸುದ್ದಿಯಾಗಿದ್ದು ಈ ಸಂಬಂಧ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನ ಸುಪ್ರೀಂಕೋರ್ಟ್ ವಜಾಗೊಳಿಸಿದೆ.



ರಾಜಕಾರಣಿಗಳು ನ್ಯಾಯಾಧೀಶರ ಮೇಲೆ ಹನಿಟ್ರ್ಯಾಪ್ ಆಗಿದೆ. ಈ ಕುರಿತು ಸೂಕ್ತ ತನಿಖೆಯಾಗಬೇಕು ಎಂದು ಮನವಿ ಮಾಡಿ ಜಾರ್ಖಂಡ್ ರಾಜ್ಯದ ವಕೀಲ ವಿನಯ್ ಕುಮಾರ್ ಸಿಂಗ್ ಎಂಬುವವರು ಸುಪ್ರೀಂಕೋರ್ಟ್ ಪಿಐಎಲ್ ಸಲ್ಲಿಕೆ ಮಾಡಿದ್ದರು.

ಈ ಪಿಐಎಲ್ ವಜಾಗೊಳಿಸಿರುವ ಸುಪ್ರೀಂಕೋರ್ಟ್, ನೀವು ಜಾರ್ಖಂಡ್ ರಾಜ್ಯದವರು ನಿಮಗೇನು ಸಂಬಂಧ. ಜಡ್ಜ್‌ಗಳು ಯಾಕೆ ಹನಿಟ್ರ್ಯಾಪ್‌ಗೆ ಪುಟ 2

## ಡಿಕೆಶಿ ಪರ ಬ್ಯಾಟ್ ಬೀಸಿದ ಯತೀಂದ್ರ

**ಮೈಸೂರು:** ಹನಿ ಟ್ರ್ಯಾಪ್ ಹಿಂದೆ ಡಿಕೆ ಶಿವಕುಮಾರ್ ಇಲ್ಲ ಎಂದು ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಹೇಳಿದ್ದಾರೆ.

ಡಿಕೆ ಶಿವಕುಮಾರ್ ಕೈವಾಡವಿದೆ ಎಂಬ ಬಿಜೆಪಿ ಆರೋಪಕ್ಕೆ ತಿರುಗೇಟು ನೀಡಿರುವ ಯತೀಂದ್ರ, ಈ ಹಿಂದೆ ಬಿಜೆಪಿಯ 17 ಜನ ಕೋರ್ಟ್ ನಿಂದ ಇಂಜೆಕ್ಷನ್ ತಂದಿದ್ದರು. ಹಾಗಾದರೆ ಅವರ ವಿಡಿಯೋ ಬಿಜೆಪಿ ಅವರೇ ಮಾಡಿಸಿದ್ದ? ಬಿಜೆಪಿ ಅವರಿಗೆ ಕಾಂಗ್ರೆಸ್ ಪಕ್ಷದ ಯಾವುದೇ ನಾಯಕರ ವಿರುದ್ಧ ಮಾತನಾಡುವ ನೈತಿಕ ಹಕ್ಕಿಲ್ಲ ಎಂದು ಕಿಡಿಕಾರಿದರು.

ದೂರು ನೀಡಲು ಸಚಿವ ಕೆ.ಎನ್ ರಾಜಣ್ಣ ವಿಳಂಬ ವಿಚಾರ ಕುರಿತು ಪ್ರತಿಕ್ರಿಯಿಸಿದ ಯತೀಂದರ ಸಿದ್ದರಾಮಯ್ಯ, ಅದನ್ನು ರಾಜಣ್ಣ ಅವರನ್ನೇ ಕೇಳಬೇಕು. ಅವರು ಏನು ಮಾಡಿದರೆ ಒಳ್ಳೆಯದು ಅಂತ ಚರ್ಚೆ ಮಾಡುತ್ತಿದ್ದಾರೆ ಅನ್ನಿಸುತ್ತೆ. ಗೃಹ ಸಚಿವರ ಜೊತೆ ಮಾತುಕತೆ ನಡೆಸಿದ್ದಾರೆ ಎಂದರು.

ಸಚಿವ ರಾಜಣ್ಣ ಮನೆಯಲ್ಲಿ ಸಿಸಿ ಟಿವಿ ಇಲ್ಲದ ವಿಚಾರ, ಆ ಬಗ್ಗೆ ನನಗೆ ಗೊತ್ತಿಲ್ಲ. ಸಿಎಂ ಮನೆಯಲ್ಲಿ



ಸಿಸಿ ಟಿವಿ ಇದೆ. ಸಚಿವರ ಮನೆಯಲ್ಲಿ ಸಿಸಿ ಟಿವಿ ಇದಿಯಾ ಇಲ್ವಾ ಗೊತ್ತಿಲ್ಲ. ಸಿಸಿಟಿವಿ ಇದ್ದರೆ ಒಳ್ಳೆಯದು. ಇಲ್ಲಿ ರಾಜಣ್ಣ ಕೂಡ ಟಾರ್ಗೆಟ್ ಆಗಿಲ್ಲ. ಯಾರು ಯಾರನ್ನು ಟಾರ್ಗೆಟ್ ಮಾಡೋಕೆ ಆಗಲ್ಲ. ರಾಜಣ್ಣ ಅವರಿಗೆ ಆದ ಅನುಭವ ಸದನದಲ್ಲಿ ಹೇಳಿದ್ದಾರೆ ಅಷ್ಟೇ. ತನಿಖೆ ಆಗತ್ತೆ ಮುಂದೆ ಸತ್ಯ ಹೊರಬರಲಿದೆ ಎಂದು ಯತೀಂದ್ರ ಸಿದ್ದರಾಮಯ್ಯ ಹೇಳಿದರು.

## ಮುಖ್ಯಮಂತ್ರಿಗಳಿಗೆ ಹನಿಟ್ರ್ಯಾಪ್ ಭಯ ಏನಾದರೂ ಇದೆಯೇ..

**ರಾಮನಗರ:** ರಾಜ್ಯದಲ್ಲಿ ಆಡಳಿತ ಹೆಚ್ಚು ಕಡಿಮೆ ಮಹಾನಗರ ಪಾಲಿಕೆಯಲ್ಲಿ ಗಾರ್ಬೇಜ್ ಪರಿಸ್ಥಿತಿ ಹೇಗಿದೆಯೋ ಈ ಸರಕಾರದ ಆಡಳಿತವೂ ಗಾರ್ಬೇಜ್‌ಗೆ (ಕಸಕ್ಕೆ) ಸಮನಾಗಿದೆ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಟೀಕಿಸಿದ್ದಾರೆ. ಇಲ್ಲಿನ ಬಿಜೆಪಿ ಕಾರ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಇಂದು ಮಾತನಾಡಿದ ಅವರು, 45- 46 ವರ್ಷಗಳ ರಾಜಕೀಯ ಜೀವನದಲ್ಲಿ ಇಂಥ ಕೆಟ್ಟ ಸರಕಾರವನ್ನು ನಾವೆಂದೂ ಕೂಡ ನೋಡಿರಲು ಸಾಧ್ಯವಿಲ್ಲ. ಆದ್ದರಿಂದ ಸಂಪೂರ್ಣ ಅಭಿವೃದ್ಧಿ ಶೂನ್ಯವಾಗಿದೆ. ಕಾನೂನು-ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ. ಅತ್ಯಂತ ಕೆಟ್ಟ ಆಡಳಿತ ವ್ಯವಸ್ಥೆಯನ್ನು ಮಾನ್ಯ ಮುಖ್ಯಮಂತ್ರಿಗಳು ಪರಿಚಯಿಸಿದ್ದಾರೆ ಎಂದು ಆಕ್ಷೇಪಿಸಿದರು.




ರೈತರ ಸಮಸ್ಯೆಗಳಿಗೆ ಗಮನ ಕೊಡುತ್ತಿಲ್ಲ; ಹಿಂದುಳಿದವರ, ದಲಿತರು ಉಳಿದವರ ಸಮಸ್ಯೆಗಳಿಗೆ ಪರಿಹಾರ ಪುಟ 2

# ಮೋಸದ ಜಾಹೀರಾತು; 24 ತರಬೇತಿ ಸಂಸ್ಥೆಗಳಿಗೆ ದಂಡ

**ನವದೆಹಲಿ:** ದಾರಿ ತಪ್ಪಿಸುವ ಜಾಹೀರಾತು ನೀಡಿ ವಂಚಿಸಿದ ಕಾರಣಕ್ಕೆ 24 ತರಬೇತಿ ಸಂಸ್ಥೆಗಳಿಗೆ ಕೇಂದ್ರ ಗ್ರಾಹಕ ರಕ್ಷಣಾ ಪ್ರಾಧಿಕಾರ 77.60 ಲಕ್ಷ ರೂ. ದಂಡ ವಿಧಿಸಿದ್ದಲ್ಲದೆ, ರಾಷ್ಟ್ರೀಯ ಗ್ರಾಹಕ ಸಹಾಯವಾಣಿ ಮೂಲಕ ಶಿಕ್ಷಣ ಕ್ಷೇತ್ರದ 600ಕ್ಕೂ ಅಭ್ಯರ್ಥಿಗಳಿಗೆ 1.56 ಕೋಟಿ ಮರುಪಾವತಿ ಮಾಡಿದೆ ಎಂದು ಗ್ರಾಹಕ ವ್ಯವಹಾರಗಳ ಇಲಾಖೆ ಮಾಹಿತಿ ನೀಡಿದೆ.

ನಾಗರಿಕ ಸೇವೆ, ಎಂಜಿನಿಯರಿಂಗ್ ಕೋರ್ಸ್ ಮತ್ತಿತರ ಶಿಕ್ಷಣಕ್ಕೆ ತರಬೇತಿ ಕೇಂದ್ರಗಳಲ್ಲಿ ದಾಖಲಾಗಿದ್ದ ಅಭ್ಯರ್ಥಿಗಳು ನಿಯಮ, ಷರತ್ತುಗಳನ್ನು ಅನುಸರಿಸಿದರೂ ಮರುಪಾವತಿ ನಿರಾಕರಿಸಲಾಗಿದೆ ಎಂದು ಅಭ್ಯರ್ಥಿಗಳು ಗ್ರಾಹಕ ರಕ್ಷಣಾ ಪ್ರಾಧಿಕಾರದ ಗಮನ ಸೆಳೆದಿದ್ದರು. ಅಗತ್ಯ ಸೇವೆ ಪೂರೈಸದ, ತಡವಾಗಿ ತರಗತಿ ಆರಂಭಿಸಿದ ಹಾಗೂ ರದ್ದಾದ ಕೋರ್ಸ್‌ಗಳ ಸಂಬಂಧ ಪರಿಶೀಲನೆ ನಡೆಸಿ ಅಭ್ಯರ್ಥಿಗಳಿಗೆ ಪರಿಹಾರ ಕಲ್ಪಿಸಲಾಗಿದೆ.

ಗ್ರಾಹಕ ಆಯೋಗದ ಪೀಠಗಳಲ್ಲಿ VC ಉಪಕರಣ: ಗ್ರಾಹಕ ವ್ಯವಹಾರಗಳ ಇಲಾಖೆ ಗ್ರಾಹಕರ ರಕ್ಷಣೆ ಮತ್ತು ಸಬಲೀಕರಣಕ್ಕಾಗಿ ಪ್ರಗತಿಪರ ಕಾನೂನುಗಳನ್ನು ಜಾರಿಗೆ ತರುವ ಮೂಲಕ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದೆ. CONFONET ಯೋಜನೆಯಡಿ ವೀಡಿಯೊ ಕಾನ್ಫರೆನ್ಸಿಂಗ್ ಮೋಡ್ ಮೂಲಕ ವಿಚಾರಣೆ ನಡೆಸಲು ರಾಷ್ಟ್ರೀಯ ಗ್ರಾಹಕ ವಿವಾದ ಪರಿಹಾರ ಆಯೋಗದ 10 ಪೀಠಗಳು ಮತ್ತು ರಾಜ್ಯ ಗ್ರಾಹಕ ವಿವಾದ ಪರಿಹಾರ ಆಯೋಗಗಳ 35 ಪೀಠಗಳಲ್ಲಿ VC ಉಪಕರಣಗಳನ್ನು ಸ್ಥಾಪಿಸಲಾಗಿದೆ. ಇದರಿಂದ ಗ್ರಾಹಕ ಆಯೋಗಗಳಲ್ಲಿ ಈಗ ತೀರ್ಪು ಪ್ರಕ್ರಿಯೆಯ ಸರಳೀಕೃತವಾಗಿದೆ.

ಗ್ರಾಹಕ ಸಂರಕ್ಷಣಾ ಕಾಯ್ದೆ 1986 ರದ್ದುಪಡಿಸಿ 2019ರ ಹೊಸ ಕಾಯ್ದೆ ಜಾರಿ: ಜಾಗತೀಕರಣ, ತಂತ್ರಜ್ಞಾನ, ಇ-ವಾಣಿಜ್ಯ ಮಾರುಕಟ್ಟೆಗಳಲ್ಲಿ ಗ್ರಾಹಕರ ರಕ್ಷಣೆಗಾಗಿ ಗ್ರಾಹಕ ಸಂರಕ್ಷಣಾ ಕಾಯ್ದೆ 1986 ಅನ್ನು ರದ್ದುಪಡಿಸಿ ಗ್ರಾಹಕ ಸಂರಕ್ಷಣಾ ಕಾಯ್ದೆ 2019ರ ಹೊಸ ಕಾಯ್ದೆಯನ್ನು ಜಾರಿಗೆ ತರಲಾಗಿದೆ. ಇದರಿಂದ ಗ್ರಾಹಕರು ಆನ್‌ಲೈನ್‌ನಲ್ಲಿ ದೂರು ಸಲ್ಲಿಕೆ, ವಿಚಾರಣೆಗಾಗಿ ವೀಡಿಯೊ ಕಾನ್ಫರೆನ್ಸಿಂಗ್, 21 ದಿನಗಳಲ್ಲಿ ದೂರುಗಳ ಸ್ವೀಕಾರ ಮತ್ತು ತ್ವರಿತ ಪರಿಹಾರ ಸಾಧ್ಯವಾಗುತ್ತಿದೆ.

17 ಭಾಷೆಗಳಲ್ಲಿ ಕುಂದು ಕೊರತೆ ಪರಿಹಾರಕ್ಕೆ ಒಂದೇ ವೇದಿಕೆ: ಗ್ರಾಹಕ ವ್ಯವಹಾರಗಳ ಇಲಾಖೆ ದೇಶಾದ್ಯಂತ ಗ್ರಾಹಕರಿಗೆ ರಾಷ್ಟ್ರೀಯ ಗ್ರಾಹಕ ಸಹಾಯವಾಣಿ ಸೌಲಭ್ಯ ಒದಗಿಸಿದೆ. ಮೊಕದ್ದಮೆ ಪೂರ್ವ ಹಂತದಲ್ಲಿ ಕುಂದುಕೊರತೆ ಪರಿಹಾರಕ್ಕಾಗಿ ಒಂದೇ ವೇದಿಕೆ ಕಲ್ಪಿಸಿದೆ.

ಹಿಂದಿ, ಇಂಗ್ಲಿಷ್, ಕಾಶ್ಮೀರಿ, ಪಂಜಾಬಿ, ನೇಪಾಳಿ, ಗುಜರಾತಿ, ಮರಾಠಿ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಮೈಥಿಲಿ, ಸಂಥಾಲಿ, ಬಂಗಾಳಿ, ಒಡಿಯಾ, ಅಸ್ಸಾಮಿ ಮತ್ತು ಮಣಿಪುರಿ ಸೇರಿದಂತೆ 17 ಭಾಷೆಗಳಲ್ಲಿ ಗ್ರಾಹಕರು ಟೋಲ್-ಫ್ರೀ ಸಂಖ್ಯೆ 1915 ಮೂಲಕ ನೋಂದಾಯಿಸಬಹುದು. ಅಲ್ಲದೇ, ಇಂಟಿಗ್ರೇಟೆಡ್ ಗ್ರೀವೆನ್ಸ್ ರಿಡ್ರೆಸಲ್ ಮೆಕ್ಯಾನಿಸಂ, ಓಮ್ನಿ-ಚಾನೆಲ್ ಐಟಿ-ಶಕ್ತಗೊಂಡ ಕೇಂದ್ರ ಪೋರ್ಟಲ್, ವಿವಿಧ ಚಾನೆಲ್‌ಗಳ ಮೂಲಕವೂ ನೋಂದಾಯಿಸಬಹುದು.ಗ

WhatsApp(8800001915), SMS (8800001915), ಇಮೇಲ್ (nch-ca[at]gov[dot]in), NCH ಅಪ್ಲಿಕೇಶನ್, ವೆಬ್ ಪೋರ್ಟಲ್ (consumerhelpline.gov.in) ಮತ್ತು ಉಮಾಂಗ್ ಅಪ್ಲಿಕೇಶನ್ ಸಹ ಗ್ರಾಹಕರ ಅನುಕೂಲಕ್ಕಾಗಿ ಓಅಊ ಜೊತೆ ಸ್ವಯಂ ಪ್ರೇರಣೆಯಿಂದ ಪಾಲುದಾರಿಕೆ ಹೊಂದಿರುವ 1049 ಕಂಪನಿಗಳು ಕಾರ್ಯ ನಿರ್ವಹಿಸುತ್ತಿವೆ.

ಸುರಕ್ಷತಾ ಪ್ರತಿಜ್ಞೆಗೆ ಸಹಿ: ಗ್ರಾಹಕ ವ್ಯವಹಾರಗಳ ಇಲಾಖೆ, ಆನ್‌ಲೈನ್‌ನಲ್ಲಿ ಮಾರಾಟವಾಗುವ ಸರಕುಗಳ ಸುರಕ್ಷತೆ ಖಚಿತಪಡಿಸಿಕೊಳ್ಳಲು ಮತ್ತು ಗ್ರಾಹಕರ ಹಕ್ಕುಗಳನ್ನು ಗೌರವಿಸಲು ಇ-ಕಾಮರ್ಸ್ ವೇದಿಕೆಗಳ ಸ್ವಯಂ ಪ್ರೇರಿತ ಸಾರ್ವಜನಿಕ ಬದ್ಧತೆಯ "ಸುರಕ್ಷತಾ ಪ್ರತಿಜ್ಞೆ"ಯನ್ನು ಅಂತಿಮಗೊಳಿಸಿದೆ. ರಿಲಯನ್ಸ್ ರಿಟೇಲ್ ಗ್ರೂಪ್, ಟಾಟಾ ಸನ್ಸ್ ಗ್ರೂಪ್, ಜೊಮಾಟೊ, ಓಲಾ, ಸ್ವಿಗ್ಗಿ ಸೇರಿದಂತೆ 13 ಪ್ರಮುಖ ಇ-ಕಾಮರ್ಸ್ ಕಂಪನಿಗಳು ಗ್ರಾಹಕರ ಸುರಕ್ಷತೆಯನ್ನು ಖಚಿತಪಡಿಸಲು ಸುರಕ್ಷತಾ ಪ್ರತಿಜ್ಞೆಗೆ ಸಹಿ ಹಾಕಿವೆ.

ಅಅಕಂ ಇ-ಕಾಮರ್ಸ್ ವಲಯದಲ್ಲಿ ಗುರುತಿಸಲಾದ 13 ನಿರ್ದಿಷ್ಟ ಡಾರ್ಕ್ ಪ್ಯಾಟರ್ನ್‌ಗಳನ್ನು ಪಟ್ಟಿ ಮಾಡಿ ಅವುಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ಮಾರ್ಗಸೂಚಿ 2023 ಅನ್ನು ಬಿಡುಗಡೆ ಮಾಡಿದೆ. ಗ್ರಾಹಕರ ರಕ್ಷಣೆಯನ್ನು ಮತ್ತಷ್ಟು ಬಲಪಡಿಸಲು ಅಅಕಂ, ಗ್ರೀನ್‌ವಾಶಿಂಗ್ ಮತ್ತು ದಾರಿ ತಪ್ಪಿಸುವ ಪರಿಸರ ಹಕ್ಕುಗಳ ತಡೆಗಟ್ಟುವಿಕೆ ಮತ್ತು ನಿಯಂತ್ರಣಕ್ಕಾಗಿ ಮಾರ್ಗಸೂಚಿ 2024 ಜಾರಿಗೆ ತಂದಿದೆ. ತರಬೇತಿ ವಲಯದಲ್ಲಿ ದಾರಿ ತಪ್ಪಿಸುವ ಜಾಹೀರಾತು ತಡೆಗಟ್ಟಲೂ ಕ್ರಮ ಕೈಗೊಂಡಿದೆ.

BIS ಮಾನದಂಡ ಪೂರೈಸದ ಪ್ರೆಶರ್ ಕುಕ್ಕರ್ ಮಾರಾಟದ ವಿರುದ್ಧ ಕ್ರಮ: ಇ-ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳು ಸೇರಿದಂತೆ ವಿವಿಧ ಘಟಕಗಳ ವಿರುದ್ಧ ಅಅಕಂ ಈಗಾಗಲೇ ಕ್ರಮ ಕೈಗೊಂಡಿದೆ. ಇ-ಕಾಮರ್ಸ್ ಪ್ಲಾಟ್‌ಫಾರ್ಮ್‌ಗಳಲ್ಲಿ ಕಡ್ಡಾಯ ಃಖಖ ಮಾನದಂಡಗಳನ್ನು ಪೂರೈಸದ ದೇಶೀಯ ಪ್ರೆಶರ್ ಕುಕ್ಕರ್‌ಗಳ ಮಾರಾಟದ ವಿರುದ್ಧವೂ ಕ್ರಮ ಕೈಗೊಳ್ಳಲಾಗಿದೆ.

ವಿಮಾನ ಕಂಪನಿಗಳಿಂದ 1,454 ಕೋಟಿ ಮರುಪಾವತಿ: ಕೋವಿಡ್-19 ಲಾಕ್‌ಡೌನ್ ವೇಳೆ ವಿಮಾನ ಸಂಚಾರ ರದ್ದಾದ ಪ್ರಯುಕ್ತ ಕಂಪನಿಗಳು ಅಅಕಂ ನಿರ್ದೇಶನದಂತೆ ಗ್ರಾಹಕರಿಗೆ 1,454 ಕೋಟಿ ಮರುಪಾವತಿಸಿವೆ. ವಿಮಾನ ಕಂಪನಿಗಳು ತಮ್ಮ ವೆಬ್‌ಸೈಟ್ ನವೀಕರಿಸಬೇಕೆಂದು ಅಅಕಂ ಆದೇಶಿಸಿದೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ

## ಏ.1ರಿಂದ ಶೇ.5ರಷ್ಟು ಟೋಲ್ ಸುಂಕ ಏರಿಕೆ

**ಬೆಂಗಳೂರು:** ಏಪ್ರಿಲ್ 1 ರಿಂದ ಕರ್ನಾಟಕದಾದ್ಯಂತ ಟೋಲ್ ಸುಂಕ ಶೇ 3 ರಿಂದ 5 ರಷ್ಟು ಹೆಚ್ಚಾಗಲಿವೆ. ಈ ನಿಟ್ಟಿನಲ್ಲಿ ಮುಂದಿನ ಕೆಲವೇ ದಿನಗಳಲ್ಲಿ ಅಧಿಸೂಚನೆ ಹೊರಡಿಸಲಾಗುವುದು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೂಲಗಳು ತಿಳಿಸಿವೆ.

ಬೆಲೆ ಏರಿಕೆ, ಹಣದುಬ್ಬರಕ್ಕೆ ಅನುಗುಣವಾಗಿ ವಾರ್ಷಿಕವಾಗಿ ಮಾಡುವ ದರ ಪರಿಷ್ಕರಣೆ ಪ್ರಕ್ರಿಯೆಯ ಭಾಗವಾಗಿ ಈಗ ಟೋಲ್ ಸುಂಕ ಹೆಚ್ಚಳಕ್ಕೆ ಎನ್‌ಎಚ್‌ಎಐ ಮುಂದಾಗಿದೆ. ರಾಜ್ಯದ 66 ಟೋಲ್ ಪ್ಲಾಜಾಗಳಲ್ಲಿ ಹೆಚ್ಚಿನ ಟೋಲ್‌ಗಳಿಗೆ ಪರಿಷ್ಕೃತ ದರಗಳು ಅನ್ವಯವಾಗಲಿವೆ. ಗರಿಷ್ಠ ಶೇ 5 ರಷ್ಟು ಮತ್ತು ಕನಿಷ್ಠ ಶೇ 3 ರಷ್ಟು ಹೆಚ್ಚಳವಾಗಲಿದೆ.

ರಾಷ್ಟ್ರೀಯ ಹೆದ್ದಾರಿಗಳ ಮೇಲಿನ ಸುಂಕಗಳಿಗೆ ಕೇಂದ್ರ ಸರ್ಕಾರ ಶೀಘ್ರವೇ ಹೊಸ ನೀತಿ ಪ್ರಕಟಿಸಲಿದೆ. ಇದರಲ್ಲಿ ಗ್ರಾಹಕರಿಗೆ ಕೆಲವು ರಿಯಾಯಿತಿ ದೊರೆಯಲಿದೆ ಎಂದು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದರೂ ಅದಿನ್ನೂ ಜಾರಿಯಾಗಿಲ್ಲ. 2008ರ ನೀತಿಯೇ ಅನ್ವಯವಾಗಲಿದೆ.

ಕರ್ನಾಟಕದಲ್ಲಿ ಸುಮಾರು 66 ಟೋಲ್ ಪ್ಲಾಜಾಗಳಿವೆ. ಟೋಲ್ ಸುಂಕ ಹೆಚ್ಚಾಗುವ ಟೋಲ್ ಪ್ಲಾಜಾಗಳಲ್ಲಿ ಕಣಿಮಿಣಿಕೆ ಮತ್ತು ಶೇಷಗಿರಿಹಳ್ಳಿ (ಬೆಂಗಳೂರು-ಮೈಸೂರು), ನಂಗ್ಲಿ (ಬೆಂಗಳೂರು-ತಿರುಪತಿ), ಬಾಗೇಪಲ್ಲಿ (ಬೆಂಗಳೂರು-ಹೈದರಾಬಾದ್), ಸಾದಹಳ್ಳಿ (ಬೆಂಗಳೂರು ವಿಮಾನ ನಿಲ್ದಾಣ ರಸ್ತೆ), ಮತ್ತು ಹುಲಿಕುಂಟೆ ಮತ್ತು ನಲ್ಲೂರು ದೇವನಹಳ್ಳಿ(ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ) ಟೋಲ್ ಪ್ಲಾಜಾಗಳು ಸೇರಿವೆ.

ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ರಸ್ತೆ ಬಳಕೆದಾರರಿಗೆ ಕೆಲವು ರಿಯಾಯಿತಿಗಳನ್ನು ನೀಡುವ ಉದ್ದೇಶದೊಂದಿಗೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಶುಲ್ಕಗಳಿಗೆ ಹೊಸ ನೀತಿಯನ್ನು ಪರಿಚಯಿಸಲು ಸಜ್ಜಾಗಿದೆ. ಈ ವಿಚಾರವಾಗಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಮಾರ್ಚ್ 19 ರಂದು ರಾಜ್ಯಸಭೆಯಲ್ಲಿ ಮಾಹಿತಿ ನೀಡಿದ್ದರು.

2023-24 ರಲ್ಲಿ ಭಾರತದಲ್ಲಿ ಒಟ್ಟು ಟೋಲ್ ಸಂಗ್ರಹ 64,809.86 ಕೋಟಿ ರೂ.ಗಳಷ್ಟಾಗಿತ್ತು. ಇದು ಹಿಂದಿನ ವರ್ಷಕ್ಕಿಂತ ಶೇ 35 ರಷ್ಟು ಹೆಚ್ಚಾಗಿದೆ. 2019-20 ರಲ್ಲಿ ಟೋಲ್ ಶುಲ್ಕ ಸಂಗ್ರಹವು 27,503 ಕೋಟಿ ರೂ.ಗಳಷ್ಟಿತ್ತು ಎಂದು ಗಡ್ಕರಿ ಮಾಹಿತಿ ನೀಡಿದ್ದರು.

## ಸ್ತನ ಮುಟ್ಟುವುದು ಅತ್ಯಾಚಾರ ಯತ್ನವಲ್ಲ ಅಲಹಾಬಾದ್ ಕೋರ್ಟ್ ತೀರ್ಪಿಗೆ ಸುಪ್ರೀಂ ತಡೆ

**ನವದಹಲಿ:** ಮಹಿಳೆಯರ 'ಸ್ತನ' ಹಿಡಿಯುವುದು ಅಥವಾ ಮುಟ್ಟುವುದು, ಇಲ್ಲವೆ ಹುಡುಗಿಯ ಪೈಜಾಮದ ದಾರ ಎಳೆಯುವುದು ಅತ್ಯಾಚಾರ ಯತ್ನವಲ್ಲ ಎನ್ನುವ ಅಲಹಬಾದ್ ಹೈಕೋರ್ಟ್‌ನ ವಿವಾದಾತ್ಮಕ ತೀರ್ಪಿಗೆ ಸುಪ್ರೀಂಕೋರ್ಟ್ ಬುಧವಾರ ತಡೆ ನೀಡಿದೆ.

ಜೊತೆಗೆ ಈ ವಿಷಯದ ಕುರಿತು ಸುಪ್ರೀಂ ಕೋರ್ಟ್ ಈ ವಿಷಯದ ಬಗ್ಗೆ ಕೇಂದ್ರ ಸರ್ಕಾರ ಮತ್ತು ಉತ್ತರ ಪ್ರದೇಶ ಸರ್ಕಾರದಿಂದ ಉತ್ತರ ಬಯಸಿ ನೋಟೀಸ್ ಜಾರಿ ಮಾಡಿದೆ

"ತೀರ್ಪು ಪೂರ್ಣ ಸೂಕ್ಷ್ಮತೆಯ ಕೊರತೆ ತೋರಿಸುತ್ತದೆ ಎಂದು ಹೇಳಲು ನಮಗೆ ಕಷ್ಟವಾಗುತ್ತಿದೆ." ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಅಗಸ್ಟೀನ್ ಜಾರ್ಜ್ ಮಸಿಹ್ ಅವರಿದ್ದ ನ್ಯಾಯಪೀಠ ಹೇಳಿದೆ.

ಅಲಹಾಬಾದ್ ಹೈಕೋರ್ಟ್‌ನ ವಿವಾದಾತ್ಮಕ ಆದೇಶವನ್ನು ಸ್ವಯಂಪ್ರೇರಿತವಾಗಿ ಪರಿಗಣಿಸಿದ ಸುಪ್ರೀಂ ಕೋರ್ಟ್, ನ್ಯಾಯಾಲಯದ ತೀರ್ಪು ಸೂಕ್ಷ್ಮತೆಯ ಕೊರತೆಯ ತೋರಿಸಿದೆ ಎಂದು ಹೇಳಿದೆ.

"ನಾವು ಸಾಮಾನ್ಯವಾಗಿ ಈ ಹಂತದಲ್ಲಿ ತಡೆಯಾಜ್ಞೆ ನೀಡಲು ಹಿಂಜರಿಯುತ್ತೇವೆ. ಆದರೆ ಪ್ಯಾರಾ 21, 24 ಮತ್ತು 26 ರಲ್ಲಿನ ಅವಲೋಕನಗಳು ಕಾನೂನಿನ ಫಿರಂಗಿಗಳಿಗೆ ತಿಳಿದಿಲ್ಲ ಮತ್ತು ಅಮಾನವೀಯ ವಿಧಾನ ತೋರಿಸುವುದರಿಂದ,ಅಲಹಾಬಾದ್ ಹೈಕೋರ್ಟ್ ತೀರ್ಪು ತಡೆಹಿಡಿಯಲಾಗುವುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕೇಂದ್ರ, ಉತ್ತರ ಪ್ರದೇಶ ರಾಜ್ಯ ಮತ್ತು ಹೈಕೋರ್ಟ್ ಮುಂದೆ ಇರುವ ಪಕ್ಷಗಳಿಗೆ ನೋಟಿಸ್ ನೀಡುತ್ತೇವೆ. ಕಲಿತ ಅಟಾರ್ನಿ ಜನರಲ್ ಮತ್ತು ಸಾಲಿಸಿಟರ್ ಜನರಲ್ ನ್ಯಾಯಾಲಯಕ್ಕೆ ಸಹಾಯ ಮಾಡುತ್ತಾರೆ" ಎಂದು ನ್ಯಾಯಾಲಯ ಹೇಳಿದೆ.

## ವಿಜಯಪುರ ಪಾಲಿಕೆಯ ಎಲ್ಲಾ 35 ಸದಸ್ಯರು ಅನರ್ಹ

**ವಿಜಯಪುರ:** ಆಸ್ತಿ ಘೋಷಣಾ ಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ವಿಜಯಪುರ ಮಹಾನಗರ ಪಾಲಿಕೆಯ ಎಲ್ಲಾ 35 ಪಾಲಿಕೆ ಸದಸ್ಯರನ್ನು ಪ್ರಾದೇಶಿಕ ಆಯುಕ್ತರು ಅನರ್ಹಗೊಳಿಸಿದ್ದಾರೆ.

ವಿಜಯಪುರ ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದ ಬಳಿಕ ಅಕ್ಟೋಬರ್ 2022ರಲ್ಲಿ 35 ವಾರ್ಡ್‌ಗಳಿಗೆ ಚುನಾವಣೆ ನಡೆದಿತ್ತು. 35 ವಾರ್ಡ್‌ಗಳ ಪೈಕಿ ಬಿಜೆಪಿ 17, ಕಾಂಗ್ರೆಸ್ 10, ಎಐಎಂಐಎಂ 2, ಜೆಡಿಎಸ್-1, ಪಕ್ಷೇತರ-5 ಸದಸ್ಯರು ಆಯ್ಕೆಯಾಗಿದ್ದರು. ಅತೀ ದೊಡ್ಡ ಪಕ್ಷವಾಗಿ ಬಿಜೆಪಿ ಗೆದ್ದು ಬಂದರೂ ಅಧಿಕಾರ ಭಾಗ್ಯ ಮೊದಲ ಅವಧಿಗೆ ಸಿಗಲಿಲ್ಲ. ಮೇಯರ್, ಉಪಮೇಯರ್ ಮೀಸಲಾತಿ ವಿಚಾರಕ್ಕೆ ಕೋರ್ಟ್ ಮೆಟ್ಟಿಲೇರಿದ ಪರಿಣಾಮ, ಚುನಾವಣೆ ನಡೆದು 14 ತಿಂಗಳ ಬಳಿಕ ಮೇಯರ್, ಉಪಮೇಯರ್ ಚುನಾವಣೆ ನಡೆಯಿತು. ಚುನಾವಣೆ ವೇಳೆ ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿತ್ತು. ಆ ಬಳಿಕ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಪಾಲಿಕೆ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದು ಸಚಿವ ಎಂ.ಬಿ.ಪಾಟೀಲ್ ಮೇಲುಗೈ ಸಾಧಿಸಿದ್ದರು. ಇದರೊಂದಿಗೆ ವಿಜಯಪುರ ನಗರ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರಿಗೆ ಹಿನ್ನಡೆಯಾಗಿತ್ತು. 2024 ಜನವರಿ 9ರಂದು ಕಾಂಗ್ರೆಸ್‌ನ ಮೆಹಜಬೀನ್ ಹೊರ್ತಿ ಮೇಯರ್ ಆಗಿಯೂ, ದಿನೇಶ್ ಹಳ್ಳಿ ಉಪಮೇಯರ್ ಆಗಿಯೂ ಆಯ್ಕೆಯಾಗಿ ಅಧಿಕಾರ ವಹಿಸಿಕೊಂಡರು. ಒಂದು ವರ್ಷ ಕಾಂಗ್ರೆಸ್ ಅಧಿಕಾರ ನಡೆಸಿದ್ದು, ಎರಡನೇ ಅವಧಿಗೆ ಮೀಸಲಾತಿಯಂತೆ ಮತ್ತೆ ಮೇಯರ್, ಉಪಮೇಯರ್ ಚುನಾವಣೆ ಜನವರಿ 27, 2025ರಂದು ನಡೆದಿತ್ತು.

ಮಾಜಿ ಸದಸ್ಯರಾದ ಕಾಂಗ್ರೆಸ್‌ನ ಮೈನುದ್ದೀನ್ ಬೀಳಗಿ ಹಾಗೂ ಬಿಜೆಪಿಯ ಪ್ರಕಾಶ್ ಮಿರ್ಜಿ ಅವರು ಪಾಲಿಕೆಯ ಎಲ್ಲಾ ಸದಸ್ಯರು ಪೌರಾಡಳಿತ ನಿಯಮಾವಳಿಯಂತೆ ನಿಗದಿತ ನಮೂನೆಯಲ್ಲಿ ಆಸ್ತಿ ವಿವರ ಸಲ್ಲಿಸಿಲ್ಲ, ಹಾಗಾಗಿ ಅವರ ಸದಸ್ಯತ್ವ ಅನರ್ಹಗೊಳಿಸಬೇಕು ಎಂದು ರಿಟ್ ಅರ್ಜಿಗಳನ್ನು ಸಲ್ಲಿಸಿದ್ದರು. ಎರಡು ಅರ್ಜಿಗಳ ವಿಚಾರಣೆ ನಡೆಸಿದ ಹೈಕೋರ್ಟ್ ಪೀಠವು ಮೇಯರ್, ಉಪಮೇಯರ್ ಚುನಾವಣೆ ಪೂರ್ಣಗೊಳಿಸಿ, ಸದಸ್ಯತ್ವ ಅನರ್ಹತೆಯ ಕ್ರಮ ಸರ್ಕಾರಕ್ಕೆ ಬಿಟ್ಟಿದ್ದು ಎಂದು ಹೇಳಿತ್ತು. ನಂತರದಲ್ಲಿ ಮೇಯರ್ ಆಗಿ ಎಂ.ಎಸ್.ಕರಡಿ, ಉಪಮೇಯರ್ ಬಿಜೆಪಿ ಬೆಂಬಲ ಸುಮಿತ್ರಾ ಜಾಧವ್ ಆಯ್ಕೆಯಾದರು.

2025ರ ಮಾರ್ಚ್ 25ಕ್ಕೆ ವಿಜಯಪುರ ಮಹಾನಗರ ಪಾಲಿಕೆ ಸದಸ್ಯರು ಆಸ್ತಿ ವಿವರ ಸಲ್ಲಿಸಿಲ್ಲ ಎನ್ನುವ ಬಗ್ಗೆ ಕ್ರಮ ಕೈಗೊಂಡ ಬಗ್ಗೆ ವರದಿ ಸಲ್ಲಿಕೆಗೆ ಹೈಕೋರ್ಟ್ ದಿನಾಂಕ ನಿಗದಿಗೊಳಿಸಿತು. ಹೀಗಾಗಿ, ಬೆಳಗಾವಿ ಪ್ರಾದೇಶಿಕ ಆಯುಕ್ತ ಎಸ್.ಬಿ.ಶೆಟ್ಟೆಣ್ಣವರ್ ಪಾಲಿಕೆಯ 35 ಸದಸ್ಯರನ್ನು ಅನರ್ಹಗೊಳಿಸಿದ್ದಾರೆ.

ಈ ಕುರಿತ ಅಧಿಕೃತ ಆದೇಶ ದೂರುದಾರರ ಕೈ ಸೇರಿದೆ. ಮಾರ್ಚ್ 25ರಂದು ಅನರ್ಹತೆ ಆದೇಶ ಪ್ರತಿಯನ್ನು ಪ್ರಾದೇಶಿಕ ಆಯುಕ್ತರು ಸಲ್ಲಿಸಿದ್ದಾರೆ.

## ಹಿಂದೂ ಹುಲಿಗಳ ಬಗ್ಗೆ ಕನಿಕರ: ಪ್ರಿಯಾಂಕ್ ವ್ಯಂಗ್ಯ

**ಬೆಂಗಳೂರು:** ದೇಶದ 32 ಲಕ್ಷ ಮುಸ್ಲಿಮರಿಗೆ ಸೌಗತ್-ಎ-ಮೋದಿ ಕಿಟ್ ವಿತರಣೆಗೆ ಸಿದ್ಧವಾಗಿರುವ ಬಿಜೆಪಿ ನಡೆಯನ್ನು ಲೇವಡಿ ಮಾಡಿರುವ ಸಚಿವ ಪ್ರಿಯಾಂಕ ಖರ್ಗೆ ಅವರು, ಎಲ್ಲ ಸ್ವಯಂ ಘೋಷಿತ ಹಿಂದೂ ಹುಲಿಗಳ ಬಗ್ಗೆ ಕನಿಕರ ಮೂಡುತ್ತಿದೆ ಎಂದು ವ್ಯಂಗ್ಯವಾಡಿದ್ದಾರೆ.

ಈ ಬಗ್ಗೆ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಟ್ವೀಟ್ ಮಾಡಿರುವ ಅವರು, ವಕ್ಫ್ ಹಲಾಲ್ ಬಜೆಟ್ ಮತ್ತು ಕಾಂಟ್ರಾಕ್ಟ್ ಜಿಹಾದ್‌ಗಾಗಿ ಹೋರಾಡಿದ ಬಿಜೆಪಿ ಹುಲಿಗಳು ಹಾಗೂ ಮಸೀದಿಗಳ ಮುಂದೆ ಡಿ.ಜೆ. ಹಾಕಿ ಕುಣಿದವರು, ಹೋಳಿ ಬಣ್ಣ ಎರಚಿದವರು ಈಗ ಮಸೀದಿಗಳ ಮುಂದೆ ಸಾಲುಗಟ್ಟಿ ನಿಂತು ಸೌಗತ್-ಎ-ಮೋದಿ ಕಿಟ್‌ಗಳನ್ನು ವಿತರಿಸಲಿದ್ದಾರೆ. ಈ ಸುಂದರ ದೃಶ್ಯಗಳನ್ನು ಕಣ್ತುಂಬಿಕೊಳ್ಳಲು ಪ್ರಧಾನಿ ಮೋದಿ ಸಾಹೇಬರು ಕಾತರರಾಗಿದ್ದಾರೆ ಎಂದು ವ್ಯಂಗ್ಯವಾಡಿದ್ದಾರೆ.

ಬಿಜೆಪಿ ನಾಯಕರು ಹಾಗೂ ಕಾರ್ಯಕರ್ತರು ವಾಟ್ಸಾಪ್ ಯೂನಿವರ್ಸಿಟಿಯನ್ನು ಬಿಟ್ಟು ಸಂವಿಧಾನವನ್ನು ಚೆನ್ನಾಗಿ ಓದಬೇಕು ಹಾಗೂ ಎಲ್ಲಾ ನಾಗರಿಕರಿಗೆ ಸಮಾನ ಹಕ್ಕುಗಳಿವೆ ಎಂಬ ವಾಸ್ತವವನ್ನು ಅರ್ಥ ಮಾಡಿಕೊಳ್ಳಬೇಕು.

ವಾಟ್ಸಾಪ್ ಯೂನಿವರ್ಸಿಟಿಯನ್ನು ನಂಬಿಕೊಂಡರೆ ತಮ್ಮ ಪಕ್ಷದ ಅನಿರೀಕ್ಷಿತ ಮಾಸ್ಟರ್ ಸ್ಟ್ರೋಕ್‌ಗಳಿಂದ ಪೆಪ್ಪರ್ ಆಗಬೇಕಾಗುತ್ತದೆ ಎಂದು ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ. ಈ ಕಾರ್ಯಕ್ರಮಕ್ಕೆ ಬರುವ ಬಿಜೆಪಿಗರು ನಿಮ್ಮ ಅಲ್ಪಸಂಖ್ಯಾತರ ಮೋರ್ಚಾಗೆ ಕುಫಿ (ಟೋಪಿ) ಗಳನ್ನು ತರುವುದನ್ನು ಹೇಳಲು ಮರೆಯಬೇಡಿ ಎಂಬುದು ನನ್ನ ಸಲಹೆ ಎಂದು ಅವರು ಹೇಳಿದ್ದಾರೆ.

## ಏ.1ರಿಂದ ಗೋಧಿ ದಾಸ್ತಾನು ಘೋಷಣೆ ಕಡ್ಡಾಯ

**ನವದೆಹಲಿ:** ಕೇಂದ್ರ ಸರ್ಕಾರ ಗೋಧಿ ದಾಸ್ತಾನು ಮೇಲೆ ನಿಗಾ ವಹಿಸಿದ್ದು, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಎಲ್ಲಾ ವರ್ತಕರು ಏಪ್ರಿಲ್ 1ರಿಂದ ಕಡ್ಡಾಯವಾಗಿ ಗೋಧಿ ದಾಸ್ತಾನು ವಿವರ ದಾಖಲಿಸಬೇಕು ಕೇಂದ್ರ ಆಹಾರ ಇಲಾಖೆ ಸೂಚನೆ ನೀಡಿದೆ. ದೇಶದಲ್ಲಿ ಆಹಾರ ಭದ್ರತೆ ಕಲ್ಪಿಸಲು ಮತ್ತು ಅಪಪ್ರಚಾರದ ಊಹಾಪೋಹಗಳನ್ನು ತಡೆಗಟ್ಟುವ ಸಲುವಾಗಿ ಈ ಪಾರದರ್ಶಕ ಕ್ರಮ ಕೈಗೊಳ್ಳಲಾಗಿದೆ. ಅದರಂತೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ವ್ಯಾಪಾರಿಗಳು/ಸಗಟು ವ್ಯಾಪಾರಿಗಳು, ಚಿಲ್ಲರೆ ವ್ಯಾಪಾರಿಗಳು, ದೊಡ್ಡ ವರ್ತಕರು ಮತ್ತು ಸಂಸ್ಕರಣಾಕಾರರು ಏಪ್ರಿಲ್ 1ರಿಂದ ಗೋಧಿ ದಾಸ್ತಾನು ಘೋಷಿಸಿಕೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ಕೇಂದ್ರ ಸರ್ಕಾರ ಎಲ್ಲಾ ವರ್ಗದ ಘಟಕಗಳಿಗೆ ಗೋಧಿ ದಾಸ್ತಾನು ಮಿತಿಯನ್ನು ಇದೇ ಮಾರ್ಚ್ 31ಕ್ಕೆ ಅಂತ್ಯಗೊಳಿಸಲಿದ್ದು, ನಂತರ ಹೊಸದಾಗಿ ಪೋರ್ಟಲ್‌ನಲ್ಲಿ ಗೋಧಿ ದಾಸ್ತಾನು ಎಷ್ಟಿದೆ ಎಂಬುದನ್ನು ಬಹಿರಂಗಪಡಿಸಬೇಕು. ಪೋರ್ಟಲ್‌ನಲ್ಲಿ ಇನ್ನೂ ನೋಂದಣಿ ಮಾಡಿಕೊಳ್ಳದ ಘಟಕಗಳು ತ್ವರಿತವಾಗಿ ನೋಂದಾಯಿಸಿಕೊಳ್ಳಬೇಕು ಮತ್ತು ಪ್ರತಿ ಶುಕ್ರವಾರ ಗೋಧಿ ದಾಸ್ತಾನು ಬಗ್ಗೆ ಮಾಹಿತಿ ದಾಖಲಿಸಬೇಕು ಎಂದು ಸೂಚಿಸಿದೆ.

ಪೋರ್ಟಲ್: https://evegoils.nic.in/wsp/login ಈ ಪೋರ್ಟಲ್ ಅಲ್ಲಿ ಪ್ರಸ್ತುತ ಗೋಧಿ ದಾಸ್ತಾನು ಸ್ಥಿತಿಯನ್ನು ಘೋಷಿಸಬೇಕು ಹಾಗೂ ಮುಂದಿನ ಆದೇಶದವರೆಗೆ ಪ್ರತಿ ಶುಕ್ರವಾರ ಮಾಹಿತಿ ನವೀಕರಿಸಬೇಕು. ಎಲ್ಲಾ ಘಟಕಗಳು ಪೋರ್ಟಲ್‌ನಲ್ಲಿ ನಿಯಮಿತವಾಗಿ ಮತ್ತು ಸರಿಯಾಗಿ ದಾಸ್ತಾನು ಬಹಿರಂಗಪಡಿಸಲಾಗಿದೆಯೇ? ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಕೇಂದ್ರ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವಾಲಯ ತಿಳಿಸಿದೆ.

## ಟ್ರ್ಯಾಕ್ಟರ್ ಹರಿದು 5ರ ಮಗು ಸಾವು

**ತುಮಕೂರು:** ಮಣ್ಣು ತುಂಬಿದ ಟ್ರ್ಯಾಕ್ಟರ್ ಹರಿದು ಐದು ವರ್ಷದ ಮಗು ಸಾವನ್ನಪ್ಪಿರುವ ಘಟನೆ ಜಿಲ್ಲೆಯ ಪಾವಗಡ ತಾಲೂಕಿನ ತಿಮ್ಮನಹಳ್ಳಿ ಗ್ರಾಮದಲ್ಲಿ ನಡೆದಿದೆ ಮೃತ ಮಗುವನ್ನು ವರುಣ್ (5) ಎಂದು ತಿಳಿಯಲಾಗಿದೆ.

ಮನೆಯ ಮುಂದೆ ವರುಣ್ ಆಟವಾಡುತ್ತಿದ್ದ. ಇದೇ ವೇಳೆ ಮಣ್ಣು ತುಂಬಿದ್ದ ಟ್ರ್ಯಾಕ್ಟರ್ ಬಂದಿದ್ದು, ಮಗುವಿನ ಮೇಲೆ ಹಾದು ಹೋಗಿದೆ. ಪರಿಣಾಮ ಮಗು ಸಾವನ್ನಪ್ಪಿದ್ದಾನೆ. ವೈಎನ್ ಹೊಸಕೋಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

ಮೊದಲ ಪುಟದಿಂದ

### ತಲುಪಿದ ಹನಿಟ್ರ್ಯಾಪ್

ನಿಮ್ಮಗಳ ನಡುವಿನ ಒಳಜಗಳದ ಲಾಭವನ್ನು ಪ್ರತಿಪಕ್ಷಗಳು ಪಡೆದುಕೊಳ್ಳುತ್ತಿವೆ. ಇದು ಅವರುಗಳಿಗೆ ಅರ್ಥವಾಗುತ್ತಿಲ್ಲವೇ ಎಂದು ಪರೋಕ್ಷವಾಗಿ ರಾಜ್ಯದಲ್ಲಿನ ಎಲ್ಲಾ ನಾಯಕರುಗಳಿಗೂ ಚಾಟಿ ಬೀಸಿದ್ದಾರೆ. ಹನಿಟ್ರ್ಯಾಪ್ ವಿಷಯವಾಗಿ ಕೆ.ಎನ್. ರಾಜಣ್ಣ ಅವರ ಪರವಾಗಿ ಮಾತುಕತೆ ನಡೆಸಲು ತೆರಳಿದ್ದ ಸತೀಶ್ ಜಾರಕಿಹೊಳಿ ಅವರನ್ನು ಎಐಸಿಸಿ ಮುಖಂಡ ವೇಣುಗೋಪಾಲ್ ಅವರು ತರಾಟೆಗೆ ತೆಗೆದುಕೊಂಡಿದ್ದಾರೆ ಎನ್ನಲಾಗಿದೆ.ಒಂದು ವೇಳೆ ಹನಿಟ್ರ್ಯಾಪ್ ನಡೆದಿದ್ದೇ ಆದಲ್ಲಿ ಈ ವಿಷಯವನ್ನು ಸಚಿವರು ಎಲ್ಲಿ ಚರ್ಚಿಸಬೇಕು ಎಂಬ ಸಾಮಾನ್ಯ ಜ್ಞಾನ ಇಲ್ಲವೇ? ವಿಧಾನಸಭೆಯಲ್ಲೇ ಚರ್ಚಿಸಬೇಕಿತ್ತೇ? ಅದಕ್ಕಾಗಿ ಪಕ್ಷದ ವೇದಿಕೆ ಇರಲಿಲ್ಲವೇ? ಮುಖ್ಯಮಂತ್ರಿ-ಉಪಮುಖ್ಯಮಂತ್ರಿ ಎಲ್ಲಿ ಹೋಗಿದ್ದರು ಅವರ ಬಳಿ ಚರ್ಚಿಸಬಹುದಾಗಿತ್ತಲ್ಲವೇ, ಇಲ್ಲ ಸಂಪುಟದ ಸಹದ್ಯೋಗಿಗಳೊಂದಿಗೆ ಚರ್ಚಿಸಬಹುದಿತ್ತಲ್ಲ ಎಂದುಬೇಸರ ವ್ಯಕ್ತಪಡಿಸಿರುವ ಅವರು, ಈ ವಿಷಯವನ್ನು ವಿಧಾನಸಭೆಯಲ್ಲೇ ಚರ್ಚಿಸಿರುವುದರ ಹಿಂದೆ ಬೇರೆನಾದರೂ ಉದ್ದೇಶವಿದೆಯೇ ಎಂದು ಕೇಳಿದೆ ಎನ್ನಲಾಗಿದೆ. ಹನಿಟ್ರ್ಯಾಪ್ ವಿಷಯಕ್ಕೆ ಇತಿಶ್ರೀ ಹಾಡಲು ಪೂರ್ಣ ಮಾಹಿತಿ ಬಯಸಿರುವ ಹೈಕಮಾಂಡ್ ರಾಜ್ಯ ನಾಯಕರುಗಳನ್ನು ದೆಹಲಿಗೆ ಬರುವಂತೆ ಸೂಚಿಸಿದ್ದು, ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ- ಉಪಮುಖ್ಯಮಂತ್ರಿ ದೆಹಲಿಗೆ ತೆರಳುತ್ತಿದ್ದಾರೆ ಎಂದು ತಿಳಿದುಬಂದಿದೆ.

### ಸಿಬಿಐ ದಾಳಿ, ಪರಿಶೀಲನೆ

(ಗುಜರಾತ್)ನಲ್ಲಿ ನಡೆಯಲಿರುವ ಎಐಸಿಸಿ ಸಭೆಗಾಗಿ ರಚಿಸಲಾದ 'ಕರಡು ಸಮಿತಿ' ಸಭೆಗಾಗಿ ಮಾಜಿ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಇಂದು ದಿಲ್ಲಿಗೆ ತೆರಳಬೇಕಿತ್ತು. ಅದಕ್ಕೂ ಮುನ್ನ ಸಿಬಿಐ ರಾಯ್‌ಪುರ ಮತ್ತು ಭಿಲಾಯಿ ನಿವಾಸಕ್ಕೆ ತಲುಪಿದೆ ಎಂದು ಹೇಳಿದ್ದಾರೆ.ಕಳೆದ ಮಾರ್ಚ್ 10 ರಂದು ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಭೂಪೇಶ್ ಬಘೇಲ್ ನಿವಾಸ ಮತ್ತು ಅವರ ಪುತ್ರ ಚೈತನ್ಯ ಬಘೇಲ್ ಅವರ ನಿವಾಸ, ಸೇರಿ ದುರ್ಗ್ ಜಿಲ್ಲೆಯ 14 ಸ್ಥಳಗಳಲ್ಲಿ ಜಾರಿ ನಿರ್ದೇಶನಾಲಯ ಸರಣಿ ದಾಳಿ ನಡೆಸಿತ್ತು.

ಮಹದೇವ್ ಬೆಟ್ಟಿಂಗ್ ಆ್ಯಪ್ ಪ್ರವರ್ತಕರು ಭೂಪೇಶ್ ಬಘೇಲ್ ಅವರಿಗೆ ಸುಮಾರು 508 ಕೋಟಿ ರೂ. ಲಂಚ ನೀಡಿದ್ದಾರೆ ಎಂದು ಜಾರಿ ನಿರ್ದೇಶನಾಲಯ ಈ ಹಿಂದೆಯೇ ಹೇಳಿತ್ತು. ಈ ಹಿಂದೆ ದಾಳಿ ನಡೆಸಿದಾಗ 5.39 ಕೋಟಿ ರೂ. ನಗದು ವಶಪಡಿಸಿಕೊಂಡಿತ್ತು. ಜೊತೆಗೆ ದಾಳಿ ವೇಳೆ 15 ಕೋಟಿ ರೂ. ಇರುವ ಬ್ಯಾಂಕ್ ಖಾತೆಯನ್ನೂ ಜಪ್ತಿ ಮಾಡಿತ್ತು. ರಾಯ್‌ಪುರ ಮತ್ತು ದುರ್ಗ್ ಜಿಲ್ಲೆಗಳ ಕಾಂಗ್ರೆಸ್‌ನ ಇತರ ಕೆಲವು ನಾಯಕರು ಮತ್ತು ಪೊಲೀಸ್ ಅಧಿಕಾರಿಗಳ ಕಚೇರಿಗಳ ಮೇಲೂ ದಾಳಿ ನಡೆದಿದೆ ಎಂದು ಮೂಲಗಳು ಮಾಹಿತಿ ನೀಡಿವೆ. ಈ ಬಗ್ಗೆ ಮಾತನಾಡಿರುವ ರಾಜ್ಯ ಕಾಂಗ್ರೆಸ್ ನಾಯಕ ಆನಂದ್ ಶುಕ್ಲಾ,"ಬಘೇಲ್ ಪಂಜಾಬ್‌ನ ಕಾಂಗ್ರೆಸ್ ಉಸ್ತುವಾರಿಯಾದಾಗಿನಿಂದ ಅವರನ್ನು ಗುರಿಯಾಗಿಸಲಾಗಿದೆ. ಮೊದಲಿಗೆ ಇ.ಡಿ ಅಧಿಕಾರಿಗಳು ದಾಳಿ ನಡೆಸಿದರು. ಈಗ ಸಿಬಿಐಯನ್ನು ಕಳುಹಿಸಲಾಗಿದೆ. ಈ ನಡೆಗಳು ಬಿಜೆಪಿ ಬಘೇಲ್‌ಗೆ ಹೆದರುತ್ತಾರೆ ಎಂದು ತೋರಿಸಿವೆ. ಬಿಜೆಪಿ ರಾಜಕೀಯವಾಗಿ ಹೋರಾಡಲು ವಿಫಲವಾದಾಗ ಕೇಂದ್ರದ ತನಿಖಾ ಸಂಸ್ಥೆಗಳನ್ನು ಬಳಸುತ್ತಿದೆ" ಎಂದು ಟೀಕಿಸಿದ್ದಾರೆ.

### ಶಿಸ್ತು ಉಲ್ಲಂಘಿಸಿಲ್ಲ

ಬಿಜೆಪಿಯವರೇ ಅಪಪ್ರಚಾರ ಮಾಡಿದ್ದಾರೆ ಇದು ಬಿಜೆಪಿ ಆರೋಪ ಅಷ್ಟೆ. ಕ್ಷೇತ್ರದ ವಿಚಾರಕ್ಕೆ ಮಂತ್ರಿಗಳನ್ನ ಭೇಟಿ ಮಾಡಲೇಬೇಕಾಗುತ್ತದೆ. ಸರ್ಕಾರಿ ಕಾರ್ಯಕ್ರಮಗಳಲ್ಲಿ ಮಾತ್ರ ನಾನು ಭಾಗವಹಿಸಿದ್ದೇನೆ. ಕಾಂಗ್ರೆಸ್ ಸಭೆಗಳಲ್ಲಿ ಭಾಗವಹಿಸಿಲ್ಲ ಪಕ್ಷದ ಶಿಸ್ತು ಉಲ್ಲಂಘಿಸಿಲ್ಲ ಬಜೆಟ್ ಸಭೆ ಬೆಂಗಳೂರು ಅಭಿವೃದ್ಧಿ ಸಭೆಯಲ್ಲಿ ಭಾಗವಹಿಸಿದ್ದೆ ಎಂದರು.

ಬಿಜೆಪಿಗೆ ಮುಜುಗರ ಆಗುವಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿಲ್ಲ. ನಾನು ಬಿಜೆಪಿ ಯಾವ ನಾಯಕರ ವಿರುದ್ಧವೂ ಮಾತನಾಡಿಲ್ಲ ಪಕ್ಷಕ್ಕೆ ಮುಜುಗರ ಮಾಡುವವರು ಬೇರೆಯವರು ಇದ್ದಾರೆ. ನನ್ನ ವಕೀಲರ ಜೊತೆ ಚರ್ಚಿಸಿ ಉತ್ತರ ಕೊಡುತ್ತೇನೆ. ನೋಟಿಸ್ ಗೆ ಉತ್ತರ ನೀಡುತ್ತೇನೆ ಎಂದು ಎಸ್ ಟಿ ಸೋಮಶೇಖರ್ ತಿಳಿಸಿದರು.

### ಮೂವರು ಗಂಭೀರ

ಗಂಭೀರವಾಗಿದೆ.ಸ್ಫೋಟದ ತೀವ್ರತೆಗೆ ಮನೆ ಸಂಪೂರ್ಣ ಕರಕಲಾಗಿದ್ದು, ಅಡುಗೆ ಸಿಲಿಂಡರ್ ಚಿಂದಿಯಾಗಿದ್ದು, ಅಕ್ಕ ಪಕ್ಕದ ಮನೆಗಳಿಗೂ ಸ್ಫೋಟದ ತೀವ್ರತೆ ಆವರಿಸಿದ್ದು, ಕಿಟಕಿ-ಗ್ರಿಲ್‌ಗಳೆಲ್ಲಾ ಪೂರ್ತಿಯಾಗಿ ಜಖಂಗೊಂಡಿವೆ. ಸುದ್ದಿ ತಿಳಿದ ತಕ್ಷಣವೇ ಸ್ಥಳಕ್ಕೆ ಅಗ್ನಿಶಾಮಕ ಸಿಬ್ಬಂದಿ ಧಾವಿಸಿ ಬೆಂಕಿ ನಂದಿಸಿದ್ದಾರೆ. ಪುಲಕೇಶಿನಗರ ಪೊಲೀಸರು ಪ್ರಕರಣ ದಾಖಲಿಸಿ ಮುಂದಿನ ತನಿಖೆಯನ್ನು ಕೈಗೊಂಡಿದ್ದಾರೆ.

### ಮಗು ಸಾವು

ಮಧ್ಯಾಹ್ನದ ವೇಳೆ ಮಗುವಿಗೆ ಊಟ ಕೊಟ್ಟು, ಬಳಿಕ ನಿದ್ದೆ ಬಂದ ಕಾರಣ ಮಲಗಿಸಿದ್ದರು. ಬಳಿಕ ಎಬ್ಬಿಸಿದಾಗ ಮಗು ಏಳದ ಕಾರಣ ಲಿಂಡೋರಾಜ್ ಕಾರಿನಲ್ಲಿ ಕಡಬ ಖಾಸಗಿ ಆಸ್ಪತ್ರೆಗೆ ಕರೆ ತಂದಿದ್ದರು. ವೈದ್ಯರು ಮಗುವನ್ನು ಪರೀಕ್ಷಿಸಿ ಮೃತಪಟ್ಟಿರುವುದಾಗಿ ತಿಳಿಸಿದ್ದಾರೆ.

ಕೂಡಲೇ, ಕಡಬ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿಯೂ ವೈದ್ಯರು ಮಗುವನ್ನು ಪರೀಕ್ಷಿಸಿ, ಸಾವನ್ನಪ್ಪಿರುವುದಾಗಿ ಹೇಳಿದ್ದಾರೆ. ಮಗು ಆಹಾರ ಗಂಟಲಲ್ಲಿ ಸಿಕ್ಕಿಕೊಂಡು ಅಥವಾ ಬೇರೆ ಯಾವುದೋ ಖಾಯಿಲೆ ಉಲ್ಬಣಗೊಂಡು ಮೃತಪಟ್ಟಿರುವ ಸಾಧ್ಯತೆಯ ಬಗ್ಗೆ ತಾಯಿ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಪ್ರಕರಣದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಕಡಬ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ತ್ರಿಮೂರ್ತಿ, "ಈಗಾಗಲೇ ಮೃತ ಮಗುವಿನ ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಅದರ ವರದಿ ಬಂದ ಬಳಿಕ ಸಾವಿನ ಬಗ್ಗೆ ನಿಖರ ಕಾರಣ ತಿಳಿಯಲಿದೆ" ಎಂದು ತಿಳಿಸಿದ್ದಾರೆ.

### 'ಡ್ರಗ್ಸ್ ಸೆನ್ಸಸ್' ಘೋಷಣೆ

ಭಾಗಿಯಾಗಬಹುದು ಎಂದರು. ಸ್ಥಳೀಯ ಕ್ರೀಡೆಗಳಿಗಾಗಿ ಹಳ್ಳಿಗಳಲ್ಲಿ ವಿಶೇಷ ಸೌಲಭ್ಯಗಳನ್ನು ಒದಗಿಸಲಾಗುವುದು. ತರಣ್ ತರಣ್ ಜಿಲ್ಲೆಯಲ್ಲಿ ಈಗಾಗಲೇ 87 ಆಟದ ಮೈದಾನಗಳನ್ನು ನಿರ್ಮಿಸಲಾಗಿದ್ದು, 3,000 ಒಳಾಂಗಣ ಜಿಮ್‌ಗಳನ್ನು ಸ್ಥಾಪಿಸಲಾಗುವುದು. ಪಂಜಾಬ್ ಇತಿಹಾಸದಲ್ಲೇ ಮೊದಲ ಬಾರಿಗೆ 979 ಕೋಟಿ ರೂ. ಗಳನ್ನು ಕ್ರೀಡೆಗೆ ಮೀಸಲಿಡಲಾಗಿದೆ ಎಂದು ಹೇಳಿದರು.

### ಮೂವರು ಅಮಾನತು

ಪೊಲೀಸರ ಕರ್ತವ್ಯ ಲೋಪದಿಂದ ಪರಿಸ್ಥಿತಿ ಉದ್ವಿಗ್ನಗೊಂಡಿತು ಎಂಬ ಆರೋಪ ಹಿನ್ನೆಲೆಯಲ್ಲಿ ಮೂವರು ಪೊಲೀಸರನ್ನು ಅಮಾನತು ಮಾಡಲಾಗಿದೆ.

ಉದಯಗಿರಿ ಗಲಾಟೆ ಬಳಿಕ ಎಸ್‌ಐ ರೂಪೇಶ್ ಅವರನ್ನು ಪೊಲೀಸ್ ಆಯುಕ್ತರ ಕಚೇರಿಯಲ್ಲಿರುವ ಆಟೋಮೇಷನ್ ಕೇಂದ್ರಕ್ಕೆ ವರ್ಗಾವಣೆ ಮಾಡಲಾಗಿತ್ತು. ಇದೀಗ ಅವರು ಸೇರಿದಂತೆ ಮೂವರು ಅಮಾನತುಗೊಂಡಿದ್ದಾರೆ. ಘಟನೆ ನಡೆದು ಒಂದೂವರೆ ತಿಂಗಳ ಬಳಿಕ ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಅಮಾನತು ಆದೇಶ ಹೊರಡಿಸಿದ್ದಾರೆ.

### ಪಿಐಎಲ್ ವಜಾ

ಒಳಗಾಗುತ್ತಾರೆ. ಅದನ್ನ ಜಡ್ಜ್‌ಗಳು ನೋಡಿಕೊಳ್ಳುತ್ತಾರೆ. ನಿಮ್ಮ ರಾಜಕೀಯ **ನಾನ್‌ಸೆನ್ಸ್‌ಗಳನ್ನೆಲ್ಲಾ ನಾವು ವಿಚಾರಣೆ ಮಾಡಲ್ಲ ಎಂದು ವಕೀಲ ವಿನಯ್ ಕುಮಾರ್ ಸಿಂಗ್‌ರನ್ನು ತರಾಟೆ ತೆಗೆದುಕೊಂಡಿತು.**

### ಭಯ ಏನಾದರೂ ಇದೆಯೇ.

ಕೊಡುವ ಬದಲಾಗಿ ಇವರೆಲ್ಲವನ್ನೂ ಈಗ ಮರೆಮಾಚಿದ್ದಾರೆ. ದುಡ್ಡೆಷ್ಟು ಹೊಡೆದಿರಿ? ಆಸ್ತಿ ಎಷ್ಟು ಮಾಡಿದ್ದೀರಿ? ಜನರಿಗೆ ಎಷ್ಟು ತೆರಿಗೆ ಹಾಕಿದ್ದೀರಿ? ಬೆಲೆ ಏರಿಕೆ ಎಷ್ಟು ಮಾಡಿದಿರಿ? ದಲಿತರ ಹಣ ಎಷ್ಟು ಲೂಟಿ ಮಾಡಿದ್ದೀರಿ? ಎಷ್ಟು ಜನರ ಹನಿಟ್ರ್ಯಾಪ್ ಮಾಡಿದಿರಿ? ಫೋನ್ ಟ್ಯಾಪಿಂಗ್ ಎಷ್ಟಾಗಿದೆ? ಎಂಬ ಚರ್ಚೆ ಆಗುವಂತಾಗಿದೆ ಎಂದು ಟೀಕಿಸಿದರು.

ಇದು ಆಡಳಿತವೇ? ಇಂಥ ಕೆಟ್ಟ ಪರಿಸ್ಥಿತಿಯಲ್ಲಿ ಈ ಸರಕಾರ ಇರಲೇಬಾರದಿತ್ತು. ಇಂಥ ಪರಿಸ್ಥಿತಿಗೆ ರಾಜ್ಯವನ್ನು ತಳ್ಳುವ ಬದಲಾಗಿ ರಾಜೀನಾಮೆ ಕೊಟ್ಟು ಆ ಕಡೆ ಹೊರಟು ಹೋಗಬೇಕಿತ್ತು ಎಂದು ತಿಳಿಸಿದರು.ದಲಿತರಿಗೆ ವಂಚನೆ, ಮೋಸ ಮಾಡಿದ ಕಾಂಗ್ರೆಸ್ ಸರಕಾರಪರಿಶಿಷ್ಟ ಜಾತಿ, ಪಂಗಡದ ಅಭಿವೃದ್ಧಿಗೆ ಮೀಸಲಾಗಿಟ್ಟ ಸಂಬಂಧಿಸಿದ 39 ಸಾವಿರ ಕೋಟಿ ಹಣವನ್ನು ನುಂಗಿ ನೀರು ಕುಡಿದದ್ದು ಕಾಂಗ್ರೆಸ್ ಸರಕಾರ ಹಾಗೂ ಮುಖ್ಯಮಂತ್ರಿಗಳು ಎಂದು ಟೀಕಿಸಿದರು. ಕಾಂಗ್ರೆಸ್ ಸರಕಾರ ದಲಿತರಿಗೆ ವಂಚನೆ, ಮೋಸ ಮಾಡಿದೆ ಎಂದು ಛಲವಾದಿ ನಾರಾಯಣಸ್ವಾಮಿ ಅವರು ಆರೋಪಿಸಿದರು.ಹನಿಟ್ರ್ಯಾಪ್ ವಿಚಾರ; ಇದರಲ್ಲಿ ಬಿಜೆಪಿಯ ಯಾವ ನಾಯಕರೂ ಇಲ್ಲ. ಇದ್ದಿದ್ದರೆ ಈಗಾಗಲೇ ದೊಡ್ಡ ರಂಪರಾಮಾಯಣ ಆಗುತ್ತಿತ್ತು. ಅದನ್ನು ಕೂಡಲೇ ತನಿಖೆಗೆ ಆದೇಶಿಸುತ್ತಿದ್ದರು. ಇದು ಕಾಂಗ್ರೆಸ್ಸಿನ ಮನೆಯ ಮೇಲೆ ಕಾಂಗ್ರೆಸ್ಸಿನವರೇ ಅತ್ಯಾಚಾರ ಮಾಡಿದಂತಿದೆ ಎಂದು ಟೀಕಿಸಿದರು. ಕಾಂಗ್ರೆಸ್ಸಿನ ನಾಯಕರೇ ತಮ್ಮ ನಾಯಕರ ಮೇಲೆ ಹನಿಟ್ರ್ಯಾಪ್ ಮಾಡಿಸುವ ಅವಸ್ಥೆಯನ್ನು ನಾವಿವತ್ತು ಕಾಣುತ್ತಿದ್ದೇವೆ ಎಂದು ದೂರಿದರು. ಅವರಿಗೆ ಮುಜುಗರವೂ ಇಲ್ಲ; ನೋವೂ ಇಲ್ಲ ಎಂದರು. ಇಷ್ಟಾದರೂ ಕೂಡ ಹನಿಟ್ರ್ಯಾಪ್ ಬಗ್ಗೆ ಮುಖ್ಯಮಂತ್ರಿಗಳು ಒಂದು ಮಾತನ್ನೂ ಆಡಿಲ್ಲ; ತನಿಖೆ ಮಾಡಿಸೋಣ ಎಂದದ್ದು ಬಿಟ್ಟರೆ ಬೇರೇನೂ ಹೇಳಿಲ್ಲ. ಅಂದ ಮೇಲೆ ಮುಖ್ಯಮಂತ್ರಿಗಳಿಗೆ ಹನಿಟ್ರ್ಯಾಪ್ ಭಯ ಏನಾದರೂ ಇದೆಯೇ ಎಂಬ ಅನುಮಾನ ಕಾಡುವಂತಾಗಿದೆ ಎಂದು ತಿಳಿಸಿದರು. ನಂದೂ ಎಲ್ಲಾದರೂ ಇದೆಯೇ ಎಂಬ ಭಯ ಅವರಿಗೂ ಇರಬೇಕು ಎಂದು ವಿಶ್ಲೇಷಿಸಿದರು. ಭಯ ಇಲ್ಲದಿದ್ದರೆ ನಿಮಗೆ ತನಿಖೆ ಮಾಡಿಸಲು ಏನಾಗಿದೆ ಎಂದು ಪ್ರಶ್ನಿಸಿದರು.

### ಮುಸ್ಲಿಮರ ಓಲೈಕೆ

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ದಿನೇಶ್ ಗುಂಡೂರಾವ್ ಅವರು, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು 32 ಲಕ್ಷ ಮುಸ್ಲಿಂ ಕುಟುಂಬಗಳಿಗೆ ಮೋದಿ ಹೆಸರಲ್ಲಿ ಈದ್ ಕಿಟ್ ನೀಡಿದ್ದಾರೆ.

ಪವಿತ್ರ ರಂಜಾನ್ ಸಮಯದಲ್ಲಿ ಮುಸ್ಲಿಮರಿಗೆ ಈದ್ ಕಿಟ್ ಕೊಡಲಿ. ಇದಕ್ಕೆ ನಮ್ಮ ಆಕ್ಷೇಪವಿಲ್ಲ. ಆದರೆ ಇದೇ ಕಾರ್ಯಕ್ರಮವನ್ನು ಕಾಂಗ್ರೆಸ್ ನವರು ಮಾಡಿದ್ದರೆ ಪರಿಸ್ಥಿತಿ ಹೇಗಿರುತಿತ್ತು ಎಂಬುದನ್ನು ಒಮ್ಮೆ ಊಹಿಸಿಕೊಳ್ಳಿ ಎಂದಿದ್ದಾರೆ.

ಕಾಂಗ್ರೆಸ್ ನವರು ಈದ್ ಕಿಟ್ ಕೊಟ್ಟರೆ ಬಿಜೆಪಿ ನಾಯಕರು ಈಗಾಗಲೇ ಬೀದಿಗಿಳಿಯುತ್ತಿದ್ದರು. ಕಾಂಗ್ರೆಸ್ ಮುಸ್ಲಿಮರ ತುಷ್ಟೀಕರಣ ಮಾಡುತ್ತಿದೆ, ಓಲೈಕೆ ರಾಜಕಾರಣ ಮಾಡುತ್ತಿದೆ ಎಂದು ರಾದ್ಧಾಂತ ಮಾಡುತ್ತಿದ್ದರು.

ಆದರೆ ಈಗ ಸೌಗಾತ್-ಎ-ಮೋದಿ ಹೆಸರಿನಲ್ಲಿ ಬಿಜೆಪಿಯ ನಾಯಕರೇ ಮುಸ್ಲಿಮರಿಗೆ ಈದ್ ಕಿಟ್ ಕೊಡುತ್ತಿದ್ದಾರೆ. ಇದು ತುಷ್ಟೀಕರಣವಲ್ಲವೆ ಇದು ಓಲೈಕೆ ರಾಜಕಾರಣವಲ್ಲವೆ ಎಂದು ಪ್ರಶ್ನಿಸಿದ್ದಾರೆ. ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾ ಸೌಗಾತ್-ಎ-ಮೋದಿ ಅಭಿಯಾನದ ಮೂಲಕ ಈದ್‌ಗೆ ಮುಂಚಿತವಾಗಿ ದೇಶಾದ್ಯಂತ 32 ಲಕ್ಷ ಹಿಂದುಳಿದ ಮುಸ್ಲಿಮರಿಗೆ ವಿಶೇಷ ಕಿಟ್‌ಗಳನ್ನು ವಿತರಿಸುತ್ತಿದೆ. ಬಿಜೆಪಿಯ ಈ ಅಭಿಯಾನವು ದೇಶದೆಲ್ಲೆಡೆ ಭಾರೀ ಚರ್ಚೆಗೆ ಗ್ರಾಸವಾಗಿದೆ.

### ಅತಿಶಿಗೆ ನೋಟಿಸ್ ಜಾರಿ

ಕೈಗೆತ್ತಿಕೊಂಡಿತು. ಈ ಅರ್ಜಿ ವಿಚಾರಣೆ ವೇಳೆ ಭಾರತೀಯ ಚುನಾವಣಾ ಆಯೋಗ ಮತ್ತು ರಿಟರ್ನಿಂಗ್ ಅಧಿಕಾರಿಗಳು ಅರ್ಜಿಯಲ್ಲಿ ಪಕ್ಷಗಳಾಗಿ ಸೇರಿಸಿದ್ದಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಿದರು.ಫೆ. 5ರಂದು ನಡೆದ ದೆಹಲಿ ವಿಧಾನಸಭಾ ಚುನಾವಣೆ ಫಲಿತಾಂಶ ಫೆ. 8ರಂದು ಹೊರಬಿದ್ದಿತ್ತು. ಕಲ್ಕಾಜಿ ಕ್ಷೇತ್ರದಿಂದ ಕಣಕ್ಕೆ ಇಳಿದಿದ್ದ ಅತಿಶಿ ತಮ್ಮ ಎದುರಾಳಿ ಬಿಜೆಪಿಯ ರಮೇಶ್ ಬಿಧುರಿ ವಿರುದ್ಧ 3,521 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಅತಿಶಿ ವಿರುದ್ಧ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಕಲ್ಕಾಜಿ ಕ್ಷೇತ್ರದ ನಿವಾಸಿಗಳಾಗಿದ್ದಾರೆ.

# ಮಾಲೂರು ಪಟ್ಟಣ ಪುರಸಭೆ ಆಯ–ವ್ಯಯ ಮಂಡನೆ

**ಮಾಲೂರು:** ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ನಡೆದ 2025–26ನೇ ಸಾಲಿನ ಆಯ–ವ್ಯಯ ಸಭೆಯಲ್ಲಿ ಪುರಸಭೆ ಅಧ್ಯಕ್ಷ ಕೋಮಲ ಅವರು 73,17,448ಗಳ ಉಳಿತಾಯ ಬಜೆಟ್ ಘೋಷಿಸಿದರು.

ಪಟ್ಟಣದ ಪುರಸಭೆಯಲ್ಲಿ ಪ್ರತಿವರ್ಷ ಆಯವ್ಯಯ ಮಂಡನೆಯನ್ನು ಪುರಸಭಾ ಅಧ್ಯಕ್ಷರು ಮಂಡಿಸಲಿದ್ದು, ಅದೇ ರೀತಿ ಪ್ರಸಕ್ತ ವರ್ಷದ 2025–26ನೇ ಸಾಲಿನ ಆಯ–ವ್ಯಯ ಮಂಡನೆಯನ್ನು ಪುರಸಭಾಧ್ಯಕ್ಷ ಕೋಮಲ ನಾರಾಯಣ್ ಮಂಡಿಸಿ, ಪುರಸಭೆಯ ಸರ್ವತೋಮುಖ ಅಭಿವೃದ್ಧಿಗೆ ಮತ್ತು ನಾಗರೀಕರ ಸೇವೆ ಮಾಡುತ್ತಿರುವುದು ನನ್ನ ಅದೃಷ್ಟವೆಂದು ಭಾವಿಸಿ ಮಾಲೂರು ಪುರಸಭೆಗೆ ಬರಬಹುದಾದ ನಿರೀಕ್ಷಿತ ಆದಾಯ ಮತ್ತು ವೆಚ್ಚಗಳ ಯೋಜನೆಯನ್ನು ರೂಪಿಸಿದ್ದು ವಿವಿಧ ಮೂಲಗಳಿಂದ ಬರಬಹುದಾದ ನಿರೀಕ್ಷಿತ ಆದಾಯಗಳ ಸ್ವಯಂಘೋಷಿತ ಆಸ್ತಿ ತೆರಿಗೆ ರೂಮ್ 319.30 ಲಕ್ಷ ನೀರಿನ ಸರಬರಾಜು ಸಂಪರ್ಕಗಳಿಂದ ರೂ. 85 ಲಕ್ಷ ವಾಣಿಜ್ಯ ಸಂಕೀರ್ಣಗಳ ಬಾಡಿಗೆ 150 ಲಕ್ಷ ಪರೀ ವೀಕ್ಷಣೆ ಶುಲ್ಕ ಕಟ್ಟಡ ಪರವಾನಿಗಿ ಖಾತಾನಕಲು ಕಾತ ಬದಲಾವಣೆ ಇತರೆ ಶುಲ್ಕಗಳಿಂದ 313.15 ಲಕ್ಷ ಉದ್ಯಮ ಪರವಾನಿಗೆ ಮೂಲಗಳಿಂದ 55 ಲಕ್ಷ ಸೂಚನಾ ಫಲಕ ಜಾಹೀರಾತು ತೆರಿಗೆ 50 ಲಕ್ಷ ಅನಧಿಕೃತ ಬಡಾವಣೆಗಳ ನಿವೇಶನಗಳ ಸಕ್ರಮದಿಂದ ಬರುವ ಆದಾಯ 230 ಲಕ್ಷ ವೇತನ ಮತ್ತು ವಿದ್ಯುತ್ ಅನುದಾನ ಮೂಲಗಳಿಂದ 1944 ಲಕ್ಷ ಎಸ್ ಎಫ್ ಸಿ ವಿಶೇಷ ಅನುದಾನ ಗೃಹ ಭಾಗ್ಯ ಮತ್ತು ಇತರ ಮೂಲಗಳಿಂದ 592 ಲಕ್ಷ ಬರ ಪರಿಹಾರ ಮತ್ತು ಎಸ್ ಡಬ್ಲ್ಯೂ ಎಂ ಕಾಮಗಾರಿಗಳಿಗಾಗಿ 450 ಲಕ್ಷ 15ನೇ ಹಣಕಾಸು ಕೇಂದ್ರ ಹಣಕಾಸು ಯೋಜನೆ ಅಡಿಯಲ್ಲಿ 240 ಲಕ್ಷ ಕೇಂದ್ರ ಪುರಸ್ಕೃತ ಯೋಜನೆ ಯಾಮಾಲ್ ಯೋಜನೆ ಅಡಿ 10 ಲಕ್ಷ ಎಸ್ ಸಿ ಪಿ ಎಸ್ ಪಿ ಮತ್ತು ಇತರೆ ಕಲ್ಯಾಣ ಕಾರ್ಯಕ್ರಮಗಳಿಗೆ 37.37 ಲಕ್ಷ ಇತರ ಎಲ್ಲಾ ಮೂಲಗಳಿಂದ 20084 . 80 ಲಕ್ಷ ಈ ಎಲ್ಲಾ ಮೂಲಗಳಿಂದ ನಿರೀಕ್ಷಿಸಲಾದ ಪುರಸಭೆಯ ಆದಾಯದಿಂದ ಬರಬಹುದಾದ ಒಟ್ಟು ಆದಾಯ 6475..07 ಲಕ್ಷ ರೂಗಳ ಅಂದಾಜನ್ನು ನಿರೀಕ್ಷಿಸಲಾಗಿದೆ ಎಲ್ಲಾ ಅನುದಾನಗಳ ಮೇಲೆ ಈ ಸಾಲಿನ ಆಯವ್ಯಯವನ್ನು ತಯಾರಿಸಿದ್ದು ಸರ್ಕಾರದ ವಿವಿಧ ಅನುದಾನಗಳಿಂದ ಬರುವ ಅನುದಾನಕ್ಕೆ ಅನುಗುಣವಾಗಿ ಹೊಸ ಯೋಜನೆಗಳನ್ನು ಅಂದಾಜಿಸಲಾಗಿದೆ.

ಪುರಸಭೆಯ ನಾಗರಿಕರಿಗೆ ದಿನನಿತ್ಯದ ಅತ್ಯವಶ್ಯಕವಾದಂತಹ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಚರಂಡಿ ಬೀದಿ ದೀಪ ಸ್ವಚ್ಛತೆ ನಿರ್ವಹಣೆಯನ್ನು ಮೊದಲ ಆದ್ಯತೆಯಾಗಿ ಈ ವರ್ಷದ ಆಯವ್ಯಯದಲ್ಲಿ ಈ ರೀತಿ ರೂಪಿಸಿಕೊಳ್ಳಲಾಗಿದೆ.

ಪಟ್ಟಣದ ಪುರಸಭಾ ವ್ಯಾಪ್ತಿಯಲ್ಲಿ 25 26 ನೇ ಸಾಲಿಗೆ ಕೊಳವೆ ಬಾವಿಗಳನ್ನು ಕೊಡಿಸುವುದು ಪೈಪ್ ಲೈನ್ ಅಳವಡಿಕೆ ವಿದ್ಯುತ್ ಶಕ್ತಿ ಶುದ್ಧ ಕುಡಿಯುವ ನೀರಿನ ಘಟಕ ನೀರು ಸರಬರಾಜು ವಿತರಣಾ ಸಲಕರಣೆಗಳು ಮತ್ತು ಸಾಮಗ್ರಿಗಳು ಖರೀದಿಸುವುದು ವೇತನ ಹಾಗೂ ಸಾರ್ವಜನಿಕರಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸಲು ಕ್ರಮಗಳನ್ನು ಕೈಗೊಂಡಿದ್ದು ಖರ್ಚಾಗಬಹುದಾದ ಒಟ್ಟು ಅಂದಾಜು ಮೊತ್ತ 1537.62 ಲಕ್ಷ

ಪುರಸಭೆ ವ್ಯಾಪ್ತಿಯಲ್ಲಿ ಉದ್ಯಾನವನಗಳನ್ನು ಅಭಿವೃದ್ಧಿಗೊಳಿಸಲು 40,000 ಸ್ಮಶಾನಗಳ ಮೂಲಭೂತ ಅಭಿವೃದ್ಧಿಗಾಗಿ 30 ಲಕ್ಷ ಘನತ್ಯಾಜ್ಯ ವಿಲೇವಾರಿ ಘಟಕ ಅಭಿವೃದ್ಧಿ ಮತ್ತು ನಿರ್ವಹಣೆಗೆ ಅವರ ಕಾರ್ಮಿಕರ ವೇತನ ಯಂತ್ರೋಪಕರಣಗಳಾಗು ವಾಹನಗಳ ನಿರ್ವಹಣೆ ಸೇರಿದಂತೆ ಇತರೆ ಎಲ್ಲಾ ವೆಚ್ಚಗಳು 569 ಲಕ್ಷ ಅಂದಾಜು ಮಾಡಲಾಗಿದೆ



ಒಳಚರಂಡಿ ಯೋಜನಾ ಅಭಿವೃದ್ಧಿಗೊಳಿಸಲು 130 ಲಕ್ಷ ಬಸ್ ನಿಲ್ದಾಣ ನಿರ್ಮಾಣಕ್ಕಾಗಿ 120ಲಕ್ಷ ರಸ್ತೆ ಚರಂಡಿ ಇತರೆ ಅಭಿವೃದ್ಧಿ ಕಾಮಗಾರಿಗಳಿಗಾಗಿ 240 ಲಕ್ಷ ಎಸ್‌ಸಿಪಿ ಟಿ ಎಸ್ ಪಿ ಮತ್ತು ಇತರೆ ಕಲ್ಯಾಣ ಕಾರ್ಯಕ್ರಮಗಳಿಗಾಗಿ 37.37 ಲಕ್ಷ ಪುರಸಭೆಯ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನ ಅಪಾಯ ದೀನ್ ದಯಾಳ್ ಅಂತ್ಯೋದಯ ಯೋಜನೆ ಕಾರ್ಯಕ್ರಮಗಳಿಗೆ 10 ಲಕ್ಷ ಕಚೇರಿ ಉಪಯೋಗಕ್ಕಾಗಿ ಅಗತ್ಯ ಪೀಠೋಪಕರಣಗಳ ಖರೀದಿಗೆ 20 ಲಕ್ಷ ಪುರಸಭೆ ಸಿಬ್ಬಂದಿ ವೇತನಕ್ಕೆ ರೂ.450 ಲಕ್ಷ ಕಾಯ್ದಿರಿಸಲಾಗಿದೆ ಪುರಸಭೆ ಆಡಳಿತ ವೆಚ್ಚಗಳಿಗೆ ಮತ್ತು ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನ ಖರೀದಿ ಹಾಗೂ ಇನ್ನಿತರ ವೆಚ್ಚಗಳಿಗಾಗಿ 85.04 ಲಕ್ಷ ಕೌನ್ಸಿಲ್ ಸಂಬಂಧಿತ ವೆಚ್ಚಗಳಿಗಾಗಿ 47 ಲಕ್ಷ ಇತರೆ ಎಲ್ಲಾ ವೆಚ್ಚಗಳಿಗೆ 4,399 ಲಕ್ಷ ಅಂದಾಜು ಮಾಡಲಾಗಿದೆ ಎಲ್ಲಾ ಮೂಲಗಳಿಂದ ನಿರೀಕ್ಷಿತ ಒಟ್ಟು ವೆಚ್ಚ 71593 ಲಕ್ಷಗಳಾಗಬಹುದೆಂದು ಅಂದಾಜಿಸಲಾಗಿದೆ ಎಂದರು

ಹಯವೆಯ ಸಭೆಯ ನಂತರ ನಡೆದ ಸಭೆಯಲ್ಲಿ ಶಾಸಕ ಕೆ ವೈ ನಂಜೇಗೌಡ ಭಾಗವಹಿಸಿದ್ದರು ಪಟ್ಟಣದಲ್ಲಿ ಮುಂದಿನ ತಿಂಗಳು ಕರಗ ಮಹೋತ್ಸವ ನಡೆಯುವುದರಿಂದ ಕರಗ ಸಂಚರಿಸುವ ರಸ್ತೆಗಳ ಗುಂಡಿ ಮುಚ್ಚುವುದು ಸ್ವಚ್ಛತೆ ಕಾರ್ಯ ಕೈಗೊಳ್ಳಲು ಸಭೆಯಲ್ಲಿ ಸರ್ವಾನು ಮತದಿಂದ ತೀರ್ಮಾನಿಸಲಾಯಿತು

ಈ ಸಂದರ್ಭದಲ್ಲಿ ಶಾಸಕ ನಂಜೇಗೌಡ ಮಾತನಾಡಿ ಅಧಿಕಾರಿಗಳು ಸ್ವಚ್ಛತೆ ಬಗ ಕ್ರಮ ಕೈಗೊಳ್ಳಬೇಕು 20 ದಿನದೊಳಗೆ ಡೆಸ್ಕ್ ಕ್ಲಬ್ ಕಾಮಗಾರಿ ಯನ್ನು ಪ್ರಾರಂಭಿಸುವಂತೆ ಹೇಳಿದರು

ಜಿಲ್ಲಾಧಿಕಾರಿಗಳು ಎರಗೋಲ್ ಡ್ಯಾಮಿಗೆ ಭೇಟಿ ನೀಡಿ ವೀಕ್ಷಿಸಿ ಯೋಜನೆ ರೂಪಿಸಿದ್ದಾರೆ ಈ ಹಿಂದೆ ಪಟ್ಟಣಕ್ಕೆ ಏಳು ಗಂಟೆ ಕಾಲ ನೀರು ಸರಬರಾಜ ಆಗುತ್ತಿತ್ತು ಆದರೆ ಪ್ರಸ್ತುತ 12 ರಿಂದ 14 ಗಂಟೆ ಕಾಲ ಪಟ್ಟಣದಲ್ಲಿ ನೀರು ಸರಬರಾಜು ಮಾಡಲಾಗುವುದು ಜಿಲ್ಲಾಧಿಕಾರಿಗಳು ಕೈಗೊಂಡ ತೀರ್ಮಾನಕ್ಕೆ ತಾಲೂಕಿನ ಜನತೆಯ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ಹೇಳಿದವರು ಪಟ್ಟಣದ 27 ವಾರ್ಡ್ಗಳಲ್ಲಿ ಈಗಾಗಲೇ 11 ವಾರ್ಡುಗಳಲ್ಲಿ ಏಳು ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ ಮೊದಲು ಪಟ್ಟಣಕ್ಕೆ ಎರಡು ಎಂ ಎಲ್ ಡಿ ನೀರು ಸರಬರಾಜು ಆಗುತ್ತಿತ್ತು ಪ್ರಸ್ತುತ 3 ಎಂ.ಎಲ್.ಡಿ ಹೆಚ್ಚುವರಿಯಾಗಿ ಅಂದರೆ ಐದು ಎಂ ಎಲ್ ಡಿ ಒಟ್ಟು ನೀರು ಸರಬರಾಜು ಆಗಲಿದ್ದು ಈಗಿನ 11 ವಾರ್ಡುಗಳ ಜೊತೆಗೆ ಮತ್ತೆ ಏಳು ವಾರ್ಡ್ಗಳನ್ನು ಸೇರಿಸಿ 18 ವಾರ್ಡುಗಳಿಗೆ ಮೂರು ದಿನಗಳಿಗೊಮ್ಮೆ ನೀರು ಸರಬರಾಜು ಮಾಡಲು ಕ್ರಮ ವಹಿಸಲಾಗುವುದು ಎಂದರು.

ಮಾರ್ಕಂಡಯ್ಯ ಕುಡಿಯುವ ನೀರು ಯೋಜನೆಗೆ ಸರ್ಕಾರ 42 ಕೋಟಿ ಖರ್ಚು ಮಾಡಿ 186ಹಳ್ಳಿಗಳಿಗೆ ನೀರು ಸರಬರಾಜಿಗೆ ಪೈಪ್ಲೈನ್ ಮಾಡಿತ್ತು ಆದರೆ ಪೈಪ್ ಲೈನ್ ದುರಸ್ತಿಗೊಂಡಿರುವುದರಿಂದ ಈ ಎಲ್ಲಾ ಗ್ರಾಮಗಳಿಗೆ ನೀರು ಸರಬರಾಜು ಆಗುತ್ತಿಲ್ಲ ಪೈಪ್ಲೈನ್ ಮಾಡಿಸುವ ಬಗ್ಗೆ ಪಂಚಾಯತ್ ರಾಜ್ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರ ಬಳಿ ಚರ್ಚಿಸಿ ಪೈಪ್ಲೈನ್ ದುರಸ್ತಿಗೊಳಿಸಿ ಶುದ್ಧ ಕುಡಿಯುವ ನೀರು ಸರಬರಾಜು ಮಾಡಲಾಗುವುದು ಎಂದರು.

ಪುರಸಭೆ ಉಪಾಧ್ಯಕ್ಷ ವಿಜಯಲಕ್ಷ್ಮಿ ಸ್ಥಾಯಿ ಸಮಿತಿಯ ಅಧ್ಯಕ್ಷ ಎ ರಾಜಪ್ಪ ಮುಖ್ಯ ಅಧಿಕಾರಿ ಎಬಿ ಪ್ರದೀಪ್ ಯೋಜನಾ ಪ್ರಾಧಿಕಾರ ಅಧ್ಯಕ್ಷ ಮಹಮ್ಮದ್ ನಹಿಮ್ ಉಲ್ಲಾ ಪರಿಸರ ಅಭಿಯಂತರ ಶಾಲಿನಿ ಕಂದಾಯ ಅಧಿಕಾರಿ ರೇಣುಕಾ ಲೆಕ್ಕಾಧಿಕಾರಿ ಜೈರಾಮ್ ಆರೋಗ್ಯ ಇಲಾಖೆಯ ಹಿರಿಯ ನಿರೀಕ್ಷಕ ಶ್ರೀನಿವಾಸ್, ಕಿರಿಯ ನಿರೀಕ್ಷಕ ರಾಜಣ್ಣ, ಕಂದಾಯ ನಿರೀಕ್ಷಕ ನಾಗರಾಜ್ ಹಾಗೂ ಪುರಸಭೆಯ ಸದಸ್ಯರು ಹಾಗೂ ಸಿಬ್ಬಂದಿ ಹಾಜರಿದ್ದರು

# ಒಳ ಮೀಸಲಾತಿ ಜಾರಿಗಾಗಿ ಸ್ವಾತಂತ್ರ್ಯ ಉದ್ಯಾನವನದಲ್ಲಿ ಧರಣಿ ಮುಂದುವರಿಕೆ




**ಬೆಂಗಳೂರು:** ಕಳೆದ ಇಪ್ಪತ್ತು ದಿನಗಳಿಂದ ದಾವಣಗೆರೆ ಜಿಲ್ಲೆಯ ಹರಿಹರದ ದಲಿತ ಸಂಘರ್ಷ ಸಮಿತಿಯ ಪ್ರೊ. ಕೃಷ್ಣಪ್ಪ ಸಮಾದಿ ಬಳಿಯಿಂದ ಪ್ರಾರಂಭಿಸಲಾದ "ಒಳಮೀಸಲಾತಿ ಹೋರಾಟ ಸಮಿತಿಯ ಪಾದಯಾತ್ರೆ ಶುಕ್ರವಾರ ಸ್ವಾತಂತ್ರ್ಯ ಉದ್ಯಾನವನ ತಲುಪಿದ್ದು ಕೂಡಲೇ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯಂತೆ ಒಳ ಮೀಸಲಾತಿ ಜಾರಿ ತರಬೇಕೆಂದು ಧರಣಿ ಪ್ರತಿಭಟನೆ ಮುಂದುವರೆದಿದೆ.

ಮಂಗಳವಾರ ಧರಣಿಯಲ್ಲಿ ಪಾಲ್ಗೊಂಡಿದ್ದ ಜೈ ಮಾದಿಗ ಬೌದ್ಧಿಕ ಸಂಘಟನೆಯ ರಾಜ್ಯಾಧ್ಯಕ್ಷ ಮುನಿರಾಜು ಮಾತನಾಡಿ, ಹರಿಹರದಿಂದ ಒಳ ಮೀಸಲಾತಿ ಜಾರಿಗಾಗಿ ಬಿಸಿಲು ಲಕ್ಕಿಸದೇ ನೂರಾರು ಯುವಕರು ಬೆಂಗಳೂರಿನಡೆಗೆ ಪಾದಯಾತ್ರೆ ಮೂಲಕ ನಡೆದು ಶ್ರಮಿಸಿದ್ದಾರೆ ಆದರೆ ಸಂಬಂಧಿತ ಸಚಿವರು, ಮುಖ್ಯಮಂತ್ರಿಗಳಿಂದ ಸರಿಯಾದ ಯಾವುದೇ ಪ್ರತಿಕ್ರಿಯೆ ದೊರೆತಿಲ್ಲ. ಈ ಸಂಬಂಧ ಬೀದರ್ ನಿಂದ ಭಾಸ್ಕರ್ ಪ್ರಸಾದ್ ನೇತೃತ್ವದಲ್ಲಿ ಚಳವಳಿ ಆರಂಭಗೊಂಡಿದೆ,ನಮ್ಮ ಸಮುದಾಯದ ಸಚಿವರು ಇದ್ದು ಇಲ್ಲದಂತಾಗಿದೆ ಎಂದು ಹೇಳಿದರು.

ದಲಿತ ಸ್ವಾಭಿಮಾನಿ ಸೇವಾ ಸಮಿತಿಯ ರಾಜ್ಯಾಧ್ಯಕ್ಷ ಚನ್ನಕೇಶವ ಜಿ.ಸಿ.ಮಾತನಾಡಿ,ಒಳ ಮೀಸಲಾತಿ ಕುರಿತು ಸುಪ್ರೀಂಕೋರ್ಟ್ ಸದಾಶಿವ ಆಯೋಗದ ವರದಿಯಂತೆ ಅನುಷ್ಠಾನಗೊಳಿಸುವಂತೆ ಆದೇಶ ನೀಡಿದ್ದರೂ ಮುಖ್ಯಮಂತ್ರಿಗಳು, ಸಚಿವರು ಮೀನಾಮೇಷ ಎಣಿಸುತ್ತಿದ್ದಾರೆ. ಒಳ ಮೀಸಲಾತಿ ಸಂಬಂಧಿಸಿದ ಸಚಿವರು,ಶಾಸಕರು ಸದನದಲ್ಲಾಗಲಿ, ಹೊರಗಡೆಯಾಗಲಿ ಮಾತನಾಡುತ್ತಿಲ್ಲ ನಮ್ಮನ್ನು ವೋಟ್ ಬ್ಯಾಂಕ್‌ಗಾಗಿ ಬಳಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

# ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಗ್ರಾಮೀಣ ಎಲ್‌ಪಿಜಿ ವಿತರಕರಿಂದ ಬೃಹತ್ ಪ್ರತಿಭಟನೆ

**ಬೆಂಗಳೂರು:** ಗ್ರಾಮೀಣ ಭಾಗದ ಎಲ್‌ಪಿಜಿ ಗ್ಯಾಸ್ ವಿತರಕರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಸ್ವಾತಂತ್ರ್ಯ ಉದ್ಯಾನವನದಲ್ಲಿ ಪ್ರತಿಭಟನೆ ನಡೆಸಿದರು.

ಕರ್ನಾಟಕ ಎಲ್ ಪಿ ಜಿ ಗ್ರಾಮೀಣ ವಿತರಕ ಫೆಡರೇಶನ್ ಗೌರವ ಅಧ್ಯಕ್ಷ ಬಸವರಾಜ ಮಾತನಾಡಿ, ರಾಜ್ಯದಲ್ಲಿ ಗ್ರಾಮೀಣ ಭಾಗಗಳಿಗೆ ಎಲ್‌ಪಿಜಿ ಗ್ಯಾಸ್ ವಿತರಿಸಲು ಒಂಬತ್ತು ಸಾವಿರ ವಿತರಕರನ್ನು ದೇಶಾದ್ಯಂತ ನೇಮಕ ಮಾಡಿದ್ದು, ಇದರಿಂದ ಗ್ರಾಮೀಣ ಭಾಗದ 40ರಿಂದ60 ಸಾವಿರ ಮಂದಿಗೆ ಉದ್ಯೋಗ ದೊರೆಯುವುದೆಂಬ ಉದ್ದೇಶದಿಂದ 15 ಕಿಲೋ ಮೀಟರ್ ವ್ಯಾಪ್ತಿಯಲ್ಲಿಯೇ ಗ್ಯಾಸ್ ಪಡೆಯುವಂತಾಗಲು ನಿಯಮ ರೂಪಿಸಲಾಯಿತು,ಆದರೆ ಹಳೆಯ ಬಲಾಡ್ಯ ವಿತರಕರು ಮತ್ತು ಅಧಿಕಾರಿಗಳು ಇದರ ನಿಯಮ ಮೀರಿ ಗ್ಯಾಸ್ ವಿತರಣೆಯನ್ನು ತಡೆಯದೇ ಹೊಸ ವಿತರಕರಿಗೆ, ಗ್ರಾಮೀಣ ವಿತರಕರಿಗೆ ಮೋಸ ಮಾಡಿದ್ದಾರೆ ಎಂದು ಆರೋಪಿಸಿದರು.

ಕೇಂದ್ರ ಸರ್ಕಾರದ ಇಂಧನ ಸಚಿವರು ಹಾಗೂ ಓಎಂಸಿ ಅಧಿಕಾರಿಗಳು ಇದನ್ನು ಸರಿಪಡಿಸುವುದಾಗಿ ಭರವಸೆ ನೀಡಿ ವರ್ಷವಾದರೂ ಇದುವರೆಗೂ ಯಾವುದೇ ರೀತಿಯ ಕ್ರಮ ಕೈಗೊಂಡಿಲ್ಲ,ಹಳೆಯ ವಿತರಕರು ಹೊಸ ವಿತರಕರಿಗೆ ಗ್ರಾಹಕರನ್ನು ವರ್ಗಾವಣೆ ಮಾಡದೇ ತಾವೇ 50ರಿಂದ 70ಕಿಲೋ ಮೀಟರ್ ದೂರ ಕ್ರಮಿಸಿ ಒಂದು ಕಿಲೋ ಮೀಟರ್ ಗೆ ಒಂದು ರೂಪಾಯಿ 60 ಪೈಸೆ ಡೆಲಿವರಿ ಶುಲ್ಕ ಪಡೆದು ಗ್ರಾಮೀಣ ಭಾಗದ ಜನರಿಗೆ ಮೋಸ ಮಾಡುತ್ತಿದ್ದಾರೆ,ನಗರವಿತರಕರು 15ಕಿಲೋ ಮೀಟರ್ ವ್ಯಾಪ್ತಿ ಮೀರಿ ಸಿಲಿಂಡರ್ ವಿತರಿಸುವುದನ್ನು ತಡೆಯುವಂತೆ ಸುತ್ತೋಲೆ ಹೊರಡಿಸಬೇಕು ಎಂದು ಆಗ್ರಹಿಸಿದರು.

ಅಧ್ಯಕ್ಷ ತಿಪ್ಪಣ್ಣ ವೈ.ಎನ್.ಮಾತನಾಡಿ, ಓಎಂಸಿಯಿಂದ ಕಮಿಶನ್ ಆಸೆಗಾಗಿ ಗ್ರಾಮೀಣ ವಿತರಕರ ಮೇಲೆ ಆಗುತ್ತಿರುವ ಮಾನಸಿಕ ಒತ್ತಡ,ಡಿಎಸಿ ಮತ್ತು ಓಟಿಪಿ ಪಡೆಯಲು ಗ್ರಾಮೀಣ ವಿತರಕರಿಗೆ ಒತ್ತಡ ಹೇರುವ ವಿರುದ್ಧ ದೆಹಲಿಯಲ್ಲಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಪ್ರತಿಭಟನೆಯಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ನೂರಾರು ಎಲ್ ಪಿ ಜಿ ಗ್ರಾಮೀಣ ವಿತರಕರು ಭಾಗವಹಿಸಿದ್ದರು.




# ಸಾಮೂಹಿಕ ಇಫ್ತಾರ್ ಕೂಟ



**ಚಿಕ್ಕಬಳ್ಳಾಪುರ:** ನಗರದ ಬಿಬಿ ರಸ್ತೆಯಲ್ಲಿರುವ ಹುಸೇನಿಯಾ ಮಸೀದಿಯಲ್ಲಿ ರಂಜಾನ್ ತಿಂಗಳ ಅಂಗವಾಗಿ ವಿಶೇಷ ಪ್ರಾರ್ಥನೆ, ಸಾಮೂಹಿಕ ಇಫ್ತಾರ್ ನಡೆಯುತ್ತಿದೆ.

ಮಸೀದಿಯ ಮುಖಂಡರು ಮಸೀದಿಯಲ್ಲಿ ನಡೆಯುವ ಪ್ರಾರ್ಥನೆ, ಸಾಮೂಹಿಕ ಇಫ್ತಾರ್ ಧಾರ್ಮಿಕ ಕಾರ್ಯಕ್ರಮಗಳನ್ನು ವೀಕ್ಷಿಸಲು ದಿನಕ್ಕೆ ಒಬ್ಬರನ್ನು ಮಸೀದಿಗೆ ಅಹ್ವಾನಿಸುತ್ತಿದ್ದಾರೆ. 23ನೇ ಉಪವಾಸದಂದು ಮಸೀದಿಗೆ ವಿಶೇಷ ಅಹ್ವಾನಿತರಾಗಿ ನಗರದ ಎಪಿಎಂಸಿ ತರಕಾರಿ ಮಾರುಕಟ್ಟೆಯ ಹಿರಿಯ ವರ್ತಕ ಕಣಜೇನಹಳ್ಳಿ ಕೆ.ವಿ.ಸುರೇಶ್ ಆಗಮಿಸಿದ್ದು ಸಾಮೂಹಿಕ ಪ್ರಾರ್ಥನೆ ಕಂಡು ಸಂತಸ ವ್ಯಕ್ತಪಡಿಸಿದರು.


ಈ ವೇಳೆ ಮಾತನಾಡಿದ ಕೆ.ವಿ. ಸುರೇಶ್ ಮಸೀದಿಯಲ್ಲಿ ಪರಸ್ಪರ ಪ್ರೀತಿ ಹಂಚಿಕೆ ಒಗ್ಗಟ್ಟು ಸಾಮೂಹಿಕ ಪ್ರಾರ್ಥನೆ ಶಿಸ್ತು ನಿಜಕ್ಕೂ ಮನಸ್ಸಿಗೆ ಸಂತೋಷ ತಂದಿದೆ. ದೂಡ್ಡ,ಚಿಕ್ಕವರು ಸಾಹುಕಾರ ಬಡ ಎನ್ನದೇ ಒಂದೇ ಸಾಲಿನಲ್ಲಿ ನಿಂತು ನಾವೆಲ್ಲರೂ ಒಂದೇ ಎಂಬ ಭಾವನೆಯಿಂದ ದೇವರಲ್ಲಿ ಪ್ರಾರ್ಥಿಸುತ್ತಿರುವ ದೃಶ್ಯಗಳು ಖುಷಿ ನೀಡಿದೆ. ಪವಿತ್ರ ರಂಜಾನ್ ತಿಂಗಳಲ್ಲಿ ಮುಸ್ಲಿಂ ಬಾಂದವರು ಉಪವಾಸ ಆಚರಿಸುತ್ತಿದ್ದು ದೇವರು ಎಲ್ಲರಿಗೆ ಆರೋಗ್ಯ ಆಯಸ್ಸು ನೀಡಲಿ.ಉಗಾದಿ ಹಾಗೂ ರಂಝಾನ್ ಜೊತೆಯಾಗಿ ಬರುತ್ತಿದ್ದು ಎಲ್ಲ ಹಿಂದು ಮುಸ್ಲಿಂ ಬಾಂದವರು ಹಬ್ಬಗಳನ್ನು ಒಟ್ಟಾಗಿ ಆಚರಿಸಿ ಪ್ರೀತಿ ಹಂಚಿಕೊಳ್ಳಬೇಕೆಂದರು.

ಈ ಸಂದರ್ಭದಲ್ಲಿ ನಯಾಜ್, ಖಲೀಲ್, ಮೌಲಾ, ಜಾಬಿ ಉಲ್ಲಾ, ನಿಸಾರ್, ಇಮ್ದಾದ್, ಮಸೂದ್, ಜವಾದ್ ಯುವಕರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಕೆ. ವಿ.ಸುರೇಶ್ ಅವರಿಗೆ ಮಸೀದಿಯ ಯುವಕರು ಸನ್ಮಾನಿಸಿ ಗೌರವಿಸಿದರು.

# ತಾಲ್ಲೂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಕೆಲಸ ಮಾಡುವೆ

**ಮುಳಬಾಗಿಲು:** ಎಲ್ಲಾ ಸವಿತಾ ಸಮಾಜದ ಬಂಧುಗಳು ನನಗೆ ಆಶೀರ್ವಾದ ಮಾಡಿದ್ದೀರಾ. ನಿಮ್ಮ ಮನೆಯ ಮಗನಾಗಿ–ತಮ್ಮನಾಗಿ ಸಮಾಜದ ಅಭಿವೃದ್ಧಿಗಾಗಿ ಹಾಗೂ ಅವರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಈ ತಾಲ್ಲೂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಕೆಲಸ ಮಾಡುತ್ತೇನೆ ಈ ಸಮುದಾಯಕ್ಕೆ ಬರುವ ಎಲ್ಲಾ ಸವಲತ್ತುಗಳನ್ನು ಒದಗಿಸುವುದಾಗಿ ಶಾಸಕ ಸಮೃದ್ಧಿ ವಿ. ಮಂಜುನಾಥ್ ತಿಳಿಸಿದರು.

ನಗರದ ಸವಿತಾ ಭವನದಲ್ಲಿ ಹಮ್ಮಿಕೊಂಡಿದ್ದ ಸವಿತಾ ಮಹರ್ಷಿ ಜಯಂತೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಮೃದ್ಧಿ ಮಂಜುನಾಥ್, ನಾವೆಲ್ಲ ಕಟ್ಟಕಡೆಯ ಸಮಾಜದವರು ಬೇರೆ ಬೇರೆ ಸಣ್ಣ ಸಮುದಾಯಗಳಾದ ನಾವು ಕಟ್ಟಕಡೆಯವರು. ನಾವುಗಳು ಅನೇಕ ಕೊಡುಗೆಗಳನ್ನು ನೀಡಿ ತಮ್ಮದೇ ಆದ ಕಾಳಜಿ ವಹಿಸಿ ಕೆಲಸ ಮಾಡುತ್ತಿದ್ದಿವೆ ಎಂದು ತಿಳಿಸಿದರು.



ಈ ಸಂದರ್ಭದಲ್ಲಿ ಜೆಡಿಎಸ್ ಪಕ್ಷದ ಕಾರ್ಯದರ್ಶಿ ರಘುಪತಿ ರೆಡ್ಡಿ, ಮಾಜಿ ನಗರಸಭೆ ಅಧ್ಯಕ್ಷರಾದ ಎಂಆರ್ ಮುರಳಿ, ಮಾಜಿ ಜಿ. ಪಂ. ಸದ್ಯಸರಾದ ಸಾಮೇಗೌಡ, ಸಮಾಜ ಸೇವಕರು ಹಾಗೂ ಜೆಡಿಎಸ್ ಮುಖಂಡರಾದ ಎಂ.ಗೊಲ್ಲಹಳ್ಳಿ ಪ್ರಭಾಕರ್, ನಗರಸಭಾ ಸದ್ಯಸರಾದ ಭಾಗ್ಯಮ್ಮ ರಾಮಚಂದ್ರಪ್ಪ,ಗ್ರಾಮ ಪಂಚಾಯಿತಿ ಅಧ್ಯಕ್ಷರು, ಸವಿತಾ ಸಮಾಜದ ಅಧ್ಯಕ್ಷರು ಬಿ. ವಿ. ರಾಮಚಂದ್ರಪ್ಪ , ಸವಿತಾ ಸಮಾಜದ ಸಹಕಾರ ಸಂಘದ ಅಧ್ಯಕ್ಷರಾದ ಸಿ.ರಘುಪತಿ, ಪ್ರಭಾಕರ್, ಜಗದೀಶ್, ನಿರ್ದೇಶಕರಾದ ಹೆಬ್ಬಣಿ ನಟರಾಜ್, ಶಂಕರಪ್ಪ ಮಂಜುನಾಥ್, ರಾಣಿ, ವಣಿಜಾಕ್ಷಿ, ಸುಬ್ರಮಣಿ, ರಾಜಗೋಪಾಲ್, ನಾಗರಾಜ್, ಮಂಜು, ರಾಜೇಶ್, ಸವಿತಾ ಸಮಾಜದ ಕಲಾ ಸಂಘದ ಅಧ್ಯಕ್ಷರು, ನಿರ್ದೇಶಕರು, ಹಿರಿಯ ಮುಖಂಡರು, ಜೆಡಿಎಸ್ ಕಾರ್ಯಕರ್ತರು ಸಾರ್ವಜನಿಕರು ಭಾಗವಹಿಸಿದ್ದರು.

# ದೇವರಮಳ್ಳೂರು ಕಾಮಣ್ಣನ ದಿನಾಚರಣೆ

**ಶಿಡ್ಲಘಟ್ಟ:** ತಾಲ್ಲೂಕಿನ ದೇವರಮಳ್ಳೂರು ಗ್ರಾಮದಲ್ಲಿ ರಾತ್ರಿ ಗ್ರಾಮಸ್ಥರು ಹಾಗೂ ಕಲಾಭಿಮಾನಿಗಳ ಸಮ್ಮುಖದಲ್ಲಿ ಕಾಮಣ್ಣನ ದಿನಾಚರಣೆ ಉತ್ಸವಮಯವಾಗಿ ನಡೆಯಿತು.

ಕಲೆ ಮತ್ತು ಸಂಸ್ಕೃತಿಗಳ ತವರೂರಾಗಿ ಗುರುತಿಸಿಕೊಂಡಿರುವ ಈ ಗ್ರಾಮದಲ್ಲಿ, ಪ್ರತೀ ವರ್ಷದಂತೆ ಈ ಬಾರಿಯೂ ಉತ್ಸವ ವಿಶಿಷ್ಟವಾಗಿ ಆಚರಿಸಲಾಯಿತು. ಮಕ್ಕಳು ಹಾಗೂ ಕೆಲ ಹಿರಿಯರು ವಿಭಿನ್ನ ವೇಷ ಭೂಷಣಗಳಲ್ಲಿ ಮಿಂಚುತ್ತಾ, ಕಲಾ ಪ್ರದರ್ಶನ ನೀಡಿ ಗ್ರಾಮಸ್ಥರು ಹಾಗೂ ಕಲಾಭಿಮಾನಿಗಳನ್ನು ಸಂತೋಷಿಸಿದರು.

ಗ್ರಾಮದ ಹಿರಿಯರಾದ ಮಾತನಾಡಿ ಬಚ್ಚಣ್ಣ, ನಮ್ಮ ಗ್ರಾಮವು ಶತಮಾನಗಳ ಹಿಂದಿನಿಂದಲೇ ಕಲಾ ಸಂಸ್ಕೃತಿಗೆ ಹೆಸರುವಾಸಿಯಾಗಿದೆ. ಹಿರಿಯರ ಸಂಪ್ರದಾಯವನ್ನು ಮುಂದುವರಿಸುತ್ತಾ, ಕಾಮಣ್ಣನ ದಿನಾಚರಣೆ ಸಾಂಪ್ರದಾಯಿಕ ಮತ್ತು ವೈವಿಧ್ಯಮಯ ಕಲಾ ಪ್ರದರ್ಶನಗಳ ಮೂಲಕ ಸಂಭ್ರಮದಿಂದ ಜರುಗುತ್ತಿದೆ. ಕರಗ ಕುಣಿತ, ಪೋಟಿ ವೇಷ, ಕರಡಿ ಕುಣಿತ ಹಾಗೂ ಪುಟ್ಟ ಮಕ್ಕಳ ವೈವಿಧ್ಯಮಯ ವೇಷಭೂಷಣಗಳು ಗ್ರಾಮಸ್ಥರಿಗೆ ಹಾಗೂ ಕಲಾಭಿಮಾನಿಗಳಿಗೆ ಅಪಾರ ಸಂತೋಷ ತಂದಿವೆ ಎಂದು ಹೇಳಿದರು.

ಈ ವೇಳೆ ಕಾರ್ಯಕ್ರಮದ ಅಂಗವಾಗಿ ವಿಭಿನ್ನ ವೇಷಧಾರಿಗಳಿಗೆ ಬಹುಮಾನ ವಿತರಿಸಲಾಯಿತು.

ಬಳಿಕ ಗ್ರಾಮಸ್ಥರ ಸಹಭಾಗಿತ್ವದಲ್ಲಿ ಭಜನೆ ಕಾರ್ಯಕ್ರಮ ನಡೆಯಿತು, ಉತ್ಸವದಲ್ಲಿ ಭಾಗವಹಿಸಿದ ಎಲ್ಲರಿಗೂ ಪ್ರಸಾದ ವಿತರಣೆಯಾಗಿದ್ದು, ಉತ್ಸವವು ಹರ್ಷೋಲ್ಲಾಸದಿಂದ ನೆರವೇರಿತು.



# ಬೀದಿಬದಿ ವ್ಯಾಪಾರಿಗಳು ಯಾರಿಗೂ ಸುಂಕವನ್ನುಕಟ್ಟುವಂತಿಲ್ಲ

**ದೇವನಹಳ್ಳಿ:** ವಿಜಯಪುರ ಪಟ್ಟಣದಲ್ಲಿನ ಬೀದಿಬದಿ ವ್ಯಾಪಾರಿಗಳು ಏ.1 ರಿಂದ ಯಾರಿಗೂ ಸುಂಕವನ್ನುಕಟ್ಟುವಂತಿಲ್ಲ ಎಂದು ಪುರಸಭೆ ಅಧ್ಯಕ್ಷೆ ಎಸ್.ಭವ್ಯಾಮಹೇಶ್ ಹೇಳಿದರು.

ಪಟ್ಟಣದ ಪುರಸಭೆಯಆವರಣದಲ್ಲಿ ಆಯೋಜಿಸಿದ್ದ ಪುರಸಭೆಯ ಮಾಲೀಕತ್ವದ ಬಸ್ ಸ್ಟ್ಯಾಂಡ್ ಶುಲ್ಕ ವಸೂಲಿ, ವಾರದ ಸಂತೆ ಶುಲ್ಕ ವಸೂಲಿ, ಮರಳು, ಎಂ.ಸ್ಯಾಂಡ್, ಕಲ್ಲು ಮಾರಾಟ ಮಾಡುವ ವಾಹನಗಳ ಶುಲ್ಕ ವಸೂಲಾತಿ ಹರಾಜು ಪ್ರಕ್ರಿಯೆಯಲ್ಲಿಅವರು, ದಿನವಹಿ ಮಾರುಕಟ್ಟೆಶುಲ್ಕ ವಸೂಲಿ ಹರಾಜು ಕೈ ಬಿಟ್ಟಿದ್ದು, ಬೀದಿಬದಿ ವ್ಯಾಪಾರಿಗಳು ಯಾರೂ ಸುಂಕ ಕಟ್ಟದಂತೆ ತಿಳಿಸಿದರು.

ಪುರಸಭೆ ಮುಖ್ಯಾಧಿಕಾರಿ ಜಿ.ಆರ್.ಸಂತೋಷ್ ಮಾತನಾಡಿ.ಈ ಹಿಂದೆ ಪುರಸಭೆಆವರಣದಲ್ಲಿ ಹರಾಜಾಗಿದ್ದ ದಿನವಹಿ ಸುಂಕ ವಸೂಲಾತಿ ಹರಾಜನ್ನು ಈ ಬಾರಿ ನಿಲ್ಲಿಸಲಾಗಿದೆ. ನಾವು ನಿಗದಿ ಪಡಿಸಿದ್ದಕ್ಕಿಂತಲೂ ಹೆಚ್ಚಿನ ಸುಂಕ ವಸೂಲಿ ಮಾಡುತ್ತಿದ್ದಾರೆ ಎನ್ನುವ ದೂರುಗಳು ಕೇಳಿ ಬಂದಿದ್ದವು. ಪ್ರಸ್ತುತ, ಹರಾಜಾಗಿರುವ ಬಸ್ ಸ್ಟ್ಯಾಂಡ್. ವಾರದ ಸಂತೆ, ಎಂ.ಸ್ಯಾಂಡ್‌ಕಲ್ಲು ಮಾರಾಟ ಮಾಡುವ ವಾಹನಗಳ ಸುಂಕವನ್ನು ನಿಗದಿಪಡಿಸಿರುವುದಕ್ಕಿಂತ ಹೆಚ್ಚಿಗೆ ಪಡೆಯಬಾರದು. ಪಡೆದರೆ ಹರಾಜು ಗುತ್ತಿಗೆಯನ್ನು ರದ್ದುಪಡಿಸಿ, ಹರಾಜು ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ ಎಂದುಎಚ್ಚರಿಕೆ ನೀಡಿದ್ದಾರೆ. ಸಾರ್ವಜನಿಕರೂ ನಿಗದಿತದರಕ್ಕಿಂತ ಹೆಚ್ಚು ನೀಡಬಾರದು ಎಂದರು. ಪುರಸಭೆ ಉಪಾಧ್ಯಕ್ಷೆ ತಾಜುನ್ನಿಸಾ ಮಹಬೂಬ್ ಪಾಷ, ಸದಸ್ಯರಾದ ,ಎಂ.ರಾಜಣ್ಣ, ಹನೀಪುಲ್ಲಾ, ಶಿಲ್ಪಾಅಜಿತ್, ಸಿ.ನಾರಾಯಣ ಸ್ವಾಮಿ, ವಿ.ನಂದಕುಮಾರ್, ಎಂ.ನಾರಾಯಣ ಸ್ವಾಮಿ,ಶ್ರೀರಾಮಪ್ಪ, ಸೈಯದ್ ಎಕ್ಬಾಲ್, ಕಂದಾಯಅಧಿಕಾರಿ ಚಂದ್ರು, ಸಿಬ್ಬಂದಿ ಅನಿಲ್, ಜನಾರ್ಧನ, ಮಂಜುನಾಥ್ ಮುಂತಾದವರು ಉಪಸ್ಥಿತರಿದ್ದರು.



# ಸಮಾನ ಅವಕಾಶ, ನ್ಯಾಯ ಒದಗಿಸಲು ಪ್ರಯತ್ನ

**ಕೊಲ್ಲಾರ:** ಪಟ್ಟಣದ ಪೊಲೀಸ್‌ಠಾಣೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದಜನರಕುಂದುಕೊರತೆ ಸಭೆಯು ತಹಶೀಲ್ದಾರ್ ಎಸ್.ಎಸ್ ನಾಯಕಲಮಠ 'ಅವರಅಧ್ಯಕ್ಷತೆಯಲ್ಲಿ ನಡೆಯಿತು.


ಪಟ್ಟಣದ ಪೊಲೀಸ್‌ಠಾಣೆಯ ಪಿಎಸ್‌ಐ ಎಂ.ಬಿ. ಬಿರಾದಾರ ಮಾತನಾಡಿ, 'ಸಮುದಾಯದಜನರ 'ಕುಂದುಕೊರತೆ ಹಾಗೂ ದೌರ್ಜನ್ಯದ ಬಗ್ಗೆ ದಲಿತ ಮುಖಂಡರಜೊತೆ ಚರ್ಚಿಸಿ ಸಮಾನ ಅವಕಾಶ ಮತ್ತು ನ್ಯಾಯಒದಗಿಸುವ ಪ್ರಾಮಾಣಿಕ ಕೆಲಸ ಮಾಡುತ್ತೇನೆ' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ತಹಶೀಲ್ದಾರ್ ಎಸ್. ಎಸ್. ನಾಯಕಲಮಠ, ಪ.ಜಾತಿ ಮತ್ತು ಪ.ಪಂಗಡದಜನರಿಗೆ ಸರ್ಕಾರದ ಸಹಾಯ, ಸೌಲಭ್ಯಗಳನ್ನು ಒದಗಿಸಲಾಗುವುದು' ಎಂದರು.

ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಉಮೇಶ ಚಲವಾದಿ ಹಾಗೂ ದಶರಥಈಟಿ, ಗುರು ಚಲವಾದಿ, ಸಿಡ್ಡೆಪ್ಪ ಮಾದರ, ರಾಜು ವಡ್ಡರ, ಶ್ರೀಶೈಲ ಚಲವಾದಿ, ಅಮೀನಪ್ಪತೆಗ್ಗಿ, ತಿಪ್ಪಣ್ಣಕುದುರಿಇದ್ದರು.

# ಶ್ರೀರಾಮ ಸೇನೆ ಮುಖಂಡನಿಗೆ ಜೀವ ಬೆದರಿಕೆ ಭದ್ರತೆಗೆ ಆಗ್ರಹ

**ರಾಮನಗರ:** ಶ್ರೀರಾಮ ಸೇನೆ ಕಗ್ಗಲಿಪುರ ಘಟಕದ ಅಧ್ಯಕ್ಷರಾಗಿರುವ ಉಮೇಶ್ ಅವರಿಗೆ ಕಗ್ಗಲಿಪುರ ಗ್ರಾಮ ಪಂಚಾಯಿತಿ ಸದಸ್ಯ ಫರ್ವಿಜ್ ನಿಂದ ಜೀವ ಬೆದರಿಕೆ ಇದ್ದು, ಉಮೇಶ್ ಅವರಿಗೆ ಸೂಕ್ತ ಭದ್ರತೆ ನೀಡಬೇಕು ಎಂದು ಶ್ರೀರಾಮ ಸೇನೆಯ ರಾಜ್ಯ ವಕ್ತಾರ ಎಸ್. ಭಾಸ್ಕರನ್ ಆಗ್ರಹಿಸಿದರು.



ರಾಮನಗರದ ಪ್ರವಾಸಿ ಮಂದಿರದಲ್ಲಿ ಮಂಗಳವಾರ ಅಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಸದಸ್ಯ ಫರ್ವಿಜ್ ನಿಂದ ಉಮೇಶ್ ಅವರಿಗೆ ಜೀವ ಬೆದರಿಕೆ ಇದೆ. ಯಾವುದೇ ಸಮಯದಲ್ಲಿ ಬೇಕಾದರೂ ಉಮೇಶ್ ಅವರ ಮೇಲೆ ಹಲ್ಲೆ ಮಾಡುವ ಸಾಧ್ಯತೆ ಇದೆ. ಹಾಗಾಗಿ ಪೊಲೀಸ್ ಇಲಾಖೆ ಸೂಕ್ತ ಭದ್ರತೆ ನೀಡಬೇಕು ಎಂದು ಒತ್ತಾಯಿಸಿದರು.

ಉಮೇಶ್ ಅವರಿಗೆ ಭದ್ರತೆ ನೀಡುವ ವಿಚಾರವಾಗಿ ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ್ ಗೌಡ ಅವರನ್ನು ಭೇಟಿಯಾಗಿ ಘಟನೆಯನ್ನು ವಿವರಿಸಿದ್ದೇವೆ, ಜತೆಗೆ, ಭದ್ರತೆ ನೀಡುವಂತೆ ಮನವಿ ಮಾಡಿದ್ದೇವೆ. ಆದರೆ, ಎಸ್‌ಪಿ ಅವರಿಂದ ದೂರಿಗೆ ಸ್ಪಂದನೆ ವ್ಯಕ್ತವಾಗಿಲ್ಲ. ಹಾಗಾಗಿ ಕಗ್ಗಲಿಪುರ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ದೂರು ನೀಡುತ್ತೇವೆ ಎಂದು ಹೇಳಿದರು.

ಸೂಕ್ತ ಭದ್ರತೆ ನೀಡುವಂತೆ ರಾಜ್ಯ ಸರ್ಕಾರ ಗೃಹ ಇಲಾಖೆಗೆ ಶೀಘ್ರದಲ್ಲಿಯೇ ಮನವಿ ಮಾಡುತ್ತೇವೆ ಎಂದ ಅವರು, ಫರ್ವಿಜ್ ಈ ಹಿಂದೆ ಕಗ್ಗಲಿಪುರ ಗ್ರಾಮ ಪಂಚಾಯಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಿದ್ದ, ಇವನ ಕಾಲವಾಧಿಯಲ್ಲಿ ನಡೆದ ಅಕ್ರಮಗಳ ವಿರುದ್ಧ ಉಮೇಶ್ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಈ ಪ್ರಕರಣವೂ ತನಿಖೆಯ ಹಂತದಲ್ಲಿ ಇದೆ. ಜತೆಗೆ, ಇದೇ ಫರ್ವಿಜ್ ಮತ್ತು ಅವರ ತಂದೆ ಶೇಖ್ ಅಹಮದ್ ವಿರುದ್ಧ ಅತ್ಯಾಚಾರರ ಮೊಕದ್ದಮೆ ಸಹ ದಾಖಲಾಗಿದೆ ಇದರ ವಿರುದ್ಧ ಉಮೇಶ್ ಹೋರಾಟ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಉಮೇಶ್ ವಕೀಲರಾಗಿರುವ ಕಾರಣ ಸಂತ್ರಸ್ಥೆಯ ಪರವಾಗಿ ಸರ್ಕಾರಿ ಅಭಿಯೋಜಕರಿಗೆ ಮಾಹಿತಿ ನೀಡುವ ಹಾಗೂ ಪ್ರಕರಣಕ್ಕೆ ಸಂಬಂಧಿಸಿದಂತೆ ಅಗತ್ಯವಾದ ದಾಖಲೆ ನೀಡುವ ಕೆಲಸ ಮಾಡುತ್ತಿದ್ದಾರೆ. ಉಮೇಶ್ ಅವರ ಈ ಕಾರ್ಯವನ್ನು ಸಹಿಸದ ಫರ್ವಿಜ್ ಕಳೆದ 15 ದಿನಗಳಿಂದ ಉಮೇಶ್ ಅವರನ್ನು ಹತ್ಯೆ ಮಾಡುತ್ತೇನೆ ಎಂದು ಸಾರ್ವಜನಿಕವಾಗಿ ಹೇಳಿಕೆ ನೀಡುತ್ತಿದ್ದಾನೆ ಎಂದು ಕಿಡಿಕಾರಿದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಬದಲಿಗೆ ಹೈದಾರಾಬಾದ್‌ನ ನಿಜಾಮರ ಆಡಳಿತ ನಡೆಯುತ್ತಿದೆ. ಒಂದು ಧರ್ಮದ ಓಲೈಕೆ ರಾಜಕಾರಣ ಹೆಚ್ಚಾಗಿ ನಡೆಯುತ್ತಿರುವ ಪರಿಣಾಮ ಇಂದು ಅದರ ಪ್ರತಿಫಲ ಎಲ್ಲರೂ ಅನುಭವಿಸುವಂತೆ ಆಗಿದೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಉಮೇಶ್ ಅವರಿಗೆ ಸೂಕ್ತ ಭದ್ರತೆ ಒದಗಿಸಬೇಕು ಎಂದು ಒತ್ತಾಯಿಸಿದ ಅವರು ರಾಮನಗರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಘಟನೆಯನ್ನು ಸಾಧಾರಣವಾಗಿ ತೆಗೆದುಕೊಂಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಶ್ರೀರಾಮ ಸೇನೆಯ ಜಿಲ್ಲಾಧ್ಯಕ್ಷ ನಾಗಾರ್ಜುನ್ ಗೌಡ ಮಾತನಾಡಿ, ಫರ್ವಿಜ್ ಉಮೇಶ್ ವಿರುದ್ಧ ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ಈ ರೀತಿ ಹಲ್ಲೆ ಆರೋಪ ಮಾಡುತ್ತಿದ್ದಾನೆ. ಕಗ್ಗಲಿಪುರ ಗ್ರಾಪಂ ವ್ಯಾಪ್ತಿಯ ಅನೇಕ ಹಿಂದೂ ದೇವಾಲಯದ ಆಸ್ತಿಗಳ ಕಣ್ಣಿಟ್ಟು, ಗ್ರಾಮ ಪಂಚಾಯಿತಿ ಸಭೆಯಲ್ಲಿ ನಿರ್ಣಯ ಮಾಡಿಸಿದ್ದನು. ಇದನ್ನು ಶ್ರೀರಾಮ ಸೇನೆ ಸಂಘಟನೆಯ ಪ್ರಶ್ನಿಸಿತ್ತು. ದೇವಾಲಯದ ಆಸ್ತಿಗಳ ಅತಿಕ್ರಮಣ ಪ್ರವೇಶ ಮಾಡಿದಾಗ ಉಮೇಶ್ ಅವರು ಹಿಂದೂ ದೇವಾಲಯದ ಆಸ್ತಿಗಳ ಪರವಾಗಿ ಹೋರಾಟ ಮಾಡಿದ್ದರು ಎಂದು ತಿಳಿಸಿದರು.

ಈ ವೇಳೆ ಸಂಘಟನೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಅಮರನಾಥ್, ಮುಖಂಡರಾದ ಕೃಷ್ಣಮೂರ್ತಿ, ಉಮೇಶ್ ಸೇರಿದಂತೆ ಹಲವರು ಇದ್ದರು.

# ಅಸಹಾಯಕರ ಕನಸು ನನಸು ಮಾಡಿದ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ

**ಮಾಲೂರು:** ಅಸಹಾಯಕರಿಗೆ ಈ ಒಂದು ಕನಸು ನನಸು ಮಾಡುವ ಆಕಾಂಕ್ಷೆಯನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ನನಸು ಮಾಡಿದೆ ಎಂದು ಗ್ರಾ.ಪಂ.ಅಧ್ಯಕ್ಷೆ ಸುಶೀಲಮ್ಮ ಮುನಿರಾಜಪ್ಪ ಪ್ರಶಂಸಿದರು.

ತಾಲ್ಲೂಕಿನ ದಿನ್ನಹಳ್ಳಿ ಗ್ರಾ.ಪಂ.ವ್ಯಾಪ್ತಿಯ ನಿಡುಮಾಕನಹಳ್ಳಿ ಗ್ರಾಮದ ಅಸಹಾಯಕರಾದ ದೊಡ್ಡ ನಾಗಮ್ಮ ರವರಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ, ಜ್ಞಾನ ವಿಕಾಸ ಕಾರ್ಯಕ್ರಮದ ವಾತ್ಸಲ್ಯ ಕಾರ್ಯಕ್ರಮದಡಿಯಲ್ಲಿ ಡಾ. ಹೇಮಾವತಿ.ವಿ ಹೆಗ್ಗಡೆ ರವರ ಮಾರ್ಗದರ್ಶನದಲ್ಲಿ ವಾತ್ಸಲ್ಯ ಮನೆ ನಿರ್ಮಾಣ ಹಸ್ತಾಂತರ ಮಾಡಲಾಯಿತು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವತಿಯಿಂದ ನಿರ್ಗತಿಕರು, ಅಸಹಾಯಕರಿಗೆ ಮನೆ ರಚನೆ ಮಾಡಿಕೊಟ್ಟಿರುವುದು ತುಂಬಾ ಸಂತೋಷದ ವಿಷಯ, ಒಂದು ಮನೆ ನಿರ್ಮಿಸುವುದು ಎಲ್ಲರ ಕನಸಾಗಿದ್ದು, ಅಸಹಾಯಕರಿಗೆ ಈ ಒಂದು ಕನಸು ನನಸು ಮಾಡುವ ಆಕಾಂಕ್ಷೆಯನ್ನು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ನನಸು ಮಾಡಿದೆ. ಮುಂದಿನ ದಿನಗಳಲ್ಲಿ ಇವರ ಸೇವೆಯು ಇದೇ ರೀತಿ ಮುಂದುವರೆಯಲಿ ಎಂದು ಆಶಿಸಿದರು.

ಶ್ರೀ ಧರ್ಮಸ್ಥಳ ಸಂಸ್ಥೆಯ ಜಿಲ್ಲಾ ನಿರ್ದೇಶಕ ಪದ್ಮಯ್ಯ ಸಿ ಎಚ್ ಮಾತನಾಡಿ, ಧರ್ಮಸ್ಥಳ ಸಂಸ್ಥೆಯು ಬಡವರಿಗೆ ಕಲ್ಪವೃಕ್ಷ ಕಾಮಧೇನು ಆಗಿದೆ ಅನೇಕ ಬಡ ಕುಟುಂಬಗಳಿಗೆ ಸಂಜೀವಿನಿಯಾಗಿ ಕೆಲಸ ಮಾಡುತ್ತಿದೆ. ಪೂಜ್ಯರು ಅನೇಕ ಜನಕಲ್ಯಾಣ ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ, ಮಹಿಳೆಯರ ಸಬಲೀಕರಣಕ್ಕೆ ಅನೇಕ ಕಾರ್ಯಕ್ರಮಗಳನ್ನು ಜ್ಞಾನವಿಕಾಸ ಕಾರ್ಯಕ್ರಮದಲ್ಲಿ ಮಾಡುತ್ತಿದ್ದು ಸಂಸ್ಥೆಯು ಅಸಹಾಯಕರಿಗೆ ಪ್ರತಿ ವರ್ಷ ತಾಲೂಕಿನಲ್ಲಿ ಅಸಾಯಕರನ್ನು ಗುರುತಿಸಿ ಮನೆಗಳನ್ನು ನಿರ್ಮಾಣ ಮಾಡಿ ಕೊಟ್ಟಿದೆ. ರಾಜ್ಯದ್ಯಂತ ವಾತ್ಸಲ್ಯ ಮನೆ ರಚನೆ ಮಾಡಲಾಗಿದೆ ಇದೇ ರೀತಿ ತಾಲೂಕಿನಲ್ಲಿ ಪ್ರತಿ ತಿಂಗಳು ನಿರಾಶ್ರಿತರಿಗೆ ರೂ 1,000 ರಿಂದ 1500 ರಂತೆ ಮಾಶಾಸನವನ್ನು ನೀಡಲಾಗುತಿದೆ. ಮಾಲೂರು ತಾಲೂಕಿನಲ್ಲಿ ಸುಮಾರು 74 ಸದಸ್ಯರಿಗೆ ಮಾಸಾಶನವನ್ನು ನೀಡಲಾಗುತಿದೆ ಎಂದರು.

ಈ ಕಾರ್ಯಕ್ರಮದಲ್ಲಿ ಬೆಂಗಳೂರು ಪ್ರಾದೇಶಿಕ ವ್ಯಾಪ್ತಿಯ ಜ್ಞಾನವಿಕಾಸ ವಿಭಾಗದ ಯೋಜನಾಧಿಕಾರಿಗಳಾದ ಸಂಧ್ಯಾ ವಿ .ಶೆಟ್ಟಿ, ಮಾಲೂರು ತಾಲೂಕಿನ ಯೋಜನಾಧಿಕಾರಿಗಳಾದ ಸತೀಶ್ ಹೆಚ್, ಗ್ರಾಮ ಪಂಚಾಯತ್ ಸದಸ್ಯರಾದ ವೆಂಕಟೇಶ್,ಭಾಗ್ಯ ರಾಘು, ಮುನಿಕ್ರಷ್ಣಪ್ಪ, ಮೇಲ್ವಿಚಾರಕ ಆದಿನಾರಾಯಣ ಸ್ವಾಮಿ, ಜ್ಞಾನ ವಿಕಾಸ ಸಮನ್ವಯಧಿಕಾರಿ ಉಷಾ ರಾಣಿ, ಮಾಸ್ತಿ ಒಕ್ಕೂಟ ಅಧ್ಯಕ್ಷೆ ಪವಿತ್ರಾ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.



# ರೈತರಿಗಿಂತ ಪಿಎಸ್‌ಎಲ್ ಕಂಪನಿಗೆ ಅನುಕೂಲ: ರಾಮಚಂದ್ರಗೌಡ

**ಶಿಡ್ಲಘಟ್ಟ:** ಜಂಗಮಕೋಟೆ ಹೋಬಳಿಯಲ್ಲಿ "ಪಿಎಸ್‌ಎಲ್ ಕಂಪನಿ" 500ಕ್ಕೂ ಹೆಚ್ಚು ಎಕರೆ ಜಮೀನನ್ನು ರೈತರಿಗೆ ಕಡಿಮೆ ಬೆಲೆ ನೀಡಿ ಖರೀದಿಸಿದೆ ಇದೀಗ ಕೆಐಎಡಿಬಿ ಸ್ವಾಧಿ ನಪಡಿಸಿಕೊಳ್ಳುವ ಜಮೀನಿಗೆ ನೀಡುವ ಪರಿಹಾರ ರೈತನಿಗೆ ಸೇರುವುದಿಲ್ಲ, ಬದಲಿಗೆ ಪಿಎಸ್‌ಎಲ್ ಕಂಪನಿಗೆ ಸೇರುತ್ತದೆ, ಕೃಷಿ ಯೋಗ್ಯ ಫಲವತ್ತಾದ ಭೂಮಿಯ ಸ್ವಾಧೀನ ಪ್ರಕ್ರಿಯೆಯನ್ನು ಸರ್ಕಾರ ಕೂಡಲೇ ಕೈಬಿಡಬೇಕೆಂದು ಬಿಜೆಪಿ ಮುಖಂಡ ಸೀಕಲ್ ರಾಮಚಂದ್ರಗೌಡ ಆಕ್ರೋಶ ವ್ಯಕ್ತಪಡಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಈ ಹಿಂದೆ ಜಂಗಮಕೋಟೆ ಹೋಬಳಿಯಲ್ಲಿ ಸಂಸದರಾದ ಡಾ.ಕೆ. ಸುಧಾಕರ್ ಅವರು, ನಾನು, ನಮ್ಮ ಪಕ್ಷದ ಮುಖಂಡರು ಹಾಗೂ ಆ ಭಾಗದ ರೈತ ಮುಖಂಡರು ಭೇಟಿ ನೀಡಿ ರೈತರ ಅಭಿಪ್ರಾಯ ಸಂಗ್ರಹಿಸಿದ್ದೆವು ಎಂದು ಮನವರಿಕೆ ಮಾಡಿದರು.

ಸರ್ಕಾರ ಈ ಭಾಗದಲ್ಲಿ ಕೈಗಾರಿಕೆಗಳಿಗಾಗಿ ಜಮೀನು ಸ್ವಾಧೀನಪಡಿಸಿಕೊಂಡಿದ್ದೇ ಆದಲ್ಲಿ ರೈತರಿಗಿಂತ ಪಿಎಸ್‌ಎಲ್ ಕಂಪನಿಗೆ ಅನುಕೂಲ, ಲಾಭ ಆಗುತ್ತದೆಯೇ ಹೊರತು ರೈತರಿಗೆ ಅಲ್ಲ ಎಂದು ದೂರಿದರು.

ತಾಲೂಕಿನ ವೈ. ಹುಣಸೇನಹಳ್ಳಿ,ಕುಂದಲಗುರ್ಕಿ ಹಾಗು ಪಲಿಚೆರ್ಲು ಮಾರ್ಗದಲ್ಲಿ ಕೃಷಿಗೆ ಯೋಗ್ಯವಲ್ಲದ ಸಾವಿರಾರು ಎಕರೆಗಟ್ಟಲೆ ಜಮೀನು ಬೀಡು ಬಿದ್ದಿದೆ ಜತೆಗೆ, ಅಲ್ಲಿ ಸಾಕಷ್ಟು ಪ್ರದೇಶದಲ್ಲಿ ಗ್ರಾಮಗಳು ಕಡಿಮೆ ಇವೆ ಅಲ್ಲಿನ ಬಹುತೇಕ ಭೂಮಿ ಭಂಜರಾಗಿದ್ದು, ಕೃಷಿ ಮಾಡಲು ಆಗದ ಈ ಭಾಗದಲ್ಲಿ ಕೈಗಾರಿಕೆಗಳ ಸ್ಥಾಪನೆಗೆ ಜಮೀನು ಸ್ವಾಧೀನಪಡಿಸಿಕೊಳ್ಳಲಿ ಯಾರ ಅಭ್ಯಂತರವಿಲ್ಲ ಜತೆಗೆ ಸಾಕಷ್ಟು ನಿರುದ್ಯೋಗಿಗಳಿದ್ದು ಉದ್ಯೋಗ ಸಿಗುತ್ತದೆ ಮತ್ತು ಕೃಷಿ ಯೋಗ್ಯವಲ್ಲದ ಭೂಮಿ ಮಾರಾಟದಿಂದ ರೈತರಿಗೆ ಒಂದಷ್ಟು ಹಣ ಸಿಗುತ್ತದ ಹಾಗೂ ಸರ್ಕಾರಕ್ಕೂ ಕಡಿಮೆ ಬೆಲೆಗೆ ಜಮೀನು ಸಿಗುತ್ತದೆ ಎಂದರು.

ಈ ಮಧ್ಯೆ ಸರ್ಕಾರ, ಜನಪ್ರತಿನಿಧಿಗಳು ಕೂಡ ಈ ಭಾಗದ ರೈತರಲ್ಲಿನ ಒಗ್ಗಟ್ಟನ್ನು ಮುರಿಯುವಂತ ಕೆಲಸಕ್ಕೆ ಮುಂದಾಗಿದೆ ಈ ಭಾಗದಲ್ಲಿ ಜಮೀನಿನ ಮಾಲೀಕ ರೈತರ ಸಭೆ ಕರೆದು ಜಮೀನನ್ನು ನೀಡಲು ಶೇ 50ಕ್ಕಿಂತ ಹೆಚ್ಚಿನ ರೈತರು ಒಪ್ಪದಿದ್ದಲ್ಲಿ ಈ ಭಾಗದಲ್ಲಿ ಕೆಐಎಡಿಬಿಗೆ ಜಮೀನು ಸ್ವಾಧೀನ ಪ್ರಕ್ರಿಯೆಯನ್ನು ಕೈ ಬಿಡುವುದಾಗಿ ಜಿಲ್ಲಾ ಉಸ್ತುವಾರಿ ಮಂತ್ರಿ ಡಾ.ಎಂ.ಸಿ.ಸುಧಾಕರ್, ಆಯುಕ್ತರು ಕೂಡ ಹೇಳಿದ್ದರು.

ಆದರೆ ಕೆಐಎಡಿಬಿಯ ಇದುವರೆಗೂ ಸಭೆ ಕರೆದಿಲ್ಲ ಆದರೆ ಇಲ್ಲಿ "ಡೀಪ್ ಟೆಕ್ ಪಾರ್ಕ್" ಆಗುತ್ತದೆ ಎಂದು ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದು ರೈತರನ್ನು ಗೊಂದಲಕ್ಕೆ ಸಿಲುಕಿಸಿದೆ ಎಂದು ದೂರಿದರು.

ಮುಖ್ಯವಾಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಎಂ.ಸಿ.ಸುಧಾಕರ್ ಹಾಗೂ ಕ್ಷೇತ್ರದ ಶಾಸಕರಾದ ಬಿ.ಎನ್. ರವಿಕುಮಾರ್ ಅವರು ಕೂಡ ಮೂಲತಃ ಕೃಷಿಕ ಕುಟುಂಬದವರಾಗಿದ್ದು ರೈತರ ಕಷ್ಟ ಕಾರ್ಪಣ್ಯವನ್ನು ಆಳವಾಗಿ ತಿಳಿದವರಾಗಿದ್ದು ಜಂಗಮಕೋಟೆಯಲ್ಲಿ ಫಲವತ್ತಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದರ ವಿರುದ್ಧ ನಿಲ್ಲಬೇಕು, ರೈತರ ಪರವಾಗಿ ನಿಲ್ಲಬೇಕು ಎಂದು ಅವರು ಒತ್ತಾಯಿಸಿದರು.

ನಾವೇನೂ ಕೈಗಾರಿಕೆಗಳ ವಿರೋಧಿಗಳಲ್ಲ ಕೈಗಾರಿಕೆಗಳು ಬೇಕು, ಆದರೆ ಎಲ್ಲಿ ಆಗಬೇಕೋ ಅಲ್ಲಿ ಆಗಬೇಕೆ ಹೊರತು ಫಲವತ್ತಾದ ಕೃಷಿ ಭೂಮಿಯಲ್ಲಿ ಕೈಗಾರಿಕೆಗಳನ್ನು ಮಾಡಿ ರೈತರನ್ನು ಗುಳೆ ಹೋಗುವಂತೆ ಮಾಡಬಾರದು "ಪಿಎಸ್‌ಎಲ್ ಕಂಪನಿ "ಗೆ ಮಾಡಿಕೊಡುವಂತ ಅನುಕೂಲ ಜಂಗಮಕೋಟೆ ಹೋಬಳಿಯ ಕೆಐಎಡಿಬಿ ಯೋಜನೆಯನ್ನು ಕೂಡಲೆ ಕೈ ಬಿಡಬೇಕು ಎಂದು ಆಗ್ರಹಿಸಿದರು.

ಈಗಾಗಲೆ ಆ ಭಾಗದಲ್ಲಿ ನಾನು ಮತ್ತು ನಮ್ಮ ಪಕ್ಷದ ಸಂಸದ ಡಾ.ಕೆ.ಸುಧಾಕರ್ ಅವರು ರೈತರನ್ನು ಸಂಪರ್ಕಿಸಿ ಅವರ ಅಭಿಪ್ರಾಯವನ್ನು ಸಂಗ್ರಹಿಸಿದ್ದು ಬಹುತೇಕ ರೈತರು ಜಮೀನನ್ನು ನೀಡುವುದರ ವಿರುದ್ಧ ಇದ್ದಾರೆ ಬೆರಳೆಣಿಕೆಯಷ್ಟು ಮಂದಿ ಮಾತ್ರ ಜಮೀನನ್ನು ನೀಡಲು ಮುಂದಾಗಿದ್ದಾರೆ ಎಂದರು.

ಸರ್ಕಾರವು ತನ್ನ ನಿರ್ಧಾರವನ್ನು ಬದಲಿಸಿಕೊಳ್ಳದಿದ್ದಲ್ಲಿ ಮುಂದಿನ ದಿನಗಳಲ್ಲಿ ನಮ್ಮ ಪಕ್ಷದಿಂದ ಈ ಭಾಗದ ರೈತರ ಹಿತ ದೃಷ್ಟಿಯಿಂದ ಬೃಹತ್ ಹೋರಾಟವನ್ನು ಹಮ್ಮಿಕೊಳ್ಳುತ್ತೇವೆ , ಜಂಗಮಕೋಟೆ ಹೋಬಳಿಯಿಂದ ಕೃಷಿ ಯೋಗ್ಯವಲ್ಲದ ಭೂ ಭಾಗದ ಪ್ರದೇಶಕ್ಕೆ ಕೆಐಎಡಿಬಿ ಯೋಜನೆ ಬದಲಾಗುವವರೆಗೂ ನಾವು ಉಗ್ರ ಹೋರಾಟವನ್ನು ನಡೆಸುತ್ತೇವೆ ಎಂದು ಎಚ್ಚರಿಕೆ ನೀಡಿದರು.

# ದಿವಂಗತ ನೀಲಕಂಠಗೌಡರಿಗೆ ಶ್ರದ್ಧಾಂಜಲಿ

**ಮುಳಬಾಗಿಲು:** ನೀಲಕಂಠಗೌಡರು ಕಾಂಗ್ರೆಸ್ ಪಕ್ಷದ ಸಂಘಟನೆಗೆ ಸದಾ ದುಡಿಯುತ್ತಿದ್ದರು ಅದನ್ನು ಕಾರ್ಯಕರ್ತರು ಮುಖಂಡರು ಮುಂದುವರಿಸಿಕೊಂಡು ಹೋಗ ಬೇಕೆಂದು ಕೋಲಾರ ಶಾಸಕ ಕೊತ್ತೂರು ಡಾ. ಜಿ ಮಂಜುನಾಥ್ ತಿಳಿಸಿದರು

ಅವರುಕಾಂಗ್ರೆಸ್ ಕಚೇರಿಯ ಆವರಣದಲ್ಲಿ ಏರ್ಪಡಿಸಿದ್ದ ದಿವಂಗತ ನೀಲಕಂಠಗೌಡರ ಶ್ರದ್ಧಾಂಜಲಿ ಸಭೆಯ ಕಾರ್ಯಕ್ರಮ ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿ ನೀಲಕಂಠೇಗೌಡರ ಆಶಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ಪ್ರತಿಯೊಬ್ಬರು ಒಂದಾಗಬೇಕೆಂದು. ಮುಂದಿನ ದಿನಗಳಲ್ಲಿ 28 ಘಟಕಗಳ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮವನ್ನು ಕೆಲವೇ ದಿನಗಳಲ್ಲಿ ಹಮ್ಮಿಕೊಳ್ಳಲಾಗುವುದು ಗೌಡರು .ಕಾಂಗ್ರೆಸ್ ಪಕ್ಷದಲ್ಲಿ ಸದಾ ಕ್ರಿಯಾಶೀಲರಾಗಿ ಕೆಲಸ ಮಾಡುತ್ತಿದ್ದರು ಅವರ ವಿಚಾರಧಾರೆಗಳನ್ನು ಪ್ರತಿಯೊಬ್ಬರು ಮೈಗೂಡಿಸಿಕೊಳ್ಳಬೇಕೆಂದು ತಿಳಿಸಿದರು

ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿ. ಆದಿನಾರಾಯಣ ಮಾತನಾಡಿ ಕೊತ್ತೂರು ಮಂಜುನಾಥ್ ರವರ ಸೂಚನೆಯಂತೆ ತಾಲೂಕಿನಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆಗೆ ಹೆಚ್ಚು ಒತ್ತು ನೀಡುತ್ತೇನೆ ನೀಲಕಂಠೇಗೌಡರ ನಿಧನದಿಂದ ನಮ್ಮ ಪಕ್ಷಕ್ಕೆ ಭಾರಿ ನಷ್ಟ ಉಂಟಾಗಿದೆ ಇದನ್ನು ಪ್ರತಿಯೊಬ್ಬ ಮುಖಂಡ ಕಾರ್ಯಕರ್ತರು. ಅದನ್ನು ಅರ್ಥ ಮಾಡಿಕೊಂಡು ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಗಳನ್ನು ಜಯಗಳಿಸುವ ನಿಟ್ಟಿನಲ್ಲಿ ಪಕ್ಷದ ಒಗ್ಗಟ್ಟನ್ನು ಪ್ರದರ್ಶಿಸಬೇಕು ಯಾವುದೇ ಕಾರಣಕ್ಕೂ ಬಿನ್ನ ಅಭಿಪ್ರಾಯಗಳನ್ನು ಹೊಂದಿರಬಾರದು.

ನೀಲಕಂಠೇಗೌಡ ಅವರ ವ್ಯಕ್ತಿತ್ವದ ಬಗ್ಗೆ ಮನದೊಳಗಿನ ಮಾತನ್ನು ಮನಮುಟ್ಟುವಂತೆ ಹೇಳಿದರು. ದುಃಖವನ್ನು ನುಂಗುತ್ತಾ ನನ್ನ ತಂದೆಗೆ ಸಮಾನರಾದ ನೀಲಕಂಠ ಗೌಡರು ದೈವದಿನರಾಗಿ ಹದಿನಾರು ದಿವಸಗಳಾದರು ಮರೆಯುವುದಕ್ಕೆ ಸಾಧ್ಯವಾಗುತ್ತಿಲ್ಲ ಎಂದರು

ನೀಲಕಂಠೇಗೌಡರ ಜ್ಞಾಪಕವಾಗಿ ರಕ್ತದಾನ ಶಿಬಿರ ಏರ್ಪಡಿಸಿದರು 55 ಮಂದಿ ರಕ್ತದಾನ ಮಾಡಿದರು ಕೆಪಿಸಿಸಿ ಸದಸ್ಯರಾದ ರಾಮಲಿಂಗ ರೆಡ್ಡಿ. ಆಲಂಗೂರು ಶಿವಣ್ಣ. ಎಂ ಸಿ ತಿಪ್ಪಣ್ಣ. ಎಂ ಸಿ ಧರ್ಮ. ಎಂ ಸಿ ಸರ್ವಜ್ಞ ಗೌಡ. ಎಂ ಸಿ ಪಾಲ್ಗುಣ ಗೌಡ. ಎಂ ಸಿ ಸಹದೇವ್ . ಎಂ ಸಿ ಭಾರ್ಗವ ಗೌಡ.ಕಾರ್ಗಲ್ ವೆಂಕಟೇಶ. ದೇವರಾಯ ಸಮುದ್ರ ರಾಜು. ಉತ್ತನೂರು ಶ್ರೀನಿವಾಸ್. ಮೆಕಾನಿಕ್ ಶ್ರೀನಿವಾಸ್. ಜಮ್ಮನಹಳ್ಳಿ ಕೃಷ್ಣಪ್ಪ. ಗುಜ್ಜನಹಳ್ಳಿ ಮಂಜುನಾಥ್ ಮಂಡಿಕಲ್ ಚಲಪತಿ ಆರ್ ಆರ್ ರಾಜೇಂದ್ರ ಗೌಡ ಉಮಾಶಂಕರ್ ಮೆಕಾನಿಕ್ ಶ್ರೀನಿವಾಸ್ ಕಾರ್ ಶ್ರೀನಿವಾಸ್ ಸುಹಷ್ ಶೆಟ್ಟಿ. ಗೊಲ್ಲಹಳ್ಳಿ ವೆಂಕಟೇಶ್ ಮಂಡಿಕಲ್ಲು ಮಂಜುನಾಥ್ ಗಡ್ಡಂ ಚಿನ್ನೇಪಲ್ಲಿ ರಾಮಮೂರ್ತಿ ನಾಯ್ಡು ಯಮಣ್ಣ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಮಾನುಲ್ಲ. ವಿವೇಕಾನಂದ ಗೌಡ. ಮತ್ತು. ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಎಸಿಬಿ ಪ್ರಕರಣ: ಆರೋಪಿಗಳಿಗೆ ಮೂರು ವರ್ಷಗಳ ಸಾದಾ ಶಿಕ್ಷೆ

**ಚಾಮರಾಜನಗರ:** ಅಂದಿನ ಎಸಿಬಿ,ಇಂದಿನ ಲೋಕಾಯುಕ್ತದಲ್ಲಿನ ಪ್ರಕರಣವೊಂದಕ್ಕೆ ಸಂಬಂದಿಸಿದಂತೆ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ ನ್ಯಾಯಾದೀಶರಾದ ಭಾರತಿರವರು ಆರೋಪಿಗಳಿಗೆ ಮೂರು ವರ್ಷಗಳ ಕಾಲ ಸಾದ ಜೈಲು ಶಿಕ್ಷೆ ಹಾಗೂ ದಂಡ ವಿದಿಸಿ ತೀರ್ಪು ನೀಡಿದೆ.

ಘಟನೆ ವಿವರ: ಚಾಮರಾಜನಗರ ಎ.ಸಿ.ಬಿ. ಘಟಕದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ತನಿಖಾಧಿಕಾರಿ ಎಸ್.ಡಿ.ಸುರೇಶ್ ಅವರು 08.03.2017 ರಂದು ಪ್ರಕರಣ ದಾಖಲಿಸಿ 09.03.2017 ರಂದು ಬೆಳಿಗ್ಗೆ 07.30 ಗಂಟೆ ಸಮಯದಲ್ಲಿ ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನ ಗುಂಡ್ಲುಪೇಟೆ ಪಟ್ಟಣದಲ್ಲಿನ ತಮಿಳುನಾಡು ಮತ್ತು ಕೇರಳ ರಾಜ್ಯಕ್ಕೆ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 202 ರ ಪಕ್ಕದಲ್ಲಿರುವ ಮಾರಾಟ ತೆರಿಗೆ ಠಾಣಾ/ ಚೆಕ್ ಪೋಸ್ಟ್ ನಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ದಿನನಿತ್ಯ ರಾಜ್ಯದಿಂದ ಬರುವ ಹಾಗೂ ಹೊರ ರಾಜ್ಯಗಳಿಗೆ ಹೋಗುವ ಸರಕು ಸಾಗಾಣಿಕೆ ವಾಹನಗಳನ್ನು ಪರಿಶೀಲನೆ ನಡೆಸುವ ಉದ್ದೇಶದಿಂದ ನಿಯಮಾವಳಿ ವಿರುದ್ಧವಾಗಿ ಹಾಗೂ ಕಾನೂನು ಬಾಹಿರವಾಗಿ ಅಲ್ಲಿನ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರು ಆಕ್ರಮವಾಗಿ ಹಣ ವಸೂಲಿ ಮಾಡುತ್ತಿದ್ದಾರೆ ಎಂಬ ಖಚಿತ ದೂರಿನ ಮೇರೆಗೆ, ಎ.ಸಿ.ಬಿ ಯಲ್ಲಿ 02/2017 500 7. 13(1)(2), 13(1)(2). 8/2 13 2 5 1988 0, ಚಿ ದಾಖಲಿಸಿದ್ದರು.

ದಾಳಿ ಸಮಯದಲ್ಲಿ ಮೊದಲ ಆರೋಪಿ ಸಿಟಿಓ ಆಗಿದ್ದ ಶ್ರೀ ಸಿಪಿ ಯೋಗಿಶ್ ರವರ ವಿಶ್ರಾಂತಿ ಕೊಠಡಿಯಲ್ಲಿ 41,510/– ರೂಗಳು, ಆರೋಪಿ ಎ3– ಶ್ರೀ ಶಿವಕುಮಾರ್, ಎಸ್.ಡಿ.ಎ. ರವರ ಬಳಿ 2405/–ರೂಗಳು, ಆರೋಪಿ ಎ4– ಶ್ರೀ ಮಹದೇವ ಡಿ ಗ್ರೂಪ್ ನೌಕರರು, ರವರ ಬಳಿ 3500/– ರೂಗಳು ಹೆಚ್ಚವರಿಯಾಗಿ ನಗದು ವಹಿ ಪುಸ್ತಕದಲ್ಲಿ ಘೋಷಿಸಿದ ಹಣಕ್ಕಿಂತ ಹೆಚ್ಚುವರಿಯಾಗಿ ದೊರೆತಿತ್ತು.ಈ ಸಂಬಂದ ಎ.ಸಿ.ಬಿ ಘಟಕದ ತನಿಖಾಧಿಕಾರಿಗಳಾದ , ಎಸ್.ಡಿ. ಸುರೇಶ್ ಕುಮಾರ್, ಪಿಐ ರವರು ಆರೋಪಿತ ರವರುಗಳಾದ ಶ್ರೀ ಸಿ.ಪಿ. ಯೋಗೇಶ್, (ಸಿಟಿಒ), ಆರೋಪಿ ಎ2–ಶ್ರೀಮತಿ ರತ್ನ ರಾಜಪ್ಪ, (ಸಿಟಿಐ), ಆರೋಪಿ ಎ3– ಶ್ರೀ ಶಿವಕುಮಾರ್ (ಎಸ್.ಡಿ.ಎ). ಹಾಗೂ ಆರೋಪಿ ಎ4–ಶ್ರೀ ಮಹದೇವ (ಡಿ ಗ್ರೂಪ್) ನೌಕರ, ರವರುಗಳ ವಿರುದ್ಧ ದಿನಾಂಕ 12.09.2018 ರಂದು ಘನ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ಸಲ್ಲಿಸಿಕೊಂಡಿದ್ದರು. ಘನ ನ್ಯಾಯಾಲಯವು ನ್ಯಾಯಾಲಯ ಸ್ಪೇಷಲ್ ಕೇಸ್ ನಂಬರ್ 241/2018 ರಲ್ಲಿ ವಿಚಾರಣೆ ಕೈಗೊಂಡಿದ್ದರು

ನ್ಯಾಯಾಲಯ ವಾದ ಆಲಿಸಿ ಆರೋಪಿ ಸಂಖ್ಯೆ 1, 3 ಮತ್ತು 4 ಕ್ಕೆ 4 ವರ್ಷಗಳ ಅವಧಿಗೆ ಸಾದಾ ಜೈಲು ಶಿಕ್ಷೆ ಮತ್ತು 1988 ರ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 13(2) ರ ಅಡಿಯಲ್ಲಿ ದಂಡ ಪಾವತಿಸಲು ತಪ್ಪಿದಲ್ಲಿ ತಲಾ 10,000/– ದಂಡ ವಿಧಿಸಲಾಗುತ್ತದೆ ಎಂದು ತೀರ್ಪಿನಲ್ಲಿ ನ್ಯಾಯಾದೀಶರು ಆದೇಶಿಸಿದ್ದಾರೆ. ಲೋಕಾಯುಕ್ತ ಘಟಕದ ಪರವಾಗಿ ಶ್ರೀ ಮಲ್ಲಿಕಾರ್ಜುನ ಸ್ವಾಮಿ ರವರು ವಾದ ಮಂಡಿಸಿರುತ್ತಾರೆ.

# ಹಿರಿಯ ನಾಗರೀಕರಿಗೆ ಉಚಿತ ವೀಲ್‌ಚೇರ್ ವಿತರಣೆ

**ದೇವನಹಳ್ಳಿ:** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆ ಡಿ.ಸಿ. ಟ್ರಸ್ಟ್ ವತಿಯಿಂದ ವಿಷೇಶ ಫಲಾನುಭವಿಗೆ ಉಚಿತವಾಗಿ ವೀಲ್‌ಚೇರ್ ವಿತರಣೆ ಮಾಡಲಾಯಿತು.

ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆಯ ಅಧಿಕಾರಿಕುಮಾರ್ ಮಾತನಾಡಿ,ಕೊಮ್ಮಸಂದ್ರಗ್ರಾಮದ ನಿವಾಸಿಯಾದ ಹನುಮಂತಪ್ಪಎಂಬುವವರು ಕಳೆದ ಸುಮಾರು ವರ್ಷಗಳಿಂದ ಕಾಯಿಲೆಗೆ ತುತ್ತಾಗಿ ನಡೆಯಲು ಸಾಧ್ಯವಾಗುತ್ತಿರಲಿಲ್ಲವಾದಕಾರಣ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆ ವತಿಯಿಂದ ವೀಲ್‌ಚೇರ್‌ಉಚಿತವಾಗಿ ನೀಡಲಾಯಿತುಎಂದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿಯೋಜನೆಯ ಮನುಜಾ ಮಾತನಾಡಿ, ವಿಶೇಷ ಚೇತನರಿಗೆ ಡಾ.ಡಿ.ವೀರೇಂದ್ರ ಹೆಗ್ಡೆಯವರು ಜಲಮಂಗಲ ಕಾರ್ಯಕ್ರಮದಡಿಯಲ್ಲಿ ವೀಲ್‌ಚೇರ್, ವಾಕಿಂಗ್‌ಸ್ಟಿಕ್, ವಾಟರ್ ಬೆಡ್, ಕಬೋರ್ಡ್ ವಿಥ್ ವೀಲ್‌ಚೇರ್, ಯು ಶೇಪ್ ವಾಕರ್‌ಗಳನ್ನು.ಇಲ್ಲಿಯವರೆಗೆ ವಿಶೇಷ ಚೇತನರಿಗೆ ಹಾಗೂ ಅನಾರೋಗ್ಯ ಪೀಡಿತರಿಗೆ ವಿತರಣೆ ಮಾಡಲಾಗಿದೆಎಂದರು.

ಈ ಸಂದರ್ಭದಲ್ಲಿ ಧರ್ಮಸ್ಥಳ ಸಂಘದ ಸದಸ್ಯರಾದ ಪ್ರೇಮ, ಮುನಿಲಕ್ಷ್ಮಮ್ಮ, ಪರ್ವತಮ್ಮ, ತಿಪ್ಪಕ್ಕ, ನಾರಾಯಣಮ್ಮ, ಯಲಮ್ಮ ಹಾಜರಿದ್ದರು.



# ಡಿಕೆಶಿ ಸಂವಿಧಾನ ತಿದ್ದುಪಡಿಯ ಹೇಳಿಕೆ ಖಂಡನೀಯ

**ದೇವನಹಳ್ಳಿ:** ಪ್ರಜಾಪ್ರಭುತ್ವದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಅವರ ಸರ್ವರಿಗೂ ಸಮಪಾಲು ಸಮ ಬಾಳು ಎಂಬ ಆಶಯದಡಿ ಆಡಳಿತವನ್ನು ನಡೆಸಬೇಕು, ಆದರೆ ಇಂದಿನ ಆಡಳಿತ ವರ್ಗ ಹಿಂದುಳಿದ ಸಮುದಾಯಗಳನ್ನ ಅಭಿವೃದ್ಧಿ ಪಡಿಸುವುದನ್ನು ಹೊರತುಪಡಿಸಿ ಕೆಲವು ಸೀಮಿತ ಸಮುದಾಯಗಳ ಅಭಿವೃದ್ಧಿ ಮಾಡಿ ಮತ ಓಲೈಕೆಯ ರಾಜಕಾರಣ ಮಾಡುತ್ತಿದ್ದಾರೆ ಅವರಿಗಾಗಿ ರಾಜ್ಯ ಡಿಸಿಎಂ ಸಂವಿಧಾನ ತಿದ್ದುಪಡಿಯ ಹೇಳಿಕೆಯನ್ನು ಮುಂದಿಟ್ಟಿರುವುದು ಖಂಡನೀಯವಾದದ್ದು ಅದನ್ನು ಈ ಕೂಡಲೇ ಹಿಂಪಡೆಯಬೇಕು ಎಂದು ಮಾಜಿ ಶಾಸಕ ಪಿಳ್ಳಮುನಿಶಾಮಪ್ಪ ಒತ್ತಾಯಿಸಿದರು.



ದೇವನಹಳ್ಳಿ ಪಟ್ಟಣದ ಆಡಳಿತ ಸೌಧದ ಮುಂಭಾಗದಲ್ಲಿರುವ ಡಾ. ಬಿ.ಆರ್ .ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆಯನ್ನು ಮಾಡಿ ನಂತರ ಮಾಜಿ ಶಾಸಕರಾದ ಜಿ.ಚಂದ್ರಣ್ಣ ರವರ ನೇತೃತ್ವದಲ್ಲಿ " ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಂವಿಧಾನ ತಿದ್ದುಪಡಿ ಮಾಡಿ ಗುತ್ತಿಗೆಯಲ್ಲಿ ಮುಸ್ಲಿಂ ಸಮುದಾಯಕ್ಕೆ ಶೇ.4 % ಮೀಸಲಾತಿ ನೀಡುತ್ತೇನೆ ಎಂದು ಹೇಳಿಕೆ ನೀಡಿರುವುದರ ವಿರುದ್ಧ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದರು.

ಜನರ ದಿಕ್ಕನ್ನು ತಪ್ಪಿಸುವ ಹೇಳಿಕೆಗಳನ್ನು ನೀಡುವುದು ವಿಷಾದನೀಯ, ಪಕ್ಷದ ಆದೇಶದಂತೆ ಸಾಂಕೇತಿಕವಾಗಿ ಪ್ರತಿಭಟನೆ ಮಾಡಿದ್ದೇವೆ, ಸಂವಿಧಾನ ವಿರೋಧಿ ಹೇಳಿಕೆ ಹಿಂಪಡೆಯದಿದ್ದರೆ ಮುಂದಿನ ದಿನಗಳಲ್ಲಿ ಪ್ರತಿ ಹಳ್ಳಿ ಮತ್ತು ಗ್ರಾಮಗಳಲ್ಲಿ ಉಗ್ರ ಹೋರಾಟವನ್ನು ಮಾಡಲಾಗುವುದು ಎಚ್ಚರಿಸಿದರು.

ಮಾಜಿ ಶಾಸಕರಾದ ಜಿ.ಚಂದ್ರಣ್ಣ ಮಾತನಾಡಿ ಡಿಕೆಸಿ ಸಂವಿಧಾನ ವಿರೋಧಿ ಭಾಷಣವನ್ನು ರಾಜಧಾನಿಯ ದೆಹಲಿಯಲ್ಲಿ ಮಾಡುತ್ತಾರೆ ಎಂದರೆ ಇಷ್ಟರ ಮಟ್ಟಿಗೆ ರಾಜ್ಯದ ಜನತೆಯಲ್ಲಿ ಅಸಮಾನತೆ ಭಾವನೆಯನ್ನು ಮೂಡಿಸುತ್ತಿದ್ದಾರೆ ರಾಜ್ಯ ಸರ್ಕಾರ ನಡೆಸುವ ನೀವು ಸಂವಿಧಾನ ವಿರೋಧಿ ಹೇಳಿಕೆಗಳನ್ನು ನೀಡಬಾರದು ಅದು ಅಕ್ಷಮ್ಯ ಅಪರಾಧ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್.ಎಂ ರವಿಕುಮಾರ್ ಮಾತನಾಡಿ ರಾಜ್ಯದ ಪ್ರತಿಮಂಡಲದಲ್ಲಿ ಇಂದು ಭ್ರಷ್ಟ ಹೇಳಿಕೆಯನ್ನು ನೀಡಿದ ಡಿಸಿಎಂ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆಯುತ್ತಿದೆ. ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದು ಎರಡು ವರ್ಷ ಕಳೆದರು ಅವರ ಗ್ಯಾರೆಂಟಿ ಯೋಜನೆಗಳ ಪೂರೈಸುವಲ್ಲಿ ನಿರತರಾಗಿದ್ದಾರೆ ಹೊರತು ರಾಜ್ಯದ ಯಾವುದೇ ಅಭಿವೃದ್ಧಿ ಕಾಮಗಾರಿಗಳು ನಡೆದಿಲ್ಲ .ಕೇವಲ ಮಾತಿಗೆ ಬಡವರ ಪರ ಎಂದು ಹೇಳಿ ಜನಸಾಮಾನ್ಯರ ದಿನನಿತ್ಯ ಬಳಸುವ ವಿದ್ಯುತ್ ,ಸರಕು, ಸಾಗಾಣಿಕೆ ಸೇರಿದಂತೆ ಎಲ್ಲಾ ವಸ್ತುಗಳ ಮೇಲೆ ದರಗಳನ್ನು ಗಗನಕ್ಕೇರಿಸಿದ್ದಾರೆ, ಕಾಂಗ್ರೆಸ್ ಸರ್ಕಾರ ಬಿಜೆಪಿ ಶಾಸಕರ ವಿರುದ್ಧ ದ್ವೇಷ ರಾಜಕಾರಣ ಮಾಡುತ್ತಿದ್ದಾರೆ ಎಂದು ಅಗ್ರಹಿಸಿದರು.

ತಾಲೂಕು ಮಂಡಲ ಅಧ್ಯಕ್ಷ ಅಂಬರೀಶ್ ಗೌಡ ಮಾತನಾಡಿದರು ಮತ್ತು ಪ್ರತಿಭಟನೆಯಲ್ಲಿ ಕಾಂಗ್ರೆಸ್ ಸರ್ಕಾರದ ದುರಾಡಳಿತದ ವಿರುದ್ಧ ಧಿಕಾರದ ಘೋಷಣೆಗಳನ್ನು ಕೂಗಿದರು.

ಇದೇ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ದೇಸು ನಾಗರಾಜ್, ಎಕೆಪಿ ನಾಗೇಶ್, ನಿಲೇರಿಮಂಜುನಾಥ್, ಸುರೇಶ್ ಆಚಾರ್, ಕೇಶವ, ಸುನಿಲ್, ಪ್ರಭು, ಪುನೀತ, ಭಗವಾನ್ ಹೆಗಡೆ, ವಿನಯ್ ಕುಮಾರ್ ,ಪ್ರೇಮ, ಅಂಬರೀಶ್ ಸೇರಿದಂತೆಮಂಡಲ ಪದಾಧಿಕಾರಿಗಳು,ಎಲ್ಲಾಮೋರ್ಚಾಗಳ ಪದಾಧಿಕಾರಿಗಳು, ಮಹಾಶಕ್ತಿಕೇಂದ್ರದ ಅಧ್ಯಕ್ಷರು ಹಾಗೂ ಪ್ರಧಾನ ಕಾರ್ಯದ ರ್ಶಿಗಳು, ಮುಖಂಡರು,ಕಾರ್ಯಕರ್ತರು ಭಾಗವಹಿಸಿದ್ದರು.

# ಮಹಿಳೆ ಸ್ವಾವಲಂಬಿಯಾದರೆ ಸಮಾಜವು ಶಕ್ತಿ ಯುತವಾಗುತ್ತದೆ

**ಕೊರಟಗೆರೆ:** ಮಹಿಳೆಯರು ಸ್ವಾವಲಂಬಿಗಳಾದರೆ ಸಮಾಜವು ಶಕ್ತಿವಂತಾಗುತ್ತದೆ ಮಹಿಳೆಯರಿಗೆ ಅವಕಾಶ ಕಲ್ಪಿಸಿಲು ನಮ್ಮಆಕ್ವಿನ್ ಪೈನಾನ್ಸಿಯಲ್ ಸೊಲ್ಯೂಷನ್ಸ್ ಸಂಸ್ಥೆ ಸದಾ ಬೀಮ್‌ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮೂಲಕ ನಿಮ್ಮೊಂದಿಗೆ ಇರುತ್ತದೆ ಎಂದು ಅಕ್ವಿನ್ ಸಂಸ್ಥೆಯ ಉಪಾಧ್ಯಕ್ಷ ರೇಷ್ಮಾಗೋಯಲ್ ತಿಳಿಸಿದ್ದಾರೆ.

ಅವರು ಕೊರಟಗೆರೆ ಪಟ್ಟಣದಲ್ಲಿ ಉಚಿತ ಕಂಪ್ಯೋಟರ್ ಮತ್ತು ಹೊಲಿಗೆ ತರಬೇತಿ ನೀಡುತ್ತಿರುವ ಬೀಮ್‌ಗ್ರಾಮೀಣಾಭಿವೃದ್ಧಿ ಸಂಸ್ಥೆಯಲ್ಲಿ ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚಣೆ ಮತ್ತು ತರಬೇತಿ ಪಡೆದ 400 ಫಲಾನುಭವಿಗಳಿಗೆ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿ, ಮಹಿಳೆಯರು ಆರ್ಥಿಕವಾಗಿ ಸಬಲರಾಗಲು ಸದಾ ಕ್ರೀಯಾ ಶೀಲರಾಗಿ ಉದ್ಯಮ ಶೀಲತೆಯನ್ನು ಮೈಗೊಡಿಸಿ ಕೊಳ್ಳಬೇಕು, ಸಮಾಜದಎಲ್ಲಾ ಕ್ಷೇತ್ರಗಳಲ್ಲಿಯೂ ಮಹಿಳೆಯು ಸಾಧನೆಗೈಯುವ ಮೂಲಕ ಹೆಣ್ಣು ಅಬಲೆಯಲ್ಲ ಸಬಲೆ ಎಂದು ತಿಳಿಸಿದರು.



ಬೆಂಗಳೂರು ಅಕ್ವಿನ್ ಫೈನಾನ್ಸಿಯಲ್ ಸೊಲ್ಯೋಷನ್ ಸಂಸ್ಥೆಯಅಧ್ಯಕ್ಷ ವಿಜಯ್‌ಕುಮಾರ್ ಮಾತನಾಡಿ ಮಹಿಳೆಯರ ಪ್ರತಿಭೆಗಳನ್ನು ಗುರುತಿಸಿ ಅವರನ್ನು ಸಮಾಜದ ಮುಖ್ಯವಾಹಿನಿಯ ಮುನ್ನಡೆಗೆ ತರತಕ್ಕದ್ದು ಪುರುಷರ ಕೆಲಸವಾಗಿದೆ, ಕೊರಟಗೆರೆಯಲ್ಲಿ ಬೀಮ್ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಮೂಲಕ ಸಾವಿರಾರು ಮಹಿಳೆಯರು ಉಚಿತವಾಗಿ ಕಂಪ್ಯೋಟರ್, ಹೊಲಿಗೆ ಹಾಗೂ ಕಸೂತಿತರಬೇತಿ ಪಡೆದು ಸ್ವತಂತ್ರಜೀವನ ನಡೆಸುತ್ತಿರುವುದುಉತ್ತಮ ಸಾಧನೆಯಾಗಿದೆಎಂದು ತಿಳಿಸಿದ ಅವರು ಬೀಮ್ ಸಂಸ್ಥೆಯಲ್ಲಿ ಮಹಿಳಾ ಶಿಕ್ಷಕಿಯರಿಂದಲೇ ತರಬೇತಿ ನೀಡಲಾಗುತ್ತಿದ್ದುಇಲ್ಲಿ ಬರುವ ಪ್ರತಿ ಹೆಣ್ಣು ಮಕ್ಕಳಿಗೂ ವಿಶೇಷ ಭದ್ರತೆ ಒದಗಿಸಿದ್ದು ಗ್ರಾಮೀಣ ಭಾಗದ ಮಹಿಳೆಯರು ಕಲಿತು ಸಾಧನೆ ಮಾಡಿದರೆಗ್ರಾಮಕ್ಕೂ ಮತ್ತುತಮ್ಮಕುಟುಂಬಕ್ಕೂಗೌರವತಂದುಕೊಟ್ಟ ಹಾಗೆ ಎಂದು ತಿಳಿಸಿದರು

ಬೀಮ್‌ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಂಸ್ಥಾಪಕ ಆಧ್ಯಕ್ಷರವಿಕುಮಾರ್ ಮಾತನಾಡಿ ಮಹಿಳರಯರು ದೇವತೆಯರೂಪ ಹೊಂದಿದ್ದಾರೆ ಮಹಿಳೆಯರು ಕೇವಲ ಅಡುಗೆ ಮನೆಗೆ ಹಾಗೂ ಪುರುಷರು ಸೇವೆಗೆ ಮೀಸಲಾಗದೆಎಲ್ಲಾ ಕ್ಷೇತ್ರಗಳಲ್ಲೂ ಪರಿಣಿತಿಯನ್ನು ಹೊಂದಿ ಸಾಧನೆಯನ್ನು ಮಾಡಿದ್ದಾರೆ, ಬಾಹ್ಯಾಕಾಶಗಗನಯಾನ ಸೇರಿದಂತೆಇತರೆ ವಲಯಗಳಲ್ಲಿ ಗಣನೀಯ ಸಾಧನೆ ಮಾಡಿರುವುದು ಶ್ಲಾಘನೀಯವಾಗಿದ್ದು ಮಹಿಳೆಯರು ಸಮಾಜಮುಖಿಯಾಗಿ ಬೆಳೆದರೆ ದೇಶ ನಾಡು ಸಮೃದ್ದಿಯಾಗುವದರಜೊತೆಗೆ ಮಕ್ಕಳನ್ನು ಪುರುಷರನ್ನು ಸರಿಪಡಿಸಲು ಸಹಕಾರಿಯಗುತ್ತದೆಎಂದು ತಿಳಿಸಿದ ಅವರುಇತಿಹಾಸದಿಂದಲೂ ಪ್ರತಿಯೊಬ್ಬ ಪುರುಷನ ಯಶಸ್ವಿನ ಹಿಂದೆ ಮಹಿಳೆ ಇದ್ದೇ ಇರುತ್ತಾಳೆ ಎಲ್ಲಾ ಮಹಿಳೆಯರಿಗೂ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ತಿಳಿಸಿದರು.

ತಾಲೂಕುಕಾರ್ಯನಿರತ ಪತ್ರಕರ್ತರ ಸಂಘದಅಧ್ಯಕ್ಷ ಕೆ.ವಿ.ಪುರಷೋತ್ತಮ್ ಮಾತನಾಡಿ ಮಹಿಳೆಯರಿಗೆ ಸರ್ಕಾರ ಶೇ. 33 ರಷ್ಟು ಮೀಸಲತಿ ನೀಡಿರುವ ಹಿನ್ನಲೆಯಲ್ಲಿಗ್ರಾಮೀಣ ಮಹಿಳೆಯರು ರಾಜಕೀಯಕ್ಷೇತ್ರದಲ್ಲಿ ಸಾಧನೆ ಮಾಡುತ್ತಿರುವುದುಕಾಣಬಹುದು, ಮಹಿಳೆಯರು ಮಹಿಳಾ ದಿನಾಚರಣೆಗಳು ಮಾಡುವ ಮೂಲಕ ಮಹಿಳೆಯರು ಯಾವಕ್ಷೇತ್ರದಲ್ಲಿ ಸಾಧನೆ ಮಾಡಬಹದು ಎಂಬ ತಾಂತ್ರಿಕವಾದ ಯೋಜನೆಗಳನ್ನು ರೂಪಿಸುವ ನಿಟ್ಟನಲ್ಲಿಚರ್ಚಿಸಬೇಕು, ಸಭೆಗಳನ್ನು ನಡೆಸಿ ಆರ್ಥಿಕವಾಗಿ ಸಮಾಜದಲ್ಲಿ ಹೇಗೆ ಬದಲಾವಣೆಕಾಣಬೇಕು ಮತ್ತು ವಿದ್ಯಾಭ್ಯಾಸದಜೊತೆಗೆಕೈಗಾರಿಕಾ ವಲಯದಲ್ಲಿ ಹೇಗೆ ಸಕ್ರಿಯವಾಗಿರಬೇಕೆಂಬುದರ ಬಗ್ಗೆ ಚರ್ಚೆ ನಡೆಸಬೇಕುಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿತರಬೇತಿ ಪಡೆದ ಫಲಾನುಭವಿಗಳಾದ ನಾಗಲಕ್ಮೀ, ಅನಂತಲಕ್ಷ್ಮಿ, ನಿಕಿತಾ ಮಾತನಾಡಿದರು ವೇದಿಕೆಯಲ್ಲಿ ಶಿಕ್ಷಕಿಯರಾದ ಶ್ರೀದೇವಿ, ನಾಗಮಣಿ, ಫರಹತ್‌ಉನ್ನೀಸಾ, ಚೈತ್ರ, ಸುಧಾ ಸೇರಿದಂತೆತರಬೇತಿ ಪಡೆದ 400 ಕ್ಕೂ ಹೆಚ್ಚು ಮಹಿಳಾ ಫಲಾನುಭವಿಗಳು ಉಪಸ್ಥಿತರಿದ್ದರು.



## ರಾಯರಡ್ಡಿಯಿಂದ ಕಾಮಗಾರಿಗಳ ಪರಿಶೀಲನೆ



**ಕುಕನೂರು:** ಆರ್ಥಿಕ ಸಲಹೆಗಾರ, ಶಾಸಕ ಬಸವರಾಜ್ ರಾಯರಡ್ಡಿ ತಾಲೂಕಿನ ತಳಕಲ್, ಇಟಗಿ, ಮಂಡಲಗಿರಿ ಗ್ರಾಮಗಳಲ್ಲಿ ನಡೆಯುತ್ತಿರುವ ವಿವಿಧ ಕಾಮಗಾರಿಗಳ ಗುಣಮಟ್ಟವನ್ನು ಖುದ್ದು ಪರಿಶೀಲನೆ ಮಾಡಿದರು.

ನಂತರ ಮಾತನಾಡಿದ ಅವರು , ಕಾಮಗಾರಿಗಳು ಗುಣಮಟ್ಟದಿಂದ ಕೂಡಿರಬೇಕು, ಕಳಪೆ ಕಾಮಗಾರಿಯಾಗಬಾರದು ಜೊತೆಗೆ ಅವಜ್ಞಾನಿಕ ಕಾಮಗಾರಿ ಕೂಡ ಆಗಬಾರದು, ಗ್ರಾಮಸ್ಥರಿಗೆ ಅನುಕೂಲವಾಗುವ ರೀತಿ ಸಾರ್ವಜನಿಕರು ಖುಷಿ ಪಡುವ ರೀತಿಯಲ್ಲಿ ಕಾಮಗಾರಿಗಳಾಗಬೇಕು ಎಂದರು.

ಈ ಸಂದರ್ಭದಲ್ಲಿ ತಹಸಿಲ್ದಾರ್ ಎಚ್ ಪ್ರಾಣೇಶ್, ತಾಲೂಕು ಪಂಚಾಯಿತ ಕಾರ್ಯನಿರ್ವಾಹಕ ಅಧಿಕಾರಿ ಸಂತೋಷ್ ಬಿರಾದಾರ್, ಮುಖಂಡರಾದ ಕರಿಬಸಪ್ಪ ನಿಡಗುಂದಿ, ಚಂದ್ರಶೇಖರಯ್ಯ ಹಿರೇಮಠ, ಹನುಮಂತಗೌಡ ಚಂಡೂರ್, ಡಾ. ಮಲ್ಲಿಕಾರ್ಜುನ್ ಬಿನ್ನಾಳ್, ಸಂಗಮೇಶ್ ಗುತ್ತಿ, ಆನಂದ್ ಉಳ್ಳಾಗಡ್ಡಿ, ರಾಘವೇಂದ್ರ ಕಾತರಕಿ, ಸೇರಿದಂತೆ ಮುಖಂಡರು ಗ್ರಾಮಸ್ಥರು ಇತರರು ಉಪಸ್ಥಿತರಿದ್ದರು.


## ವಚನಾಮೃತ ಪ್ರವಚನ ಹಾಗೂ ದಾಸೋಹ




**ಬೆಂಗಳೂರು:** ಪೀಣ್ಯ ದಾಸರಹಳ್ಳಿ ಸಮೀಪದ ದಾಸರಹಳ್ಳಿಯ ನೆಲೆ ಮಹೇಶ್ವರಮ್ಮ ದೇವಸ್ಥಾನದ ಆವರಣದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಬೆಂಗಳೂರು ಘಟಕ, ವೀರಶೈವ–ಲಿಂಗಾಯಿತ ಕ್ಷೇಮಾಭಿವೃದ್ಧಿ ವೇದಿಕೆ ದಾಸರಹಳ್ಳಿ ಕ್ಷೇತ್ರ, ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾ, ಕಾಯಕಯೋಗಿ ಸಹಕಾರ ಸಂಘ ನಿಯಮಿತ ಮತ್ತು ಅಕ್ಕಮಹಾದೇವಿ ಮಹಿಳಾ ಸಂಘದ ವತಿಯಿಂದ ಶ್ರೀ ಶಿವಕುಮಾರ ಸ್ವಾಮೀಜಿ ಅವರ 118ನೇ ಜನ್ಮದಿನೋತ್ಸವದ ಪ್ರಯುಕ್ತ ವಚನಾಮೃತ ಮತ್ತು ಆಧ್ಯಾತ್ಮಿಕ ಪ್ರವಚನ ವಚನ ಗೀತೆ, ಭಕ್ತಿ ಗೀತೆಯನ್ನು ರಾಯಚೂರು ಜಿಲ್ಲೆ ಮಹಾಂತೇಶ್ವರ ಮಠದ ಮಹಾಂತ ಮಹಾಸ್ವಾಮೀಜಿ ನಡೆಸಿಕೊಟ್ಟರು. ಸಿದ್ದಗಂಗಾ ಮಠದ ಕಿರಿಯ ಸ್ವಾಮಿಗಳಾದ ಶಿವ ಸಿದ್ದೇಶ್ವರ ಮಹಾಸ್ವಾಮಿಗಳು, ವಿಜಿಪುರ ಮಠದ ಸದಾಶಿವ ಸ್ವಾಮಿಗಳು ಭಾಗವಹಿಸಿದರು.

1000 ಜನರಿಗೆ ಅನ್ನ ದಾಸೋಹವನ್ನು ದಾಸರಹಳ್ಳಿ ಕ್ಷೇತ್ರ ಘಟಕ ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ವೈಬಿಎಚ್ ಜಯದೇವ್ ಅವರು ಏರ್ಪಡಿಸಿದ್ದರು. ವೇದಿಕೆಯ ಅಧ್ಯಕ್ಷ ಬಸವರಾಜಣ್ಣ, ಪಿ ಎಚ್ ರಾಜು, ಎಂ ಬಸವರಾಜ್, ಎಂ.ಕೆ ಜಗದೀಶ್, ಸೋಲಾರ್ ಸುಬ್ಬಣ್ಣ ಮುಂತಾದವರಿದ್ದರು.

## ಭಾರತದ ಡ್ರೋನ್ ಚೀನಾ ಹ್ಯಾಕ್ ಮಾಡಿತ್ತೇ?



**ನವದೆಹಲಿ:** ತನ್ನ ರಿಮೋಟ್ ಪೈಲಟ್ ಏರ್‌ಕ್ರಾಫ್ಟ್ಒಂದನ್ನು ಚೀನಾ ಪಡೆಗಳು ಹ್ಯಾಕ್ ಮಾಡಿವೆ ಎಂಬ ಆರೋಪಗಳನ್ನು ಭಾರತೀಯ ಸೇನೆ ಅಲ್ಲಗಳೆದಿದೆ. ರಿಮೋಟ್ ಪೈಲಟ್ ಏರ್‌ಕ್ರಾಫ್ಟ್‌ಗಳನ್ನು ಸಾಮಾನ್ಯವಾಗಿ ಡ್ರೋನ್‌ಗಳೆಂದು ಕರೆಯಲಾಗುತ್ತದೆ. ಈ ಕುರಿತಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಪೋಸ್ಟ್‌ಗಳ ಬಗ್ಗೆ ಸ್ಪಷ್ಟನೆ ನೀಡಿರುವ ಸೇನೆ, ದೃಢೀಕರಿಸದ ಮತ್ತು ಜನರ ದಾರಿ ತಪ್ಪಿಸುವ ಇಂಥ ಸುದ್ದಿಗಳನ್ನು ಪ್ರಸಾರ ಮಾಡದಂತೆ ಮಾಧ್ಯಮ ಸಂಸ್ಥೆಗಳು ಮತ್ತು ಸಾಮಾಜಿಕ ಜಾಲತಾಣ ಬಳಕೆದಾರರಿಗೆ ಮನವಿ ಮಾಡಿದೆ.

ತನ್ನ ಎಲ್ಲಾ ಸ್ವತ್ತುಗಳ ರಕ್ಷಣೆ ಮತ್ತು ಕಾರ್ಯಾಚರಣೆಯ ಸಮಗ್ರತೆಗೆ ಸಂಪೂರ್ಣವಾಗಿ ಬದ್ಧವಾಗಿರುವುದಾಗಿ ಸೇನೆ ಹೇಳಿದೆ.

ಭಾರತೀಯ ಸೇನಾಪಡೆಗೆ ಸೇರಿದ ಒಂದು ಆರ್‌ಪಿಎ ಇತ್ತಿಚೆಗೆ ಚೀನಾದ ಪೂರ್ವ ಸೇನಾ ವಲಯದೊಳಗೆ ನುಸುಳಿತ್ತು ಹಾಗೂ ಅದನ್ನು ಚೀನಾ ಸೇನೆಯು ಹ್ಯಾಕ್ ಮಾಡಿದೆ ಎಂದು ಸಾಮಾಜಿಕ ಮಾಧ್ಯಮ ಪೋಸ್ಟ್?ಗಳಲ್ಲಿ ಹೇಳಲಾಗಿತ್ತು. ಈ ಪೋಸ್ಟ್ ಸಂಪೂರ್ಣವಾಗಿ ಆಧಾರರಹಿತ ಹಾಗೂ ವಾಸ್ತವಿಕವಾಗಿ ತಪ್ಪಾಗಿದೆ ಮತ್ತು ಅಂತಹ ಯಾವುದೇ ಘಟನೆ ನಡೆದಿಲ್ಲ ಎಂದು ಸ್ಪಷ್ಟಪಡಿಸುತ್ತಿದ್ದೇವೆ ಎಂದು ಸೇನಾ ಮೂಲಗಳು ತಿಳಿಸಿವೆ.

ಸಾರ್ವಜನಿಕ ವಲಯದಲ್ಲಿ ಅನಗತ್ಯ ಆತಂಕ ಸೃಷ್ಟಿಸಬಹುದಾದ ಮತ್ತು ತಪ್ಪು ಮಾಹಿತಿಯನ್ನು ಹರಡಬಹುದಾದ ದೃಢೀಕರಿಸದ ಮತ್ತು ದಾರಿತಪ್ಪಿಸುವ ಮಾಹಿತಿಗಳನ್ನು ಪ್ರಸಾರ ಮಾಡದಂತೆ ಮಾಧ್ಯಮ ಸಂಸ್ಥೆಗಳು ಮತ್ತು ಸಾಮಾಜಿಕ ಮಾಧ್ಯಮ ಬಳಕೆದಾರರಿಗೆ ಸೇನೆ ಒತ್ತಾಯಿಸಿದೆ ಎಂದು ಮೂಲಗಳು ತಿಳಿಸಿವೆ.

## ಏಪ್ರಿಲ್ ಮಾಹೆಯಲ್ಲಿ 2500 ನಿವೇಶನ ಹಂಚಿಕೆ ಗುರಿ

**ದೇವನಹಳ್ಳಿ:** ತಾಲ್ಲೂಕಿನ ನಿವೇಶನ ರಹಿತ ಅರ್ಹ ಫಲಾನುಭವಿಗಳನ್ನು ಈಗಾಗಲೇ ಗುರ್ತಿಸಿಲಾಗಿದ್ದು ಏಪ್ರಿಲ್ ಮಾಹೆಯಲ್ಲಿ 2500 ನಿವೇಶನ ಹಂಚಿಕೆ ಮಾಡುವ ಗುರಿ ಇದೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಹೆಚ್ ಮುನಿಯಪ್ಪ ಅವರು ಹೇಳಿದರು.

ಕನ್ನಮಂಗಲ ಗ್ರಾಮ ಪಂಚಾಯತಿ ಆವರಣದಲ್ಲಿ ನಡೆದ 2024–25ನೇ ಸಾಲಿನ ಗ್ರಾಮಸಭೆಯಲ್ಲಿ ಮಾತನಾಡಿದ ಸಚಿವರು ಮಾರ್ಚ್ ಅಂತ್ಯದಲ್ಲಿ ನಿವೇಶನ ನೀಡುವ ಗುರಿ ಹೊಂದಲಾಗಿತ್ತು ಕಾರಣಾಂತರಗಳಿಂದ ಮುಂದೂಡಲಾಗಿದ್ದು ಏಪ್ರಿಲ್ ಮಾಹೆಯಲ್ಲಿ ದೊಡ್ಡಮಟ್ಟದಲ್ಲಿ ಕಾರ್ಯಕ್ರಮ ಏರ್ಪಡಿಸಿ ನಿವೇಶನ ರಹಿತ ಅರ್ಹ ಫಲಾನುಭವಿಗಳಿಗೆ ನಿವೇಶನ ಹಂಚಿಕೆ ಮಾಡಲಾಗುವುದು ಎಂದರು.



ಪ್ರತಿ ಗ್ರಾಮಪಂಚಾಯತಿಯಲ್ಲಿ ಹೊಸ ಮಾದರಿ ಶಾಲೆಗಳ ನಿರ್ಮಾಣದ ಗುರಿಯನ್ನು ಹೊಂದಲಾಗಿದೆ. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಲಭ್ಯವಾದಲ್ಲಿ ಭವಿಷ್ಯದಲ್ಲಿ ಮಕ್ಕಳು ಉನ್ನತ ಹುದ್ದೆಗಳನ್ನು ಪಡೆಯಲು ಸಹಕಾರಿಯಾಗುತ್ತೆ ಎಂದು ಹೇಳಿದರು.

ಮಕ್ಕಳ ಪೋಷಣೆ, ಪಾಲನೆಯಲ್ಲಿ ತಾಯಂದಿರ ಪಾತ್ರ ಬಹಳ ಮುಖ್ಯ. ಗರ್ಭಿಣಿ, ಬಾಣಂತಿಯರಿಗೆ ಪೌಷ್ಟಿಕ ಅಹಾರವನ್ನು ಅಂಗನವಾಡಿ ಮುಖಾಂತರ ಕ್ರಮಬದ್ದವಾಗಿ ವಿತರಿಸಬೇಕು. ಇಲ್ಲವಾದಲ್ಲಿ ಅಪೌಷ್ಟಿಕ ಮಕ್ಕಳ ಜನನವಾಗಿ ಸಮಾಜಕ್ಕೆ, ಕುಟಂಬಕ್ಕೂ ಹೊರೆಯಾಗಲಿದ್ದಾರೆ. ಹಾಗಾಗಿ ಪೌಷ್ಟಿಕ ಆಹಾರ ವಿತರಣೆಯಲ್ಲಿ ಯಾವುದೇ ಲೋಪಗಳು ಉಂಟಾಗದೇ ಅಹಾರ ವಿತರಿಸುವ ಮೂಲಕ ಅರಿವು ಮೂಡಿಸಿ ಎಂದು ಅಧಿಕಾರಿಗಳಿಗೆ ಸಲಹೆ ನೀಡಿದರು.

ಗ್ರಾಮ ಸಭೆಯಲ್ಲಿ ವಿಶೇಷಚೇತನರಿಗೆ ಸೋಲಾರ್ ಕಿಟ್ ವಿತರಣೆ , ತಾಂತ್ರಿಕ ಮತ್ತು ವೈದ್ಯಕೀಯ ಪದವಿಯ ವಿದ್ಯಾರ್ಥಿಗಳಿಗೆ ಸಾಧನ ಸಲಕರಣೆಗಳ ವಿತರಣೆ, ತರಬೇತಿ ಪಡೆದ ಮಹಿಳೆಯರಿಗೆ ಹೊಲಿಗೆ ಯಂತ್ರ ವಿತರಣೆ, ಪಿಯುಸಿ ಮತ್ತು ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡಲಾಯಿತು.

ಬಯಪ ಅಧ್ಯಕ್ಷ ವಿ.ಶಾಂತ್ ಕುಮಾರ್ ಮಾತನಾಡಿ ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳು ಸಕಾಲದಲ್ಲಿ ಎಲ್ಲರನ್ನೂ ತಲುಪುತ್ತಿದೆ,ಹಾಗೂ ನೀರನ್ನು ಹಿತಮಿತವಾಗಿ ಬಳಿಸಿ ಎಂದು ಸಲಹೆ ನೀಡಿದರಲ್ಲದೇ ಕನ್ನಮಂಗಲ ಪಂಚಾಯತಿ ಅಭಿವೃದ್ಧಿಕಾರ್ಯಗಳಲ್ಲಿ ಇತರ ಪಂಚಾಯತಿಗಳಿಗೆ ಮಾದರಿ ಪಂಚಾಯತಿಯಾಗಲಿ ಆಶಯ ವ್ಯಕ್ತಪಡಿಸಿದರು.

ಗ್ರಾ.ಪಂ ಮಾಜಿ ಅಧ್ಯಕ್ಷ ಮತ್ತು ಹಾಲಿ ಸದಸ್ಯರಾದ ಕೆ.ಆರ್. ನಾಗೇಶ್ ಗ್ರಾಮ ಪಂಚಾಯತಿಯಲ್ಲಿ ಆಗುವಂತಹ ಅಭಿವೃದ್ಧಿ ಕಾರ್ಯಗಳು ಗ್ರಾಮಸ್ಥರಿಗೆ ತಿಳಿಯಬೇಕು. ವೈದ್ಯಕೀಯ ಸೌಲಭ್ಯಗಳನ್ನು ನೀಡಲಾಗುತ್ತಿದೆ. ಪಶುಸಂಗೋಪನೆಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುತ್ತಿದೆ. ದನ–ಕರುಗಳಿಗೆ ವಿಮೆಯನ್ನು ಮಾಡಿಸಲಾಗುತ್ತಿದೆ, 57ಲಕ್ಷ ವೆಚ್ಚದ ಡಿಜಿಟಲ್ ಗ್ರಂಥಾಲಯವಿದ್ದು, ಕೆಲಸಕ್ಕೆ ಹೋಗುವಂತಹ ಮಹಿಳೆಯರ ಮಕ್ಕಳಿಗೆ ಕೂಸಿನ ಮನೆ ವ್ಯವಸ್ಥೆ ಕೂಡ ಕಲ್ಪಿಸಲಾಗಿದ್ದು, ಇದನ್ನು ಪ್ರತಿಯೊಬ್ಬರೂ ಸದುಪಯೋಗಪಡಿಸಿಕೊಳ್ಳಿ ಮುಂದಿನ ದಿನಗಳಲ್ಲಿ ಯುಜಿಡಿ ವ್ಯವಸ್ಥೆ ಜಾರಿಗೆ ತರಲಿದ್ದೇವೆ ಎಂದು ಹೇಳಿದರು.

ಜಿಲ್ಲಾ ಸ್ಥಾಯಿ ಸಮಿತಿಯ ಮಾಜಿ ಅಧ್ಯಕ್ಷರಾದ ಕೆ.ಸಿ.ಮಂಜುನಾಥ್ ಮಾತನಾಡಿ, ಎಲ್ಲರಿಗೂ ನಿವೇಶನಗಳು ನೀಡಲು ಸಾಧ್ಯವಿಲ್ಲ ಕೆಲವು ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ನಿವೇಶನ ರಹಿತರಿಗೆ ನಿವೇಶನ ಕಲ್ಪಿಸುವುದು ಖಚಿತ ಈಗಾಗಲೇ ನಿವೇಶನ ನೀಡಿದವರಿಗೆ ಹಕ್ಕುಪತ್ರವನ್ನು ನೀಡಲಾಗುವುದು ಎಂದರು. ಪಿಡಿಒ ಶ್ರೀನಿವಾಸ್.ಟಿ ಅವರು ಗ್ರಾಮ ಪಂಚಾಯಿತಿಯ ವಾರ್ಷಿಕ ವರದಿ ಮತ್ತು ಅಭಿವೃದ್ಧಿಯ ಕಾಮಗಾರಿಗಳ ಕುರಿತು ಮಾಹಿತಿ ನೀಡಿ ನಂತರ ಗ್ರಾಮಸ್ಥರಲ್ಲಿ ಪರಿಸರದ ಕಾಳಜಿ, ನೀರಿನ ಮೌಲ್ಯ, ಸ್ವಚ್ಛತೆ ನೈರ್ಮಲ್ಯದ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಿದರು.

ಸಭೆಯಲ್ಲಿ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಸಿ. ಜಗನ್ನಾಥ, , ಗ್ರಾ.ಪಂ ಮಾಜಿ ಅಧ್ಯಕ್ಷ ಮತ್ತು ಹಾಲಿ ಸದಸ್ಯರಾದ ಕೆ.ಎಂ.ಲಕ್ಷ್ಮಿಕಾಂತ್ ಕನ್ನಮಂಗಲ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶಾಲಿನಿ.ಬಿ.ಎಸ್, ಉಪಾಧ್ಯಕ್ಷರಾದ ವನಜಾಕ್ಷಮ್ಮ, ಗ್ರಾಮ ಪಂಚಾಯಿತಿ ಸದಸ್ಯರಾದ ಅಂಬುಜ. ಸಿ .ಕೃಷ್ಣಪ್ಪ ,ಸೋಮಶೇಖರ್ .ಕೆ, ನರಸಿಂಹ ಮೂರ್ತಿ ,ಗೌರಮ್ಮ .ಎಂ ಸೇರಿದಂತೆ ಇತರ ಸದಸ್ಯರು ,ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು, ಸಿಬ್ಬಂದಿ, ಸಾರ್ವಜನಿಕರು ಉಪಸ್ಥಿತರಿದ್ದರು.

## ಹಣಕ್ಕಾಗಿ 15 ವರ್ಷದ ಬಾಲಕನ ಅಪಹರಿಸಿ ಕೊಲೆ

**ನವದೆಹಲಿ:** 16 ವರ್ಷದ ಬಾಲಕನನ್ನು ಮೂವರು ಅಪ್ರಾಪ್ತರು ಅಪಹರಿಸಿ, 10 ಲಕ್ಷ ರೂಪಾಯಿಗೆ ಬೇಡಿಕೆ ಇಟ್ಟು ಕೊಲೆಗೈದ ಆಘಾತಕಾರಿ ಘಟನೆ ದೆಹಲಿಯಲ್ಲಿ ನಡೆದಿದೆ.

9ನೇ ತರಗತಿ ಓದುತ್ತಿದ್ದ ವಿದ್ಯಾರ್ಥಿ ವೈಭವ್ ಗರ್ಗ್ ಕೊಲೆಯಾದ ಬಾಲಕ. ದೆಹಲಿಯ ಮುಖರ್ಜಿ ನಗರದ ನಿವಾಸಿ. ಈತನ ತಂದೆ ವೃತ್ತಿಯಲ್ಲಿ ಚಾಲಕರಾಗಿದ್ದಾರೆ.

ಘಟನೆಯ ಪೂರ್ಣ ವಿವರ: ಮಾರ್ಚ್ 23ರಂದು ಬಾಲಕನ ಅಪಹರಣ ಮತ್ತು ಮಾರ್ಚ್ 24ರಂದು ಆತನ ಕೊಲೆಗೆ ಸಂಬಂಧಿಸಿದಂತೆ ದೆಹಲಿಯ ವಜೀರಾಬಾದ್ ಪೊಲೀಸ್ ಠಾಣೆಗೆ ಕರೆ ಬಂದಿದೆ. ಈ ಕುರಿತು ಪ್ರಕರಣ ದಾಖಲಾಗುತ್ತಿದ್ದಂತೆ ಪೊಲೀಸರು ತಕ್ಷಣವೇ ಕಾರ್ಯಪ್ರವೃತ್ತರಾಗಿದ್ದಾರೆ. ತಂದೆ ವಿಕಾಸ್ ಗರ್ಗ್ ಅವರು ಮಗನನ್ನು ಕೊನೆಯ ಬಾರಿಗೆ 17 ವರ್ಷದ ಇಬ್ಬರು ಹಾಗೂ 16 ವರ್ಷದ ಓರ್ವ ಬಾಲಕನ ಜೊತೆಗೆ ಝರೋಡಾ ಪುಷ್ತಾ ರಸ್ತೆಯ ಬಳಿ ಬೈಕ್‌ನಲ್ಲಿ ನೋಡಿದ್ದರು ಎಂದು ತಿಳಿಸಿದ್ದಾರೆ. ತಂದೆಯ ಹೇಳಿಕೆ ಸಿಸಿಟಿವಿ ಮೂಲಕವೂ ದೃಢಪಟ್ಟಿದೆ. ಇದರ ಆಧಾರದ ಮೇಲೆ ಮೂವರು ಅಪ್ರಾಪ್ತರನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಾದ ಅಪ್ರಾಪ್ತರ ವಿಚಾರಣೆ ನಡೆಸಿದಾಗ, ಮೂವರು ಬಾಲಕರು ಕೂಡ 10 ಲಕ್ಷ ರೂಪಾಯಿ ಹಣಕ್ಕಾಗಿ ವೈಭವ್‌ನನ್ನು ಅಪಹರಿಸಿ ಕೊಲೆಗೆ ಸಂಚು ರೂಪಿಸಿದ್ದನ್ನು ತಿಳಿಸಿದ್ದಾರೆ. " ಮಾ.23ರ ವೈಭವ್‌ನನ್ನು ಬೈಕ್ ರೈಡ್‌ಗೆಂದು ಕರೆದೊಯ್ದೆವು. ನಂತರ ಭಲಾಸ್ವಾ ಸರೋವರದ ಬಳಿಯ ನಿರ್ಜನ ಪ್ರದೇಶದಲ್ಲಿ ಚಾಕುವಿನಿಂದ ಹಲ್ಲೆ ಮಾಡಿ ಕೊಂದು, ಶವವನ್ನು ಕಾಡಿನಲ್ಲೇ ಬಿಟ್ಟು ಹೋದೆವು" ಎಂದು ಬಾಯ್ಬಿಟ್ಟಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

ಮಾ.24ರಂದು ವೈಭವ್‌ನ ಸಿಮ್ ಪಡೆದು ಆತನ ತಂದೆಗೆ ಕರೆ ಮಾಡಿ ಹಣಕ್ಕೆ ಬೇಡಿಕೆ ಇಟ್ಟಿದ್ದಾಗಿಯೂ ತಿಳಿಸಿದ್ದಾರೆ. ಈ ಮಾಹಿತಿ ಆಧರಿಸಿ ವಜೀರಾಬಾದ್ ಠಾಣೆಯ ಪೊಲೀಸರ ತಂಡ ಕಾಡಿಗೆ ಭೇಟಿ ನೀಡಿ, ಶವ ಪತ್ತೆ ಮಾಡಿದ್ದು, ಮೂವರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಿದೆ.

## ಭ್ರಷ್ಟಾಚಾರ: ಮಾಜಿಮು ಖ್ಯಮಂತಿ ಆತಿಶಿಗೆ ನೋಟಿಸ್ ಜಾರಿ ಮಾಡಿದ ದೆಹಲಿ ಹೈಕೋರ್ಟ್

**ನವದೆಹಲಿ:** ದೆಹಲಿ ವಿಧಾನಸಭಾ ಚುನಾವಣೆ ವೇಳೆ ಭ್ರಷ್ಟಾಚಾರ ನಡೆದಿದೆ ಎಂದು ಆರೋಪಿಸಿ ಮತ್ತು ಆಪ್ ನಾಯಕಿ ಅತಿಶಿ ಅವರು ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿ ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್ ಪ್ರತಿಪಕ್ಷ ನಾಯಕಿ ಹಾಗೂ ಮಾಜಿ ಮುಖ್ಯಮಂತ್ರಿ ಅತಿಶಿ ಅವರಿಗೆ ನೋಟಿಸ್ ಜಾರಿ ಮಾಡಿದೆ.

ನ್ಯಾಯಮೂರ್ತಿ ಜ್ಯೋತಿ ಸಿಂಗ್ ಅವರು, ಚುನಾವಣಾ ಆಯೋಗ, ದೆಹಲಿ ಪೊಲೀಸರು ಮತ್ತು ಅತಿಶಿ ಚುನಾವಣೆಯಲ್ಲಿ ಗೆಲುವು ಕಂಡ ವಿಧಾನಸಭಾ ಕ್ಷೇತ್ರ ಕಲ್ಕಾಜಿ ಚುನಾವಣಾ ಅಧಿಕಾರಿಗೆ ನೋಟಿಸ್ ಜಾರಿ ಮಾಡಿದೆ. ಈ ಪ್ರಕರಣದ ಕುರಿತು ಮುಂದಿನ ವಿಚಾರಣೆಯನ್ನು ಜುಲೈ 30ರಂದು ನಡೆಸುವುದಾಗಿ ನ್ಯಾಯಾಲಯ ತಿಳಿಸಿದೆ.

ಏನಿದು ಪ್ರಕರಣ: ಎಎಪಿ ನಾಯಕಿ, ದೆಹಲಿ ಮಾಜಿ ಸಿಎಂ ಅತಿಶಿ ಚುನಾವಣೆ ಸಂದರ್ಭದಲ್ಲಿ



ಭ್ರಷ್ಟಾಚಾರ ನಡೆಸಿದ್ದಾರೆ ಎಂಬ ಆರೋಪದ ಮೇಲೆ ಕಮಲ್‌ಜಿತ್ ಸಿಂಗ್ ದುಗ್ಗಲ್ ಮತ್ತು ಆಯುಷ್ ರಾಣಾ ಎಂಬುವರು ಅತಿಶಿ ಆಯ್ಕೆಯನ್ನು ಪ್ರಶ್ನಿಸಿ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ವಕೀಲರಾದ ಟಿ ಸಿಂಗ್‌ದೇವ್ ಮೂಲಕ ಸಲ್ಲಿಸಲಾದ ಅರ್ಜಿಯಲ್ಲಿ ಈ ಚುನಾವಣೆಯಲ್ಲಿನ ಅತಿಶಿ ಗೆಲುವನ್ನು ಅಸಿಂಧು ಎಂದು ಘೋಷಿಸುವಂತೆ ಕೋರಲಾಗಿತ್ತು. ಈ ಪ್ರಕರಣದ ವಿಚಾರಣೆಯನ್ನು ಇಂದು ಕೋರ್ಟ್ ಕೈಗೆತ್ತಿಕೊಂಡಿತು.

ಈ ಅರ್ಜಿ ವಿಚಾರಣೆ ವೇಳೆ ಭಾರತೀಯ ಚುನಾವಣಾ ಆಯೋಗ ಮತ್ತು ರಿಟರ್ನಿಂಗ್ ಅಧಿಕಾರಿಗಳು ಅರ್ಜಿಯಲ್ಲಿ ಪಕ್ಷಗಳಾಗಿ ಸೇರಿಸಿದ್ದಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಿದರು. ಫೆ.5ರಂದು ನಡೆದ ದೆಹಲಿ ವಿಧಾನಸಭಾ ಚುನಾವಣೆ ಫಲಿತಾಂಶ ಫೆ. 8ರಂದು ಹೊರಬಿದ್ದಿತ್ತು. ಕಲ್ಕಾಜಿ ಕ್ಷೇತ್ರದಿಂದ ಕಣಕ್ಕೆ ಇಳಿದಿದ್ದ ಅತಿಶಿ ತಮ್ಮ ಎದುರಾಳಿ ಬಿಜೆಪಿಯ ರಮೇಶ್ ಬಿಧುರಿ ವಿರುದ್ಧ 3,521 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದರು. ಅತಿಶಿ ವಿರುದ್ಧ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಕಲ್ಕಾಜಿ ಕ್ಷೇತ್ರದ ನಿವಾಸಿಗಳಾಗಿದ್ದಾರೆ.

## ಕೊಲೆ ಪ್ರಕರಣದಲ್ಲಿ ತಪ್ಪಾಗಿ ಶಿಕ್ಷೆಗೊಳಗಾಗಿದ್ದ ವ್ಯಕ್ತಿಗೆ 12 ಕೋಟಿ ರೂ. ಪರಿಹಾರ

**ಟೋಕಿಯೊ:** ಕೊಲೆ ಪ್ರಕರಣದಲ್ಲಿ ತಪ್ಪಾಗಿ ಶಿಕ್ಷೆಗೊಳಗಾದ ಜಪಾನಿನ ವ್ಯಕ್ತಿಗೆ 1.4 ಮಿಲಿಯನ್ ಡಾಲರ್ ಪರಿಹಾರ ನೀಡಲಾಗಿದೆ ಎಂದು ಅಧಿಕಾರಿಯೊಬ್ಬರು ಮಂಗಳವಾರ ತಿಳಿಸಿದ್ದಾರೆ. ಇವಾವೊ ಹಕಾಮಡಾ ಎಂಬುವರೇ ಇಷ್ಟೊಂದು ದೊಡ್ಡ ಮೊತ್ತದ ಪರಿಹಾರ ಪಡೆದ ವ್ಯಕ್ತಿಯಾಗಿದ್ದಾರೆ.

ಜೈಲಿನಲ್ಲಿ ಕಳೆದ ಪ್ರತಿದಿನಕ್ಕೆ 12,500 ಯೆನ್? ಪಡೆದ ವ್ಯಕ್ತಿ: 1966ರಲ್ಲಿ ನಡೆದ ನಾಲ್ವರ ಕೊಲೆ ಪ್ರಕರಣದಲ್ಲಿ ಹಕಾಮಡಾ ಅವರಿಗೆ ಮರಣ ದಂಡನೆ ಶಿಕ್ಷೆ ವಿಧಿಸಲಾಗಿತ್ತು. ಸದ್ಯ 89 ವರ್ಷ ವಯಸ್ಸಿನ ಮಾಜಿ ಬಾಕ್ಸರ್ ಹಕಾಮಡಾ ಸುಮಾರು ನಾಲ್ಕು ದಶಕ ಜೈಲಿನಲ್ಲಿ ಕಳೆದಿದ್ದಾರೆ. ಹಾಗೆ ಅವರು ಜೈಲಿನಲ್ಲಿ ಕಳೆದ ಪ್ರತಿಯೊಂದು ದಿನಕ್ಕೆ 12,500 ಯೆನ್?ಗಳಂತೆ ಲೆಕ್ಕಹಾಕಿ 1.4 ಮಿಲಿಯನ್ ಡಾಲರ್ ಪರಿಹಾರವನ್ನು



ಅವರಿಗೆ ಪಾವತಿಸಲಾಗಿದೆ. ಹಕಾಮಡಾ ಅವರ ಸಹೋದರಿ ಹಾಗೂ ಇನ್ನಿತರರ ಸತತ ಪ್ರಯತ್ನದ ನಂತರ ಅವರನ್ನು ಕೊಲೆ ಆರೋಪದಿಂದ ಖುಲಾಸೆಗೊಳಿಸಲಾಗಿದ್ದು, ಕಳೆದ ವರ್ಷ ಜೈಲಿನಿಂದ ಬಿಡುಗಡೆ ಮಾಡಲಾಗಿದೆ.

ಪೊಲೀಸರೇ ಸಾಕ್ಷ್ಯಗಳನ್ನ ತಿರುಚಿದ್ದಾರೆಂದು ಕೋರ್ಟ್ ತೀರ್ಪು: ಅರ್ಜಿದಾರನಿಗೆ 217,362,500,000 ಯೆನ್ ನೀಡಲಾಗುವುದು ಎಂದು ಶಿಜುವೊಕಾ ಜಿಲ್ಲಾ ನ್ಯಾಯಾಲಯವು ಸೋಮವಾರ ತೀರ್ಪು ನೀಡಿದೆ ಎಂದು ನ್ಯಾಯಾಲಯದ ವಕ್ತಾರರು ಮಾಧ್ಯಮಗಳಿಗೆ ತಿಳಿಸಿದ್ದಾರೆ. ಹಕಾಮಡಾ ಅವರ ಪ್ರಕರಣದ ಮರು ವಿಚಾರಣೆ ನಡೆಸಿದ್ದ ಇದೇ ನ್ಯಾಯಾಲಯವು ಅವರು ತಪ್ಪಿತಸ್ಥರಲ್ಲ ಮತ್ತು ಪೊಲೀಸರು ಸಾಕ್ಷ್ಯಗಳನ್ನು ತಿರುಚಿದ್ದಾರೆ ಎಂದು ತೀರ್ಪು ನೀಡಿತ್ತು.

ತಪ್ಪೊಪ್ಪಿಕೊಳ್ಳುವಂತೆ ಅಮಾನವೀಯ ವಿಚಾರಣೆ: ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಳ್ಳುವಂತೆ ಹಕಾಮಡಾ ಅವರ ವಿರುದ್ಧ ಅಮಾನವೀಯವಾಗಿ ವಿಚಾರಣೆ ನಡೆಸಲಾಗಿತ್ತು ಎಂದು ನ್ಯಾಯಾಲಯ ಆ ಸಮಯದಲ್ಲಿ ಹೇಳಿತ್ತು. ಹಕಾಮಡಾ ಅವರಿಗೆ ನೀಡಲಾದ ಪರಿಹಾರ ಮೊತ್ತವು ಜಪಾನ್ ಇತಿಹಾಸದಲ್ಲಿ ಒಂದು ದಾಖಲೆಯಾಗಿದೆ ಎಂದು ಸ್ಥಳೀಯ ಮಾಧ್ಯಮಗಳು ತಿಳಿಸಿವೆ.

ಹಕಾಮಡಾ ಅನುಭವಿಸಿದ ನೋವಿಗೆ ಈ ಮೊತ್ತ ಕಡಿಮೆಯೇ ಎಂದ ಜಡ್ಜ್: ಆದರೆ, ಅವರ ಕಾನೂನು ತಂಡವು ಹಕಾಮಡಾ ಅನುಭವಿಸಿದ ನೋವನ್ನು ಪರಿಗಣಿಸಿದರೆ ಪರಿಹಾರ ಮೊತ್ತ ಕಡಿಮೆಯಾಗಿದೆ ಎಂದು ಹೇಳಿದೆ. ಮರಣದಂಡನೆಯ ತೂಗುಗತ್ತಿಯೊಂದಿಗೆ ದಶಕಗಳ ಕಾಲ ಬಂಧನದಿಂದ ಹಕಾಮಡಾ ಅವರ ಮಾನಸಿಕ ಆರೋಗ್ಯದ ಮೇಲೆ ದೊಡ್ಡ ಪರಿಣಾಮ ಬೀರಿದೆ ಎಂದು ಅವರ ವಕೀಲರು ಹೇಳಿದ್ದಾರೆ. ಯುದ್ಧಾನಂತರದ ಜಪಾನ್ ಇತಿಹಾಸದಲ್ಲಿ ಮರುವಿಚಾರಣೆಗೆ ಒಳಗಾದ ಐದನೇ ಮರಣದಂಡನೆ ಕೈದಿಯಾಗಿದ್ದಾರೆ ಹಕಾಮಡಾ. ಹಿಂದಿನ ಎಲ್ಲಾ ನಾಲ್ಕು ಪ್ರಕರಣಗಳಲ್ಲಿಯೂ ಆರೋಪಿಗಳು ಖುಲಾಸೆಯಾಗಿದ್ದರು.

ಕ್ರೀಡೆ - ಸಿನಿಮಾ
ಮುಸ್ಸಂಜೆ



# ನ್ಯಾಚುರಲ್ ಸ್ಟಾರ್ ಜೊತೆ ಕೆಜಿಎಫ್ ಬೆಡಗಿ

ದಕ್ಷಿಣ ಚಿತ್ರರಂಗದ ಬಹುನಿರೀಕ್ಷಿತ 'ಹಿಟ್: ದಿ ಥರ್ಡ್ ಕೇಸ್'ನ ಮೊದಲ ಹಾಡು ಅನಾವರಣಗೊಂಡಿದೆ. ಶೈಲೇಶ್ ಕೊಲನು ಆ್ಯಕ್ಷನ್ ಕಟ್ ಹೇಳಿರುವ ಕ್ರೈಮ್ ಆ್ಯಕ್ಷನ್ ಥ್ರಿಲ್ಲರ್ ಮೇ 1ರಂದು ಚಿತ್ರಮಂದಿರ ಪ್ರವೇಶಿಸಲಿದೆ. ನ್ಯಾಚುರಲ್ ಸ್ಟಾರ್ ನಾನಿ ಹಾಗೂ ಕೆಜಿಎಫ್ ಬೆಡಗಿ ಶ್ರೀನಿಧಿ ಶೆಟ್ಟಿ ತೆರೆಹಂಚಿಕೊಂಡಿರುವ ಸಿನಿಮಾ ತನ್ನ ಪ್ರಚಾರ ಪ್ರಾರಂಭಿಸಿದ್ದು, ಇಂದು ಮೊದಲ ಹಾಡನ್ನು ಬಿಡುಗಡೆಗೊಳಿಸಲಿದೆ.

ಹೌದು, ಕಳೆದ ದಿನ ಸಾಂಗ್‌ನ ಪ್ರೋಮೋ ಅನಾವರಣಗೊಳಿಸುವ ಮೂಲಕ ಚಿತ್ರತಂಡ ಸಿನಿಪ್ರಿಯರಲ್ಲಿ ಕುತೂಹಲ ಮೂಡಿಸಿತ್ತು. ಇಂದು 'ಪ್ರೇಮ ವೆಲ್ಲುವ' ಅನಾವರಣಗೊಂಡಿದೆ. ಪ್ರೇಮಭರಿತ ಹಾಡು ಕೇಳುಗರ ಮನಮುಟ್ಟುವಂತಿದೆ. ಕೃಷ್ಣ ಕಾಂತ್ ಸಾಹಿತ್ಯ ಹೃದಯಸ್ಪರ್ಶಿಯಾಗಿದ್ದು, ಮಿಕಿ ಜೆ ಮೇಯರ್ ಸುಂದರ ಸಂಗೀತ ಒದಗಿಸಿದ್ದಾರೆ. ಸಿಡ್ ಶ್ರೀರಾಮ್, ನೂತನ್ ಮೋಹನ್ ಅವರ ಇಂಪಾದ ದನಿಯಲ್ಲಿ ಚಿತ್ರದ ಹಾಡು ಮೂಡಿಬಂದಿದೆ. 'ಪ್ರೇಮ ವೆಲ್ಲುವ' ಸದ್ಯ ಸಾಮಾಜಿಕ ಜಾಲತಾಣದಲ್ಲಿ ಸದ್ದು ಮಾಡುತ್ತಿದ್ದು, ಮೆಚ್ಚುಗೆ ವ್ಯಕ್ತವಾಗುತ್ತಿದೆ.

ಬ್ಲಾಕ್‌ಬಸ್ಟರ್ ಕೆಜಿಎಫ್ ಮೂಲಕ ಭಾರತದಾದ್ಯಂತ ಜನಪ್ರಿಯರಾಗಿರುವ ಶ್ರೀನಿಧಿ ಶೆಟ್ಟಿ ಅವರ ಮುಂದಿನ ಚಿತ್ರಕ್ಕಾಗಿ ಅಪಾರ ಸಂಖ್ಯೆಯ ಅಭಿಮಾನಿಗಳು, ಸಿನಿಪ್ರಿಯರು ಕಾತರರಾಗಿದ್ದಾರೆ. ಮುಂಬರುವ ಸಿನಿಮಾ ಯಾವಾಗ ತೆರೆಗಪ್ಪಳಿಸಲಿದೆ ಎಂದು ಕುತೂಹಲ ವ್ಯಕ್ತಪಡಿಸಿದ್ದಾರೆ. ಕೆಜಿಎಫ್ ಚೆಲುವೆಯನ್ನು ಮತ್ತೆ ಬಿಗ್ ಸ್ಕ್ರೀನ್‌ನಲ್ಲಿ ನೋಡುವ ಸಮಯ ಒದಗಿ ಬಂದಿದೆ.

ಇದೇ 2025ರ ಮೇ.1ರಂದು ಚಿತ್ರ ತೆರೆಗಪ್ಪಳಿಸಲಿದೆ. ಪ್ರಚಾರ ಭಾಗವಾಗಿ ಚಿತ್ರತಂಡ ತನ್ನ ಮೊದಲ ಹಾಡನ್ನು ಅನಾವರಣಗೊಳಿಸಿ ಪ್ರೇಕ್ಷಕರನ್ನು ತನ್ನತ್ತ ಸೆಳೆದುಕೊಂಡಿದೆ. ಇದೊಂದು ರೊಮ್ಯಾಂಟಿಕ್ ಸಾಂಗ್ ಆಗಿದ್ದು, ಶ್ರೀನಿಧಿ ಶೆಟ್ಟಿ ಹಾಗೂ ಸೌತ್ ಸೂಪರ್ ಸ್ಟಾರ್ ನಾನಿ ಅವರ ಕೆಮಿಸ್ಟ್ರಿ ಸಕತ್ತಾಗೇ ವರ್ಕ್ ಆಗಿದೆ.

ವಾಲ್ ಪೋಸ್ಟರ್ ಸಿನಿಮಾ ಬ್ಯಾನರ್ ಅಡಿಯಲ್ಲಿ ನಾನಿ ಮತ್ತು ಪ್ರಶಾಂತಿ ತಿಪಿರ್ನೇನಿ ಅವರು ಯುನಾನಿಮಸ್ ಪ್ರೊಡಕ್ಷನ್ಸ್ ಸಹಯೋಗದೊಂದಿಗೆ ನಿರ್ಮಿಸಿದ್ದಾರೆ. ಹಿಟ್ 3, ಹಿಟ್ ಫ್ರ್ಯಾಂಚೈಸಿಯನ್ನು ವಿಸ್ತರಿಸುವ ಭರವಸೆ ನೀಡಿದೆ. ಸನು ಜಾನ್ ವರ್ಗೀಸ್ ಅವರ ಕ್ಯಾಮರಾ ಕೈಚಳಕ, ಕಾರ್ತಿಕ ಶ್ರೀನಿವಾಸ್ ಆರ್ ಅವರ ಎಡಿಟಿಂಗ್ ಚಿತ್ರಕ್ಕಿದೆ. ನಾಗೇಂದ್ರ ತಂಗಳ ನಿರ್ಮಾಣ ವಿನ್ಯಾಸಕರು. ಆಕರ್ಷಕ ಕಥಾವಸ್ತು, ಆ್ಯಕ್ಷನ್–ಪ್ಯಾಕ್ಡ್ ಸೀಕ್ವೆನ್ಸ್‌ಗಳೊಂದಿಗೆ ಚಿತ್ರಪ್ರೇಮಿಗಳ ಗಮನ ಸೆಳೆದಿರುವ ಹಿಟ್ ಮೇ.1ರಂದು ತೆರೆಗಪ್ಪಳಿಸಲಿದ್ದು, ಎಷ್ಟರ ಮಟ್ಟಿಗೆ ಗೆಲುವು ಕಾಣಲಿದೆ ಅನ್ನೋದನ್ನು ಕಾದು ನೋಡಬೇಕಿದೆ. ಕೆಜಿಎಫ್‌ನಂತಹ ಬ್ಲಾಕ್‌ಬಸ್ಟರ್ ಚಿತ್ರದಲ್ಲಿ ಕಾಣಿಸಿಕೊಂಡಿರುವ ಶ್ರೀನಿಧಿ ಶೆಟ್ಟಿ ಅವರಿಗೆ ಈ ಗೆಲುವು ನಿರ್ಣಾಯಕ ಪಾತ್ರ ವಹಿಸಲಿದೆ.

# ಮಾ.30ಕ್ಕೆ 'ಸಿಕಂದರ್' ರಿಲೀಸ್

ಇಂಡಿಯನ್ ಸೂಪರ್ ಸ್ಟಾರ್‌ಗಳಾದ ಸಲ್ಮಾನ್ ಖಾನ್ ಹಾಗೂ ರಶ್ಮಿಕಾ ಮಂದಣ್ಣ ಅಭಿನಯದ ಬಹುನಿರೀಕ್ಷಿತ 'ಸಿಕಂದರ್' ಚಿತ್ರದ ನಿರ್ಮಾಪಕರು ಆ್ಯಕ್ಷನ್–ಪ್ಯಾಕ್ಡ್ ಡ್ರಾಮಾದ ಬಿಡುಗಡೆ ದಿನಾಂಕ ಘೋಷಿಸಿದ್ದಾರೆ.

ಮಾರ್ಚ್ 30ರಂದು (ಭಾನುವಾರ) ಚಿತ್ರಮಂದಿರಗಳಲ್ಲಿ ಅದ್ಧೂರಿಯಾಗಿ ಬಿಡುಗಡೆಯಾಗಲಿದೆ. ಎಆರ್ ಮುರುಗದಾಸ್ ನಿರ್ದೇಶನದ ಈ ಚಿತ್ರವನ್ನು ಸಾಜಿದ್ ನಾಡಿಯಾಡ್ವಾಲಾ ನಿರ್ಮಿಸಿದ್ದಾರೆ. 2014ರ ಹಿಟ್ ಸಿನಿಮಾ 'ಕಿಕ್' ಬಳಿಕ ಸಾಜಿದ್ ನಾಡಿಯಾಡ್ವಾಲಾ ಜೊತೆ ಸಲ್ಮಾನ್ ಕೈಜೋಡಿಸಿದ್ದು, ಇದು ಅವರ ವೃತ್ತಿಜೀವನದಲ್ಲಿ ಮಹತ್ವದ ಸಿನಿಮಾವಾಗಿದೆ.

ಈ ಬಾರಿ ಖ್ಯಾತ ನಟ ನಿರ್ಮಾಪಕರ ಕಾಂಬಿನೇಷನ್ ಎಷ್ಟರ ಮಟ್ಟಿಗೆ ವರ್ಕ್ ಆಗುತ್ತದೆ ಎಂಬುದನ್ನು ನೋಡಲು ಅಭಿಮಾನಿಗಳು ಕಾತರರಾಗಿದ್ದಾರೆ. ಸಲ್ಲು ಅಭಿನಯದ ಕೊನೆ ಚಿತ್ರ ಟೈಗರ್ 3 ನೀರಸ ಪ್ರತಿಕ್ರಿಯೆ ಸ್ವೀಕರಿಸಿತ್ತು. 2023ರಲ್ಲಿ ಈ ಚಿತ್ರ ಭಾನುವಾರ ಬಿಡುಗಡೆ ಆಗಿತ್ತು. 2 ವರ್ಷಗಳ ಹಿಂದೆ ದೀಪಾವಳಿ ಹಬ್ಬದ ಸಂದರ್ಭ ಟೈಗರ್ 3 ಭಾನುವಾರ ಬಿಡುಗಡೆಯಾಗಿ ಹಿನ್ನಡೆ ಕಂಡಿತ್ತು.

ಇದು ಅಸಾಂಪ್ರದಾಯಿಕ ಆಯ್ಕೆ ಆಗಿತ್ತು. ಏಕೆಂದರೆ ಸಿನಿಮಾಗಳು ಸಾಮಾನ್ಯವಾಗಿ ಲಾಭ ಮಾಡೋ ನಿಟ್ಟಿನಲ್ಲಿ ವಾರಾಂತ್ಯವನ್ನು ಆಧರಿಸಿ ಶುಕ್ರವಾರ ಬಿಡುಗಡೆಯಾಗುತ್ತವೆ. ಆದರೆ ಟೈಗರ್ 3 ಭಾನುವಾರ ಬಿಡುಗಡೆ ಆಗಿತ್ತು. ಇದೀಗ, ಸಿಕಂದರ್ ಚಿತ್ರವನ್ನೂ ಭಾನುವಾರವೇ ರಿಲೀಸ್ ಮಾಡಲಾಗುತ್ತಿದೆ.



ಭಾನುವಾರವೇ ಏಕೆ ಬಿಡುಗಡೆ?: ಭಾನುವಾರ ಬಿಡುಗಡೆಯಾದ ಟೈಗರ್ 3 ನಿರೀಕ್ಷಿತ ರಿಸಲ್ಟ್ ನೀಡಲಿಲ್ಲ. ಆರಂಭದಲ್ಲಿ ಉತ್ತಮ ಕಲೆಕ್ಷನ್ ಇದ್ದರೂ, ನಂತರ ಪ್ರೇಕ್ಷಕರನ್ನು ಹಿಡಿದಿಟ್ಟುಕೊಳ್ಳಲು ವಿಫಲವಾಯಿತು. ಪರಿಣಾಮವಾಗಿ ಕಲೆಕ್ಷನ್ ಕುಸಿತ ಕಂಡಿತು. ಇದೀಗ, ಸಿಕಂದರ್ ಕೂಡಾ ಭಾನುವಾರದಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಮಹಾರಾಷ್ಟ್ರದಲ್ಲಿ ಗುಡಿ ಪಾಡ್ವಾ ಹಬ್ಬ ಮತ್ತು ಮಾರ್ಚ್ ಕೊನೆಯಲ್ಲಿ ಬರುವ ಈದ್ ಆಚರಣೆಯನ್ನು ಗಮನದಲ್ಲಿಟ್ಟುಕೊಂಡು ಬಿಡುಗಡೆಯನ್ನು ಭಾನುವಾರಕ್ಕೆ ನಿಗದಿಪಡಿಸಲಾಗಿದೆ.

ರಿಲೀಸ್ ಡೇಟ್ ಹಂಚಿಕೊಂಡ ನಟ: ಬಿಡುಗಡೆ ದಿನಾಂಕವನ್ನು ಹಂಚಿಕೊಂಡ ನಾಯಕ ನಟ ಸಲ್ಮಾನ್ ಖಾನ್, "ಮಾರ್ಚ್ 30ರಂದು ವಿಶ್ವಾದ್ಯಂತ ಚಿತ್ರಮಂದಿರಗಳಲ್ಲಿ ನಿಮ್ಮನ್ನು ಭೇಟಿಯಾಗುತ್ತೇವೆ. ಸಾಜಿದ್ ನಾಡಿಯಾಡ್ವಾಲಾ ನಿರ್ಮಾಣದ ಸಿಕಂದರ್ ಚಿತ್ರಕ್ಕೆ ಎಆರ್ ಮುರುಗಾದಾಸ್ ಅವರ ನಿರ್ದೇಶನವಿದೆ" ಎಂದು ಬರೆದುಕೊಂಡಿದ್ದಾರೆ. ಆ್ಯಕ್ಷನ್–ಪ್ಯಾಕ್ಡ್ ಕಥಾಹಂದರದ ಚಿತ್ರದಲ್ಲಿ ರಶ್ಮಿಕಾ ಮಂದಣ್ಣ ಗಮನಾರ್ಹ ಪಾತ್ರ ನಿರ್ವಹಿಸಿದ್ದರೆ, ಸತ್ಯರಾಜ್ ಎದುರಾಳಿಯಾಗಿ ನಟಿಸಿದ್ದಾರೆ.

ಚಿತ್ರ ಮುಂಬೈ ಮತ್ತು ಹೈದರಾಬಾದ್‌ನ ಅನೇಕ ಸ್ಥಳಗಳಲ್ಲಿ ಚಿತ್ರೀಕರಣಗೊಂಡಿದೆ. ಇದೇ ಮೊದಲ ಬಾರಿಗೆ ರಶ್ಮಿಕಾ ಮಂದಣ್ಣ, ಸಲ್ಮಾನ್ ಖಾನ್ ಜೊತೆ ತೆರೆ ಹಂಚಿಕೊಂಡಿದ್ದಾರೆ. ಇಬ್ಬರೂ ಅಪಾರ ಸಂಖ್ಯೆಯ ಅಭಿಮಾನಿಗಳನ್ನು ಹೊಂದಿರುವ ಕಲಾವಿದರು. ಛಾವಾ ಚಿತ್ರದ ಯಶಸ್ಸಿನಲೆಯಲ್ಲಿರುವ ರಶ್ಮಿಕಾಗೆ ಮತ್ತೊಂದು ಹಿಟ್ ಸಿಗುವ ಭರವಸೆ ಇದೆ.

# ಮಿಲ್ಕಿ ಬ್ಯೂಟಿ; ಸಿಟ್ಟಾದ ನಟಿ

ನಟಿ ತಮನ್ನಾ ಭಾಟಿಯಾ ದಕ್ಷಿಣ ಭಾರತೀಯ ಚಲನಚಿತ್ರೋದ್ಯಮದ ಜೊತೆಗೆ ಬಾಲಿವುಡ್‌ನಲ್ಲಿ ತಮ್ಮದೇ ಆದ ವಿಶೇಷ ಛಾಪು ಮೂಡಿಸಿದ್ದಾರೆ.

ಅವರು ಶೀಘ್ರದಲ್ಲೇ 'ಒಡೆಲ್ಲಾ 2 ಚಿತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಚಿತ್ರಕ್ಕಾಗಿ ಆಯೋಜಿಸಲಾದ ಪತ್ರಿಕಾಗೋಷ್ಠಿಯಲ್ಲಿ, ತಮನ್ನಾ ಒಬ್ಬ ಪತ್ರಕರ್ತನೊಂದಿಗೆ ಸಿಟ್ಟಾಗಿರುವುದು ಕಂಡುಬಂದಿತು. ಏಕೆಂದರೆ ಒಬ್ಬ ಪತ್ರಕರ್ತೆ ಅವರನ್ನು 'ಮಿಲ್ಕಿ ಬ್ಯೂಟಿ' ಎಂದು ಕರೆದರು. ಇದು ತಮನ್ನಾರ ಕೋಪವನ್ನು ಹೆಚ್ಚಿಸಿತು. ಈ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆಗಳು ನಡೆಯುತ್ತಿವೆ.

ಪತ್ರಿಕಾಗೋಷ್ಠಿಯಲ್ಲಿ ಮಹಿಳಾ ಪತ್ರಕರ್ತೆಯೊಬ್ಬರು ನಿರ್ದೇಶಕ ಅಶೋಕ್ ತೇಜ ಅವರನ್ನು 'ಶಿವಶಕ್ತಿ ಪಾತ್ರಕ್ಕೆ ನೀವು ಮಿಲ್ಕಿ ಬ್ಯೂಟಿ ಅವರನ್ನು ಏಕೆ ಆಯ್ಕೆ ಮಾಡಿಕೊಂಡಿದ್ದೀರಿ?' ಎಂದು ಕೇಳಿದರು. ತಮನ್ನಾಗೆ ಈ ಪ್ರಶ್ನೆ ಇಷ್ಟವಾಗಲಿಲ್ಲ ಮತ್ತು ನಿರ್ದೇಶಕರ ಬದಲಿಗೆ ಅವರೇ ಮೊದಲು ಉತ್ತರಿಸಿದರು.

'ಉತ್ತರ ನಿಮ್ಮ ಪ್ರಶ್ನೆಯಲ್ಲಿದೆ. ಅವರು ಹಾಲಿನ ಸೌಂದರ್ಯವನ್ನು ನಾಚಿಕೆಪಡುವ ವಿಷಯವೆಂದು ನೋಡುವುದಿಲ್ಲ. ಮಹಿಳೆಗೆ ಗ್ಲಾಮರ್ ಇರುವುದು ಒಳ್ಳೆಯದು. ಅದಕ್ಕಾಗಿ, ನಾವು ಮಹಿಳೆಯರು ನಮ್ಮನ್ನು ನಾವು ಮೆಚ್ಚಿಕೊಳ್ಳಬೇಕು. ಆಗ ಮಾತ್ರ ನಾವು ಇತರರಿಂದ ಗೌರವ ಮತ್ತು ಮೆಚ್ಚುಗೆಯನ್ನು ನಿರೀಕ್ಷಿಸಬಹುದು. ನಾವು ನಮ್ಮನ್ನು ಗೌರವಿಸದಿದ್ದರೆ, ಬೇರೆ ಯಾರೂ ನಮಗಾಗಿ ಅದನ್ನು ಮಾಡುವುದಿಲ್ಲ' ಎಂದು ತಮನ್ನಾ ಸ್ಪಷ್ಟವಾಗಿ



# 'ಯಲ್ಲಮ್ಮ' ಸಿನಿಮಾದಿಂದ ಹೊರನಡೆದ ಸಾಯಿ ಪಲ್ಲವಿ



ಸಾಯಿ ಪಲ್ಲವಿ ಸಿನಿಮಾಗಳ ಆಯ್ಕೆಯಲ್ಲಿ ಬಹಳ ಎಚ್ಚರಿಕೆವಹಿಸುತ್ತಾರೆ. ಪ್ರತಿದಿನವೂ ಅವರಿಗೆ ಕತೆ ಹೇಳಲು ನಿರ್ದೇಶಕರು ಸಾಲುಗಟ್ಟಿರುತ್ತಾರೆ, ಅಡ್ವಾನ್ಸ್ ನೀಡಲು ಕನಿಷ್ಟ 20 ನಿರ್ಮಾಪಕರು ರೆಡಿಯಾಗಿದ್ದಾರೆ. ಆದರೆ ಸಾಯಿ ಪಲ್ಲವಿ ಆದ್ಯತೆ ಏನಿದ್ದರು ಕತೆಗೆ ಮತ್ತು ತಮ್ಮ ಪಾತ್ರಕ್ಕೆ. ಕೇವಲ ಮರ ಸುತ್ತುವ, ಹಾಡುಗಳಲ್ಲಿ ಮಾತ್ರ ಕಾಣಿಸಿಕೊಳ್ಳುವ ನಾಯಕಿಯ ಪಾತ್ರವನ್ನು ಅವರು ಒಪ್ಪುವುದಿಲ್ಲ. ಪಾತ್ರ ಗಟ್ಟಿಯಾಗಿದ್ದರೆ ಮಾತ್ರವೇ ಸಾಯಿ ಪಲ್ಲವಿ ಸಿನಿಮಾದಲ್ಲಿ ನಟಿಸಲು ಒಪ್ಪಿಕೊಳ್ಳುತ್ತಾರೆ ಇಲ್ಲವಾದರೆ ಇಲ್ಲ. ಆದರೆ ಇತ್ತೀಚೆಗೆ ಸಿನಿಮಾ ಒಂದರಲ್ಲಿ ನಟಿಸಲು ಒಪ್ಪಿಕೊಂಡಿದ್ದ ಸಾಯಿ ಪಲ್ಲವಿ ಆ ನಂತರ ಸಿನಿಮಾದಿಂದ ಹೊರಗೆ ಹೋಗಿದ್ದಾರೆ.

'ಯಲ್ಲಮ್ಮ' ಹೆಸರಿನ ಸಿನಿಮಾದಲ್ಲಿ ನಟಿಸಲು ಸಾಯಿ ಪಲ್ಲವಿ ಒಪ್ಪಿಕೊಂಡಿದ್ದರು. ಈ ಹಿಂದೆ 'ಬಲಗಂ' ಅಂಥಹಾ ಅದ್ಭುತ ಸಿನಿಮಾ ನಿರ್ದೇಶಿಸಿದ್ದ ವೇಣು ಯಲದಂಡಿ ಅವರು ಈ ಸಿನಿಮಾ ನಿರ್ದೇಶನ ಮಾಡುತ್ತಿದ್ದು, ಸಿನಿಮಾದ ಕತೆ ಇಷ್ಟವಾಗಿ ಸಾಯಿ ಪಲ್ಲವಿ ಓಕೆ ಹೇಳಿದ್ದರು. ಸಿನಿಮಾಕ್ಕೆ ದಿಲ್ ರಾಜು ಬಂಡವಾಳ ಹೂಡುತ್ತಿದ್ದು, ಸಿನಿಮಾದಲಿ ನಾಯಕನಾಗಿ 'ಜಯಂ' ಖ್ಯಾತಿಯ ನಿತಿನ್ ನಟಿಸುತಿದಾರೆ. ಸಿನಿಮಾದ ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿರುವ ಸಮಯದಲ್ಲಿ ಹಠಾತ್ತನೆ ಸಾಯಿ ಪಲ್ಲವಿ ಸಿನಿಮಾದಿಂದ ಹೊರಗೆ ನಡೆದಿದ್ದಾರೆ.

'ಯಲ್ಲಮ್ಮ' ಸಾಮಾಜಿಕ ಕಥಾಹಂದರ ಇರುವ ಸಿನಿಮಾ ಆಗಿದ್ದು, ಸಿನಿಮಾದಲ್ಲಿ ನಾಯಕಿಯದ್ದೇ ಪ್ರಧಾನ ಪಾತ್ರವಂತೆ. ಅದೇ ಕಾರಣಕ್ಕೆ ಸಿನಿಮಾ ತಂಡ ಸಾಯಿ ಪಲ್ಲವಿ ಅವರನ್ನು ನಾಯಕಿಯಾಗಿ ಆಯ್ಕೆ ಮಾಡಿದ್ದರು. ಸಾಯಿ ಪಲ್ಲವಿಗೂ ಸಹ ಕತೆ ಬಹಳ ಇಷ್ಟವಾಗಿತ್ತು. ನಿತಿನ್ ಜೊತೆಗೆ ಮೊದಲ ಬಾರಿಗೆ ನಟಿಸಲು ಒಪ್ಪಿಕೊಂಡಿದ್ದರು. ಆದರೆ, ಡೇಟ್ಸ್ ಸಮಸ್ಯೆಯಿಂದಾಗಿ ಸಾಯಿ ಪಲ್ಲವಿ ಅನಿವಾರ್ಯವಾಗಿ ಸಿನಿಮಾದಿಂದ ಹೊರಗೆ ಬಂದಿದ್ದಾರೆ.

ಸಾಯಿ ಪಲ್ಲವಿ ಇದೀಗ ಭಾರಿ ಬಜೆಟ್ ಸಿನಿಮಾ 'ರಾಮಾಯಣ'ದಲ್ಲಿ ನಟಿಸುತ್ತಿದ್ದಾರೆ. ಅದರ ಜೊತೆಗೆ ಇನ್ನೂ ಹಲವು ಸಿನಿಮಾಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹಾಗಾಗಿ ಅವರಿಗೆ ಡೇಟ್ಸ್ ಸಮಸ್ಯೆ ಎದುರಾಗಿದ್ದು, 'ಯಲ್ಲಮ್ಮ' ಸಿನಿಮಾದಲ್ಲಿ ನಟಿಸಲು ಇಷ್ಟವಿದ್ದರೂ ಅನಿವಾರ್ಯವಾಗಿ ಹೊರಬಂದಿದ್ದಾರೆ.

ಆದರೆ 'ಯಲ್ಲಮ್ಮ' ಚಿತ್ರತಂಡ ಪ್ರೀ ಪ್ರೊಡಕ್ಷನ್ ನಿಲ್ಲಿಸಿಲ್ಲ, ಸಾಯಿ ಪಲ್ಲವಿ ಹೊರಹೋದರೂ ಸಹ ಮತ್ತೊಬ್ಬ ಸ್ಟಾರ್ ನಟಿಯನ್ನೇ ಸಿನಿಮಾಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ.

'ಯಲ್ಲಮ್ಮ' ಸಿನಿಮಾದ ಪಾತ್ರ ಗಟ್ಟಿ ಪಾತ್ರವಾಗಿದ್ದು ನುರಿತ ನಟಿಯೇ ಪಾತ್ರಕ್ಕೆ ಬೇಕಾಗಿದ್ದ ಕಾರಣ, ರಾಷ್ಟ್ರಪ್ರಶಸ್ತಿ ವಿಜೇತ ನಟಿ ಕೀರ್ತಿ ಸುರೇಶ್ ಅವರನ್ನು ನಾಯಕಿಯಾಗಿ ಆಯ್ಕೆ ಮಾಡಿದ್ದಾರೆ

ನಿರ್ದೇಶಕ ವೇಣು. ಕೀರ್ತಿ ಸುರೇಶ್ ಈ ಮೊದಲು ನಟ ನಿತಿನ್ ಜೊತೆಗೆ ಕೆಲ ಸಿನಿಮಾಗಳಲ್ಲಿ ನಟಿಸಿದ್ದಾರೆ. ಈಗ ಮತ್ತೊಮ್ಮೆ ನಿತಿನ್ ಜೊತೆಗೆ ತೆರೆ ಹಂಚಿಕೊಳಲಿದಾರೆ ನಟಿ.

Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878